# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಸೆಪ್ಟಂಬರ್, ೨೦೨೧ ಸಂಪಾದಕ : ಡಿ. ಎಸ್. ನಾಗಭೂಷಣ ಸಂಪುಟ: ೧೦ ಸಂಚಿಕೆ: ೮

ಚಂದಾ ರೂ. ೨೦೦/- (೨೦೨೧ರ ಏಪ್ರಿಲ್‌ನಿಂದ ೨೦೨೨ರ ಮಾರ್ಚ್‌ವರೆಗೆ) ಸಂಸ್ಥೆಗಳಿಗೆ ರೂ. ೩೦೦/- ಪುಟ: ೨೦ ಬೆಲೆ: ರೂ. ೨೫/-

ವಿಳಾಸ: ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

ದೂ: ೦೮೧೮೨-೨೪೮೫೭೪ ಸಂಚಾರಿ: ೯೪೪೯೨ ೪೨೨೮೪ ಈ ಮೇಲ್: dsnagabhushana@gmail.com

## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೆ,

ಪರಕಾಲ ಪ್ರಭಾಕರ ಅವರ ಹೆಸರನ್ನು ನಿಮ್ಮಲ್ಲಿ ಬಹಳ ಜನ ಕೇಳಿರಲಾರಿರಿ. ಅವರು ನಮ್ಮ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಪತಿ. ಬಹುಶ್ರುತ ವಿದ್ವಾಂಸರಾದ ಈ ಸೀತಾರಾಮನ್ ಕೆಲ ಸಮಯದಿಂದ ಸಮೂಹ ಮಾಧ್ಯಮಗಳ ವಾಹಿನಿಯೊಂದರಲ್ಲಿ ಪ್ರತಿ ಬುಧವಾರ ಮಧ್ಯಾಹ್ನ 'ಮಿಡ್‌ವೀಕ್ ಮ್ಯಾಟರ್ಸ್' ಎಂಬ ಸಾಪ್ತಾಹಿಕ ವಿಶ್ಲೇಷಣೆಯೊಂದನ್ನು ನೀಡುತ್ತಾರೆ. ಸಮಕಾಲೀನ ರಾಜಕೀಯವನ್ನೇ ಹೆಚ್ಚಾಗಿ ಒಳಗೊಂಡ ಈ ವಿಶ್ಲೇಷಣೆ ನಾನು ಈವರೆಗೆ ಕೇಳಿರುವ ಅತ್ಯುತ್ತಮ ರಾಜಕೀಯ ವಿಶ್ಲೇಷಣೆ ಎಂದು ಹೇಳಬಲ್ಲೆ. ಮೋದಿ ಸರ್ಕಾರದ ಕಟು ಟೀಕಾಕಾರರಾದ ಇವರು ಸಕಲ ಮಾಹಿತಿ ಸಂಪನ್ಮೂಲಗಳ ಮೂಲಕ ತಮ್ಮ ತೀರ್ಮಾನ-ಅಭಿಪ್ರಾಯ-ನಿಲುವನ್ನು ತಣ್ಣಗೆ ಮಂಡಿಸುತ್ತಾರೆ. ಇವರ ನಿರೂಪಣೆಯ ಗತಿ ಲಯಗಳು ಎಷ್ಟು ಸಾವಧಾನದಿಂದ ಕೂಡಿರುತ್ತವೆ ಎಂದರೆ, ಅವರಿಂದ ಟೀಕೆಗೊಳಗಾದವರೇ ಅದನ್ನು ಕೇಳಿ ತಲೆದೂಗುವಂತಿರುತ್ತದೆ. ತನ್ನ ಪಾತ್ರಗಳ ನಡುವೆ ಶಾಂತವಾಗಿ ಹರಿಯುವ ನದಿಯಂತೆ ಇವರ ವಿಶ್ಲೇಷಣೆಗಳನ್ನು ಕೇಳಿದ ಆರೆಸ್ಸೆಸ್ ನಾಯಕರೊಬ್ಬರು ಅವರಿಗೆ ಕರೆ ಮಾಡಿ ಕೇಂದ್ರ ಸರ್ಕಾರ ನಿಮ್ಮ ಕಾರ್ಯಕ್ರಮಗಳನ್ನು ಕೇಳಿ ಅದರಂತೆ ನಡೆಯಬೇಕು; ಇಲ್ಲದಿದ್ದರೆ ನಿಮ್ಮನ್ನು ಬಂಧಿಸಿ ಸೆರೆಮನೆಯಲ್ಲಿಡಬೇಕು. ಆದರೆ ಈ ಸರ್ಕಾರ ಇವುಗಳಲ್ಲಿ ಯಾವುದೊಂದನ್ನೂ ಮಾಡುತ್ತಿಲ್ಲ! ಎಂದು ಮಾರ್ಮಿಕವಾಗಿ ನಕ್ಕರಂತೆ!

ಇಂತಹ ಸೀತಾರಾಮನ್ ತಮ್ಮ ಇತ್ತೀಚಿನ ವಿಶ್ಲೇಷಣೆಯೊಂದರಲ್ಲಿ ಮೋದಿಯವರು ೨೦೧೪ರ ಆಗಸ್ಟ್ ೧೫ರ ಭಾಷಣದಿಂದ ಹಿಡಿದು ಪ್ರಸ್ತುತ ೨೦೨೧ರ ಆಗಸ್ಟ್ ೧೫ರ ತನಕದ ಭಾಷಣಗಳನ್ನು ಅಧ್ಯಯನ ಮಾಡಿ ಮೋದಿ ಹೇಗೆ ಈ ಏಳು ವರ್ಷಗಳಲ್ಲಿ ಜನರನ್ನು ಜಾಣ ಮಾತುಗಾರಿಕೆಯ ಮೂಲಕ ತಮ್ಮ ರಾಜಕೀಯ ದಾರಿಯನ್ನು ಬದಲಿಸುತ್ತಾ ಹೇಗೆ ಅಪಾಯಕಾರಿಯಾಗಿ ಕಾಣತೊಡಗಿದ್ದಾರೆ ಎಂಬುದನ್ನು ಬಹು ಪರಿಣಾಮಕಾರಿಯಾಗಿ ವಿವರಿಸಿದ್ದಾರೆ.(ಈ ವಿಶ್ಲೇಷಣೆ ಈಗಲೂ ಯೂ ಟ್ಯೂಬ್‌ನಲ್ಲಿ ಲಭ್ಯವಿದ್ದು ಆಸಕ್ತರು ಕೇಳಬಹುದು.) ೨೦೧೪ರ ತಮ್ಮ ಭಾಷಣದಲ್ಲಿ ತಮ್ಮ ಹಿಂದಿನ ಎಲ್ಲ ಸರ್ಕಾರಗಳ ಸಾಧನೆ ಮತ್ತು ಪ್ರಧಾನ ಮಂತ್ರಿಗಳ ನಾಯಕತ್ವದ ಗರಿಮೆಗಳನ್ನೂ, ಜೊತೆಗೆ ರಾಷ್ಟ್ರದ ಅಂದಿನ ಸಾಧನೆಗೆ ಆವರೆಗಿನ ಎಲ್ಲ ರಾಜ್ಯ ಸರ್ಕಾರಗಳ ಮತ್ತು ಮುಖ್ಯಮಂತ್ರಿಗಳ ಕೊಡುಗೆಗಳನ್ನು ಸ್ಮರಿಸಿ ಮುಂದುವರೆದಿದ್ದರು. ದೇಶವನ್ನು ಸಹಕಾರಿ ಒಕ್ಕೂಟ ತತ್ವದ ಆಧಾರದ ಮೇಲೆ ನಡೆಸಿಕೊಂಡು ಹೋಗುವುದಾಗಿ ಹೇಳಿದ್ದರು. ಆದರೆ ಮುಂದಿನ ವರ್ಷಗಳ ಭಾಷಣಗಳಲ್ಲಿ ಇವೆಲ್ಲ ನಿಧಾನವಾಗಿ ಹಿಂದಕ್ಕೆ ಸರಿಯುತ್ತಾ ತಾನು, ತನ್ನ ಸರ್ಕಾರ, ತನ್ನ ಪಕ್ಷ, ಅದರ ಹೊಸ ಕಾರ್ಯಕ್ರಮಗಳ ಪ್ರಚಾರ ಮುನ್ನೆಲೆಗೆ ಬಂದವು. ಹೊರಗೆ ಇವರು ಕೃತಜ್ಞತೆಯಿಂದ ಸ್ಮರಿಸಿದ್ದ ರಾಷ್ಟ್ರದ ಹಿರಿಯ ನಾಯಕರನ್ನು ಆಯ್ದು ಅವರ ಅವಹೇಳನ ಶುರುವಾಯಿತು. ಸರ್ಕಾರ ತುಟಕ್ ಪಿಟಕ್ ಎನ್ನಲಿಲ್ಲ. ನಂತರ ಮೋದಿ ಸರ್ಕಾರದ ಕಾರ್ಯಕ್ರಮಗಳಲ್ಲಿ ನೋಟುಗಳ ಅಮಾನ್ಯೀಕರಣ ಸೇರಿ ಬಹುತೇಕ ಕಾರ್ಯಕ್ರಮಗಳು ನೆಲ ಬಿಟ್ಟು ಮೇಲೇಳಲೇ ಆಗದಂತಹ ಕೇವಲ ಬಾಯಿಬಡುಕ ಕಾರ್ಯಕ್ರಮಗಳಾಗಿ ದೇಶದ ಆರ್ಥಿಕತೆ ಹಿಂದೆಂದೂ ಇಲ್ಲದಷ್ಟು ಪ್ರಮಾಣದಲ್ಲಿ ಕುಸಿಯತೊಡಗಿದಾಗ ತಮ್ಮ ಭಾಷಣಗಳಲ್ಲಿ ಸ್ಟಾರ್ಟ್ ಅಪ್ ಇಂಡಿಯಾ, ಮೇಕ್ ಇನ್ ಇಂಡಿಯಾ, ಸ್ಟಾಂಡ್ ಅಪ್ ಇಂಡಿಯಾ, ಸ್ಕಿಲ್ ಇಂಡಿಯಾ ಮುಂತಾದ ಕಾರ್ಯಕ್ರಮಗಳ ಸೊಲ್ಲೇ ಇಲ್ಲವಾಯಿತು. ವಿದೇಶಿ ಬ್ಯಾಂಕುಗಳಲ್ಲಿದ್ದ ಕಳ್ಳ ಹಣವನ್ನು ಭಾರತಕ್ಕೆ ತಂದು ಜನರಿಗೆ ಹಂಚುವ, ವಿಜಯ ಮಲ್ಯ, ನೀರವ್‌ಮೋದಿಗಳನ್ನು ಭಾರತಕ್ಕೆ ಕರೆತಂದು ವಿಚಾರಣೆ ನಡೆಸುವ, ರೈತರ ಆದಾಯವನ್ನು ದುಪ್ಪಟ್ಟು ಮಾಡುವ, ಲಕ್ಷ ಲಕ್ಷ ಉದ್ಯೋಗ ನಿರ್ಮಿಸುವ ವೀರಾವೇಶದ ಮಾತುಗಳೆಲ್ಲ ಮುಂದಿನ ಭಾಷಣಗಳಲ್ಲಿ ಒಂದೊಂದಾಗಿ ಅಡಗಿ ಹೋದವು. ಕಳೆದ ವರ್ಷದ ಕೆಂಪುಕೋಟೆ ಭಾಷಣದಲ್ಲಿ ಕೋವಿಡ್ ಮೇಲೆ ಜಯ ಸಾಧಿಸಿದ್ದ ವಿಜಯದ ಘೋಷಣೆ ಮೊಳಗಿತ್ತು.

ಮೊನ್ನೆ ಆಗಸ್ಟ್ ೧೫ರಂದು ಸ್ವಲ್ಪ ತಡವಾಗಿ ಮೋದಿಯವರ ಕೆಂಪುಕೋಟೆ ಮೇಲಿನ ಭಾಷಣವನ್ನು ಕೇಳತೊಡಗಿದಾಗ ಮೋದಿಯವರು ಸಾವಿರಾರು ಜನ ಅನಾಥರಾಗಿ ಸತ್ತು ಸೂಕ್ತ ಸಂಸ್ಕಾರಗಳಿಲ್ಲದೆ ಈ ಭೂಮಿಯಿಂದ ನಿರ್ಗಮಿಸಬೇಕಾದ ದಾರುಣ ಪರಿಸ್ಥಿತಿಯ ಬಗ್ಗೆ ಮಾತಾಡುತ್ತಿದ್ದಾಗ ಅವರು ವೇಗವಾಗಿ ಪಸರಿಸಿದ ಕೋವಿಡ್‌ನಿಂದಾಗಿ ಆಸ್ಪತ್ರೆಗಳಲ್ಲಿ ಹಾಸಿಗೆಗಳಿಲ್ಲದೆ ಬೀದಿಗಳಲ್ಲಿ ಮಲಗಿಯೋ, ಹಾಸಿಗೆ ಸಿಕ್ಕೂ ಆಮ್ಲಜನಕ ಇಲ್ಲದೆ ಸತ್ತ ಜನರ ಬಗ್ಗೆ, ರಾಶಿ ರಾಶಿ ಜನ ಹುಳುಗಳಂತೆ ಸತ್ತಾಗ ಆಪ್ತರು ಏನು ಮಾಡಲೂ ತೋಚದೆ ಶವಗಳನ್ನು ಸೂಕ್ತ ಸಂಸ್ಕಾರಗಳಿಲ್ಲದೆ ನದಿಗಳಿಗೆ ಎಸೆದ ಅಥವಾ ನದಿಗಳ ಮರಳ ರಾಶಿಯಲ್ಲಿ ಹೂತು ಹೋದ ಸಂದರ್ಭವನ್ನು ನೆನಪಿಸಿಕೊಳ್ಳುತ್ತಿದ್ದಾರೆಂದು ಭಾವಿಸಿದ ಪರಕಾಲ ಪ್ರಭಾಕರರಿಗೆ ಕೆಲವೇ ನಿಮಿಷಗಳ ಮುಂದಿನ ಮಾತುಗಳನ್ನು ಕೇಳಿ ಬೆಚ್ಚು ಬೀಳುವಂತಾಯಿತಂತೆ. ಏಕೆಂದರೆ ಸೂಕ್ತ ಸಂಸ್ಕಾರವಿಲ್ಲದೆ ಸಾವಿರಾರು ಜನ ಈ ಭೂಮಿಯಿಂದ ನಿರ್ಗಮಿಸುವ ಬಗ್ಗೆ ಮೋದಿ ಮಾತಾಡುತ್ತಿದ್ದುದು ಕೋವಿಡ್ ದುರಂತಕ್ಕೆ ಸಂಬಂಧಸಿದಂತೆ ಅಲ್ಲ. ೭೫ ವರ್ಷಗಳ ಹಿಂದೆ ನಡೆದ ರಾಷ್ಟ್ರ ವಿಭಜನೆಯ ದುರಂತದ ಬಗ್ಗೆ! ನಮ್ಮ ಈ ಬಾರಿಯ ೭೫ನೇ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ನಮ್ಮ ದೇಶದ ಪ್ರಧಾನ ಮಂತ್ರಿಗಳಿಗೆ ನೆನಪಿಗೆ ಬಂದದ್ದು ಎರಡು ಧರ್ಮಗಳ ಜನ ರಾಕ್ಷಸರಂತೆ ವರ್ತಿಸುತ್ತಾ ಪರಸ್ಪರರನ್ನು ಭೀಕರವಾಗಿ ಕೊಂದ, ಅತ್ಯಾಚಾರಗಳನ್ನೆಸಗಿದ ಆ ದುರದೃಷ್ಟಕರ ರಕ್ತಸಿಕ್ತ ಘಟನೆ. ಈ ನೆನಪನ್ನು ಅವರು ಅಷ್ಟಕ್ಕೇ ಬಿಡದೆ ಅದನ್ನು ಜನರ ಮನಸ್ಸಿಗೆ ಗಟ್ಟಿಯಾಗಿ ಅಂಟಿಸುತ್ತಾ ಆ ನೆನಪನ್ನು ದೇಶ ಕಾಪಾಡಿಕೊಂಡು ಎಚ್ಚರದಿಂದಿರಲು ಆಗಸ್ಟ್ ೧೪ರ ದಿನವನ್ನು ರಾಷ್ಟ್ರ ವಿಭಜನೆಯ ಕರಾಳ ದಿನವೆಂದು ಆಚರಿಸಬೇಕೆಂದು ಕರೆಕೊಟ್ಟರು. ನಮ್ಮ ಪ್ರಧಾನ ಮಂತ್ರಿಗಳ ೨೦೧೪ರ ಆಗಸ್ಟ್ ೧೫ರಿಂದ ೨೦೨೧ರ ಆಗಸ್ಟ್ ೧೫ರವರೆಗಿನ ಪಯಣ ಎಷ್ಟು ಭೀಕರ ಇಳಿಜಾರಿನದು ಎಂದು ಸೀತಾರಾಮನ್ ಆಶ್ಚರ್ಯಪಟ್ಟಿದ್ದಾರೆ. ಆಗ ಮರೆತಿದ್ದ, ಮಾಗಿದ್ದ ಹಳೆಯ ಗಾಯವೊಂದನ್ನು ಕೆದಕಿ ನಮ್ಮ ಪ್ರಧಾನಿ ಏನು ಮಾಡಹೊರಟಿದ್ದಾರೆ? ಸುಧಾರಣೆಗಳ ಹೆಸರಿನಲ್ಲಿ ಕಂಡದ್ದನ್ನೆಲ್ಲ ಖಾಸಗೀ ವಲಯಗಳ ಹಿತಾಸಕ್ತಿಗಳಿಗೆ ಒಪ್ಪಿಸುತ್ತಾ ಹೋದರೂ, ಒಕ್ಕೂಟ ತತ್ವವನ್ನು ಗಾಳಿಗೆ ತೂರಿ ರಾಜ್ಯಗಳ ಅಧಿಕಾರಗಳನ್ನು ಒತ್ತುವರಿ ಮಾಡುತ್ತಾ ಹೋದರೂ ಸಂಭವಿಸುತ್ತಿರುವ ತಮ್ಮ ಆಡಳಿತದ ಭೀಕರ ವೈಫಲ್ಯಗಳನ್ನು ಮರೆಮಾಚಿಕೊಳ್ಳಲು, ಒಂದೇ ಸಮನೆ ಕುಸಿಯುತ್ತಿರುವ ತಮ್ಮ ಜನಪ್ರಿಯತೆಯ ಸೂಚ್ಯಂಕವನ್ನು ಮೇಲೇರಿಸಿಕೊಳ್ಳಲು ಮತೀಯ ಉದ್ರೇಕದ ಪ್ರಯತ್ನಕ್ಕೆ ಕೈಹಾಕಿದ್ದಾರೆಯೇ? ಹಾಗೇನಾದರೂ ಇದ್ದಲ್ಲಿ ಅದೊಂದು ಭೀಕರ ಪರಿಣಾಮಗಳ ಪ್ರಯತ್ನವೇ ಆದೀತು. ದೇಶದ ಗಣ್ಯರು, ಅವರದೇ ಪಕ್ಷದ ಹಿರಿಯರು(ಯಾರಾದರೂ ಇದ್ದಲ್ಲಿ!), ಆರೆಸ್ಸೆಸ್ಸಿನ ಮುಖಂಡರಾದರೂ ಎಚ್ಚೆತ್ತು ಪ್ರಧಾನಿಗಳ ಈ ಪ್ರಯತ್ನಕ್ಕೆ ತಡೆಯೊಡ್ಡಬೇಕಿದೆ. ಆರೆಸೆಸ್ಸಿನ ಸರಸಂಘಚಾಲಕರಾದ ಮೋಹನ ಭಾಗವತರೇ ಹಿಂದೂ ಮುಸ್ಲಿಮರಿಬ್ಬರ ವಂಶವಾಹಿನಿ ಒಂದೇ ಆಗಿದ್ದು ಮುಸ್ಲಿಮರನ್ನು ಅನ್ಯರೆಂದು ದ್ವೇಷಿಸಿ ಅವರನ್ನು ಪಾಕಿಸ್ತಾನಕ್ಕೆ ಹೋಗಿ ಎಂದು ಆಗ್ರಹಿಸುವ ಇತ್ತೀಚಿಗಿನ ಕೆಲ ಗುಂಪುಗಳ ಪ್ರವೃತ್ತಿಗಳನ್ನು ದೇಶವಿರೋಧಿ ಎಂದು ಖಂಡಿಸಿದ್ದಾರಲ್ಲವೆ? ಇದು ಆಫ್ಘಾನಿಸ್ತಾನದಲ್ಲಿನ ತಾಲಿಬಾನಿಗಳ ವಿಜಯ ಕಾಶ್ಮೀರದಲ್ಲಿ ಉಂಟು ಮಾಡಬಹುದಾದ ಪರಿಣಾಮಗಳನ್ನು ಮುನ್ನೋಡಿ ಆಡಿದ್ದ ಎಚ್ಚರಿಕೆಯ ಮಾತೆಂದು ಕೆಲವರು ವ್ಯಾಖ್ಯಾನಿಸುತ್ತರಾದರೂ ಅದು ಸಕಾಲಿಕ ಮತ್ತು ವಿವೇಕಪೂರ್ಣವಾದದ್ದೆಂದೇ ಭಾವಿಸಬೇಕು. ಆದರೆ ನಮ್ಮ ಪ್ರಧಾನಿಗಳು ಏನು ಮಾಡುತ್ತಿದ್ದಾರೆ?

ಅಂತಾರಾಷ್ಟ್ರೀಯ ರಾಜಕಾರಣದ ದೃಷ್ಟಿಯಿಂದಲೂ ಈಗ ಪ್ರಧಾನಿ ಮಾಡುತ್ತಿರುವುದು ಅಪಾಯಕಾರಿ ಕೆಲಸವೆನಿಸುತ್ತದೆ. ಆಗಸ್ಟ್ ೧೪ ಪಾಕಿಸ್ತಾನದ ಜನತೆ ತಮ್ಮ ಸ್ವಾತಂತ್ರ್ಯೋತ್ಸವವನ್ನು ಆಚರಿಸುವ ದಿನ. ಮೋದಿಯವರೂ ಸೇರಿದಂತೆ ಈವರೆಗಿನ ನಮ್ಮ ಎಲ್ಲ ಪ್ರಧಾನಿಗಳೂ ಆ ದೇಶದ ಜನತೆಗೆ ಶುಭಾಶಯ ಸಂದೇಶ ಕಳಿಸುತ್ತಿದ್ದ ದಿನ. ಈಗ ಆ ದಿನವನ್ನು ಕರಾಳ ದಿನವೆಂದು ಆಚರಿಸಬೇಕೆನ್ನುವುದು ಅಂತಾರಾಷ್ಟ್ರೀಯ ಮಟ್ಟದ ಒಂದು ದುರಭಿರುಚಿಯ ವರ್ತನೆ ಎನಿಸಿಕೊಳ್ಳುತ್ತದೆ. ಅಲ್ಲದೆ ನೆರೆಯ ಆಫ್ಘಾನಿಸ್ತಾನದಲ್ಲಿ ತಾಲಿಬಾನಿಗಳು ಸಂಪೂರ್ಣ ಹಿಡಿತ ಸಾಧಿಸಿ ಆಡಳಿತ ಸ್ಥಾಪಿಸುತ್ತಿರುವ ಈ ದಿನಗಳಲ್ಲಿ ಇದೊಂದು ರಾಜತಾಂತ್ರಿಕ ದುಸ್ಸಾಹಸವೂ ಎನ್ನಬಹುದು. ಏಕೆಂದರೆ ತಾಲಿಬಾನಿಗಳು ಪಾಕಿಸ್ತಾನದ ಹಿತರಕ್ಷಣೆಗೆ ತಾತ್ವಿಕವಾಗಿ ಬದ್ಧರಾದವರು. ಭಾರತ ಆಫ್ಘಾನಿಸ್ತಾನದಲ್ಲಿನ ತನ್ನ ಹಿತಾಸಕ್ತಿಗಳ ದೃಷ್ಟಿಯಿಂದ ಎಚ್ಚರಿಕೆಯ ಹೆಜ್ಜೆಗಳನ್ನಿಡಬೇಕಾದ ದಿನಗಳಿವು.

**-ಸಂಪಾದಕ**

# ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ಸಿದ್ಧಲಿಂಗಯ್ಯನವರ ಕುರಿತಾದ ನಿಮ್ಮ ಬರೆಹವು ಅವರನ್ನು ಮತ್ತೆ ಕಣ್ಣೆದುರು ತಂದಂತಾಯಿತು. ಸೊಗಸಾಗಿ ಅವರ ವ್ಯಕ್ತಿತ್ವವನ್ನು ಕಟ್ಟಿಕೊಟ್ಟಿದ್ದೀರಿ. ಅವರಿದ್ದುದೇ ಹಾಗೆ: ಪ್ರಿಯವಾದ ಸುಳ್ಳುಗಳ ಜತೆ! ಇರುವ, ಇಲ್ಲದ ಕಥಾನಕಗಳ ಜತೆ! ನಮ್ಮ ವಿ.ವಿ.ಗಳ ಕುರಿತಾದ ನಿಮ್ಮ ಟಿಪ್ಪಣಿಯು ನಮ್ಮ ಪತನಮುಖೀ ಶಿಕ್ಷಣ ವ್ಯವಸ್ಥೆಯ ದುರಂತ ಚಿತ್ರವೇ ಸರಿ.

**–ಸುಬ್ರಾಯ ಚೊಕ್ಕಾಡಿ,** ಚೊಕ್ಕಾಡಿ (ಸುಳ್ಯ)

ಸಿದ್ಧಲಿಂಗಯ್ಯ 'ಪುರಾತನ ಪ್ರಸಂಗವು' ಓದಿ ನಕ್ಕು ನಕ್ಕು ಸಾಕಾಯಿತು. ನಮ್ಮ ಕವಿಗಳು ಹಾಗೇ ಇದ್ದರು ಎಂಬುದನ್ನು ಅವರನ್ನು ಬಲ್ಲ ಎಲ್ಲರಿಗೂ ತಿಳಿದ ಸಂಗತಿ. ನವಿರಾದ ನಿರೂಪಣೆ. ದೆಹಲಿಯ ಇಂತಾ ಪ್ರಸಂಗಗಳು ನಿಮ್ಮಿಂದ ಇನ್ನಷ್ಟು ಬರಲಿ. ಇನ್ನು ಮುಂದೆ ಚಂದಾ ಬೇಡ ಎಂದದ್ದು ಅಶ್ಚರ್ಯ ತರಿಸಿತು. ಕನ್ನಡ ಪತ್ರಿಕಾರಂಗದಲ್ಲಿ ಇದು ಅಪರೂಪದ ಪ್ರಸಂಗ.

**–ಲೋಕೇಶ ಅಗಸನಕಟ್ಟೆ,** ಚಿತ್ರದುರ್ಗ

'ಸದ್ಯಕ್ಕೆ ಚಂದಾ ಬೇಡ' ಎಂಬ ತಮ್ಮ ವಿನಂತಿ ಓದಿ ಆಶ್ಚರ್ಯವಾಯಿತು. ಈ ದಿನಗಳಲ್ಲಿ ಇಂತವರೂ ಇದ್ದಾರಲ್ಲ ಎಂಬ ಖುಷಿಯೂ ಆಯಿತು. ಪತ್ರಿಕೆಗೆ ಹೇಗೆ ಮತ್ತು ಯಾವ ರೀತಿ ನಾನು ಸಹಾಯ ಮಾಡಲು ಸಾಧ್ಯ ಎಂಬುದನ್ನು ತಿಳಿಸಿದಲ್ಲಿ ಆ ರೀತಿ ಕೈ ಜೋಡಿಸುವೆ.

**–ಮಲಿಕಾರ್ಜುನ ಹುಲಗಬಾಳಿ,** ಬನಹಟ್ಟಿ.

ಸಿದ್ಧಲಿಂಗಯ್ಯನವರ ದೆಹಲಿ ಯಾತ್ರೆ ಕುರಿತ ನಿಮ್ಮ ಬರಹವನ್ನು ಓದಿದಾಗ ನನಗೆ ಅವರನ್ನು ಕೆಲ ವರ್ಷಗಳ ಹಿಂದೆ ತುಮಕೂರಿನಲ್ಲಿ ಭೇಟಿಮಾಡಿದ್ದ ಸಂದರ್ಭ ನೆನಪಿಗೆ ಬಂತು. ಹೀಗೇ ಮಾತಾಡುತ್ತಿದ್ದಾಗ ನಾನು ಸರ್ಕಾರ ಪರಿಶಿಷ್ಟ ಜಾತಿ–ಪಂಗಡಗಳ ಅಭಿವೃದ್ಧಿಗಾಗಿ ಕೊಡಮಾಡುತ್ತಿರುವ ಕೋಟ್ಯಾಂತರ ರೂಪಾಯಿಗಳ ಸಬ್ಸಿಡಿ ಹಣ ಏನಾಗುತ್ತಿದೆ ಎಂಬುದರ ಬಗ್ಗೆ ಒಬ್ಬ ಸರ್ಕಾರಿ ಅಧಿಕಾರಿಯಾಗಿ ನಾನು ಏನೂ ಹೇಳಬಯಸುವುದಿಲ್ಲ ಎಂದೆ. ಆಗ ಅವರು 'ನಾನು ದಲಿತರಿಗೆ ರಾಜ್ಯ ಕೊಡಿ ಎಂದು ಬರೆದೆ. ದಲಿತರಿಗೆ ಕೋಟ್ಯಾಂತರ ರೂಪಾಯಿಗಳ ಯೋಜನೆ ಮಾಡಿ ಎಂದು ವಾದಿಸಿದೆ. ಈಗ ಎಂ.ಜಿ. ರೋಡಿನಲ್ಲಿ ನೇಣು ಹಾಕಿಕೊಳ್ಳಬೇಕೆನಿಸುತ್ತದೆ' ಎಂದು ನೊಂದು ನುಡಿದಿದ್ದರು. ನನ್ನನ್ನು ಸಂಜೀವ ರಾವ್ ಎಂದು ಸಂಬೋಧಿಸುತ್ತಿದ್ದ ಅವರನ್ನು ನೀವು ನನ್ನನ್ನು ಹಾಗೇಕೆ ಸಂಬೋಧಿಸುತ್ತೀರಿ ಎಂದು ಕೇಳಬೇಕೆನಿಸಿದರೂ ಈಗ ಅವರೇ ನಮ್ಮೊಂದಿಗಿಲ್ಲ.

**–ಸಂಜೀವರಾಯ,** ತುಮಕೂರು

ಕೆ.ಪದ್ಮಾಕ್ಷಿಯವರು ಕನ್ನಡಕ್ಕೆ ಅನುವಾದಿಸಿರುವ ಸಾದಿಯಾ ಶೆರೀನ್ ಅವರ ಅನುವಾದದ ಲೇಖನವು "ಲಕ್ಷದ್ವೀಪ"ವು ರಾಷ್ಟ್ರೀಕರಣಗೊಂಡರೆ ಅಲ್ಲಿ ಆಗುವ ನೈಜ ವಿರೂಪಗಳನ್ನು ಪರಿಣಾಮಕಾರಿಯಾಗಿ ಓದುಗರ ಮುಂದೆ ಅನಾವರಣಗೊಳಿಸಿದೆ. ಕಡಲ ಜೀವವೈವಿಧ್ಯತೆಯ ಕ್ಲಿಷ್ಟವಾದ ಪರಿಚಯವನ್ನು ಕನ್ನಡದಲ್ಲಿ ನೀಡುವ ಲೇಖಕರ ಪ್ರಯತ್ನ ಅಭಿನಂದನಾರ್ಹವಾಗಿದೆ. ಒಕ್ಕೂಟ ಸರಕಾರಕ್ಕೆ ನಿಜವಾಗಿಯೂ ಪ್ರವಾಸೋದ್ಯಮವನ್ನು ಬೆಳೆಸಿ ಸ್ಥಳೀಯ ನಾಗರಿಕರ ಜೀವನವನ್ನು ಹಸನುಮಾಡುವ ಹಾಗೂ ತನ್ನ ಭಂಡಾರಕ್ಕೆ ತೆರಿಗೆಯನ್ನು ತುಂಬಿಸಿಕೊಳ್ಳುವ ಬಯಕೆ ಇದೆ ಎಂದಾದರೆ, ಅದು ವಿವೇಚನಾಯುತ ದಾರಿಗಳನ್ನು ಕಂಡುಕೊಳ್ಳಬೇಕಿದೆ. ಅಲ್ಲಿರುವ ಪರಿಸರ ಸೌಂದರ್ಯಗಳಾದ ಕಡಲತಡಿಗಳನ್ನು, ಅಗಾಧ ಜೀವವೈವಿಧ್ಯತೆಯನ್ನು ಹಾಗೂ ವಿಶಿಷ್ಟ ಸ್ಥಳೀಯ ಸಾಂಸ್ಕೃತಿಕ ಸಮೃದ್ಧಿಯನ್ನು ಅಲಕ್ಷಿಸದೆ ಕಾಪಾಡಬೇಕಿದೆ. ಯೋಜನಾಕಾರರು ಮತಧರ್ಮದ ಗುಂಗಿನಿಂದ ಹೊರಬಂದು ಪ್ರಕೃತಿ ಧರ್ಮವನ್ನು ಪಾಲಿಸಿದರೆ ಪ್ರಬುದ್ಧ ಪರಿಸರ ಪ್ರವಾಸಿಗರನ್ನೊಳಗೊಂಡ ಎಲ್ಲ ಬಗೆಯ ಜನಾಂಗದವರನ್ನು ಲಕ್ಷದ್ವೀಪದ ಹವಳದಿಬ್ಬಗಳು ಖಂಡಿತ ಕೈಬೀಸಿ ಕರೆಯುತ್ತವೆ.

ಸಿದ್ಧಲಿಂಗಯ್ಯನವರ ದೆಹಲಿ ಭೇಟಿಯ ಪ್ರಸಂಗ ಓದುತ್ತಾ ನಕ್ಕು ನಕ್ಕು ಸಾಕಾಯಿತು. ಇಲ್ಲಿ ಕವಿಯ ವ್ಯಕ್ತಿತ್ವ ಮಾರ್ಮಿಕವಾಗಿ ನಿರೂಪಿತಗೊಂಡಿದೆ.

**–ಮಹಾಂತೇಶ ಓಶಿಮಠ,** ಕೈಗಾ

ಸಿದ್ಧಲಿಂಗಯ್ಯನವರ ಬಗ್ಗೆ ನೀವು ಬರೆದಿರುವುದನ್ನು ಓದಿ ಕುಣಿದು ಕುಪ್ಪಳಿಸಿದೆ.

**–ನಿತ್ಯಾನಂದ ಬಿ. ಶೆಟ್ಟಿ,** ತುಮಕೂರು

ಆಗಸ್ಟ್ ತಿಂಗಳ ಸಂಪಾದಕೀಯ, ಎಚ್.ಪಟ್ಟಾಭಿರಾಮ ಸೋಮಯಾಜಿ, ಆರ್.ಪವಿತ್ರ ಪ್ರಿಯಭಾಷಿಣಿ ಮತ್ತು ಸಂತೋಷ್ ನಾಯಕ್ ಅವರ ಪದ್ಯಗಳು ಇಷ್ಟವಾದವು ಸರ್. ಹಾಗೆ ಆಲೂರು ದೊಡ್ಡನಿಂಗಪ್ಪ ಅವರ ಗಿಣಿ ಬಿಸ್ಕತ್ ಪುಸ್ತಕದ ವಿಮರ್ಶೆ ಕೂಡ.

**–ಬಿ. ರಾಜೇಶ್,** ಮೈಸೂರು

ಆಗಸ್ಟ್ ಸಂಚಿಕೆ, ಕಾರ್ಗಾಲದಲ್ಲಿ ಹಳ್ಳ, ಕೊಳ್ಳ, ನದಿ, ತೊರೆಗಳು ಮೈದುಂಬಿ ಹರಿಯುವಂತೆ ಸಮೃದ್ಧವಾಗಿ ಬಂದಿದೆ. ಈ ಅಭಿವೃದ್ಧಿ ಸಾಕು ಚರ್ಚೆ ಬೆಂಬಿಡದ ಭೂತದಂತೆ ಮುಂದುವರೆದಿದೆ. ಮೌಲ್ಯವೆಂಬ ನೈತಿಕ ನೆಲೆಗಟ್ಟೇ ಬಂಡವಾಳವಾಗಿರುವ ಪತ್ರಿಕೆಗೆ, ಚಂದಾ ಕಳಿಸುವುದು ಬೇಡ, ಮುಂದಿನ ಆರು ತಿಂಗಳು ಮಿಗಿತಾಯವಾದ ಚಂದಾನಿಧಿಯಿಂದಲೇ ಪತ್ರಿಕೆ ಕಳಿಸಿಕೊಡುವುದಾಗಿ ತಿಳಿಸಿರುವುದು ಆಡದೇ ಮಾಡುವ ಉತ್ತಮ ಕೆಲಸ.

ಸಿದ್ಧಲಿಂಗಯ್ಯನವರ ಪುರಾತನ ಪ್ರಸಂಗವನ್ನು ಪ್ರಾಮಾಣಿಕವಾಗಿ ರಸವತ್ತಾಗಿ ಅವರ ವ್ಯಕ್ತಿತ್ವಕ್ಕೆ ಕಿಂಚಿತ್ತೂ ಮುಕ್ಕಾಗದಂತೆ ಚಿತ್ರಿಸಿದ್ದೀರಿ. ಅಭಿನಂದನೆಗಳು. ನಿಮ್ಮ ಒಡನಾಟದ ಇನ್ನಷ್ಟು ಪ್ರಸಂಗಗಳಿದ್ದರೆ ಮುಂದಿನ ಸಂಚಿಕೆಯಲ್ಲಿ ಬರೆಯಿರಿ. ತಮ್ಮೆಲ್ಲ ವೈರುಧ್ಯಗಳ ಮಧ್ಯೆಯೂ ಕನ್ನಡ ಸಾಹಿತ್ಯ–ಸಾಂಸ್ಕೃತಿಕ ಇತಿಹಾಸದ ಪುಟಗಳಲ್ಲಿ ಒಂದು ದಟ್ಟವಾದ ಅಧ್ಯಾಯವನ್ನು ಬಿಟ್ಟುಹೋದ ಕವಿ ಸಿದ್ಧಲಿಂಗಯ್ಯ ಸಮಾಜವಾದಿ ಹಿರಿಯರೊಂದಿಗೆ 'ಕಚೇರಿ' ಮಾಡುತ್ತಿರುವಾಗ ನೀವು ಕುತೂಹಲದಿಂದ ಇಣುಕಿ ನೋಡಿ ಆನಂದಿಸುತ್ತಿರುವ ಚಿತ್ರವನ್ನು ಬಿಡಿಸಿರುವ ಗೆಳೆಯ ಗುಜ್ಜಾರಪ್ಪನವರಿಗೆ ಶರಣೆನ್ನುವೆ. ಅವರು ಬಿಡಿಸಿರುವ ಐದೂ ಚಿತ್ರಗಳು ಹತ್ತು ಪುಟಗಳ ವಿವರಣೆಗೆ ಸಮ. ಕಾಲೇಜು, ವಿ.ವಿ.ಗಳ ವಿದ್ವನ್ಮಣಿಗಳ ಬಗೆಗಿನ ನಿಷ್ಠುರ ಬರವಣಿಗೆ ಇಷ್ಟವಾಯಿತು. ಕನ್ನಡದಿಂದಲೇ ದಷ್ಟಪುಷ್ಟವಾಗಿ ಬೆಳೆದು ಕನ್ನಡ ಅನ್ನದ ಭಾಷೆಯಲ್ಲ ಎಂದು ವೀರಾವೇಶದಿಂದ ಪ್ರತಿಪಾದನೆ ಮಾಡುತ್ತಿದ್ದವರ ತಟ್ಟೆಯ ಒಂದು ತುತ್ತು ಅನ್ನಕ್ಕೆ ಸಂಚಕಾರ ಬರಬಹುದು ಎಂದು, ನೀರು ತಮ್ಮ ಬುಡಕ್ಕೆ ಬಂದಾಗ ಕನ್ನಡ ಜಾಗೃತಿಗೆ ಇಳಿದಿರುವುದು ಎಂತಹ ವೈರುಧ್ಯ!

**–ಸಿ.ಚನ್ನಬಸವಣ್ಣ,** ಬಳ್ಳಾರಿ.

ರಾಷ್ಟ್ರ ವಿಭಜನೆಯ ಬಗ್ಗೆ ಹೊರಗೇ ಕಾರಣಗಳನ್ನು ಹುಡುಕುತ್ತಾ ಸಮಾಜದಲ್ಲಿ ದ್ವೇಷ–ಗೊಂದಲಗಳನ್ನು ಸೃಷ್ಟಿಸುವ ಪ್ರಯತ್ನಗಳು ನಡೆಯುತ್ತಿರುವ ಇಂದಿನ ಸದರ್ಭದಲ್ಲಿ ಒಳಕಾರವನ್ನೂ ಹುಡುಕುವ ಪ್ರಯತ್ನ ಮಾಡುವ ಲೋಹಿಯಾ ಅವರ 'ಭಾರತ ವಿಭಜನೆಯ ತಪ್ಪಿತಸ್ಥರು' ಕೃತಿಯ ಕೆಲ ಪುಟಗಳ ಕನ್ನಡ ಅನುವಾದವನ್ನು ಪ್ರಕಟಿಸಿ ಸುತ್ತ್ಯಾರ್ಹ ಕೆಲಸ ಮಾಡಿದ್ದೀರಿ, ಈ ಬರಹ ಲೋಹಿಯಾ ಅವರ ಕಟುನಿಷ್ಠುರತೆ ಮತ್ತು ತೀಕ್ಷ್ಣಮತಿಗಳೆರಡಕ್ಕೂ ಕನ್ನಡಿ ಹಿಡಿದಂತಿದೆ. ಧನ್ಯವಾದಗಳು,

**–ಎಂ.ಆರ್. ಮಹೇಶ್,** ಬೆಂಗಳೂರು

ಬಿಹಾರದಲ್ಲಿನ ಪಾನನಿಷೇಧದ ಬಗ್ಗೆ ಅನಿಲ್ ಹೆಗ್ಡೆ ಅವರ ಲೇಖನ ಕುತೂಹಲಕರ ಮಾಹಿತಿಯಿಂದ ಓದಿಸಿಕೊಂಡು ಹೋಗುವುದಾದರೂ ಲೇಖಕರು ತಮ್ಮ ಸಂಯುಕ್ತ ಜನತಾದಳದ ಮುಖ್ಯಮಂತ್ರಿಯಾದ ನಿತೀಶ್‌ಕುಮಾರ್ ಅವರ ಸಾಧನೆಯನ್ನು ದಾಖಲಿಸುವುದರ ಮೇಲೇ ಕಣ್ಣಿಟ್ಟು ಈ ಲೇಖನ ಬರೆಂತಿದೆ. ಆದರೆ ಅವರು ಸಂಪೂರ್ಣ ಪಾನನಿಷೇಧ ಜಾರಿಯಲ್ಲಿದೆಯೆಂದು ಹೇಳಿವ ಗುಜರಾತ್ ಮತ್ತು ಬಿಹಾರಗಳಲ್ಲಿ ಅದು ಅಷ್ಟೇನೂ ಸಫಲವಾಗಿಲ್ಲವೆಂಬ ವರದಿಗಳಿವೆ, ಪಾನ ನಿಷೇಧ ಮಹಾತ್ಮ ಗಾಂಧಿಯವರ ಕಾಲಕ್ಕೆ ಸಾಧುವಾಗಿ ಕಾಣಬಹುದಿತ್ತೇ ಹೊರತು, ಜಾಗತೀಕರಣದ ಈ ಕಾಲದಲ್ಲಿ ಅಲ್ಲ, ಅದನ್ನು ಶಿಕ್ಷಣ ಮತ್ತು ಕಾನೂನುಗಳ ಮೂಲಕ ಒಂದು ಮಿತಿಗೆ ಒಳಪಡಿಸುವುದು ಇಂದಿನ ಅಗತ್ಯ.

ರಾಷ್ಟ್ರೀಯತೆಯ ಅಬ್ಬರದ ಮರೆಯಲ್ಲಿ ಕನ್ನಡ ಭಾಷಾ ಶಿಕ್ಷಣ ಮತ್ತು ಕನ್ನಡಿಗರ ಉದ್ಯೋಗಾವಕಾಶಗಳಿಗೆ ಕಲ್ಲು ಬೀಳುತ್ತಿರುವ ಬಗ್ಗೆ ನೀವು ನಿಮ್ಮ ಬಿಡಿ ಟಿಪ್ಪಣಿಗಳಲ್ಲಿ ವ್ಯಕ್ತಪಡಿಸಿರಯವ ಆತಂಕವನ್ನು ಕನ್ನಡಪರ ಸಂಘಟನೆಗಳು ಗಂಭೀರವಾಗಿ ಪರಿಗಣಿಸಬೇಕು, ನಮ್ಮ ಶಿಕ್ಷಣತಜ್ಞರು ಮತ್ತು ಲೇಖಕ–ಬುದ್ಧಿಜೀವಿ ಸಮುದಾಯ ರಾಷ್ಟ್ರೀಯ ಶಿಕ್ಷಣ ನೀತಿಯ ತೀಕ್ಷ್ಣ ಪರಾಮರ್ಶೆಗೆ ಒಳಪಡಿಸಬೇಕು. ಕನ್ನಡ–ಕನ್ನಡಿಗರ ಹಿತರಕ್ಷಣೆಗಾಗಿ ಸರ್ಕಾರದ ಮೇಲೆ ಒತ್ತಡ ಹಾಕಬೇಕು,

**–ಎಸ್. ವಾಸುದೇವಮೂರ್ತಿ,** ಶಿವಮೊಗ್ಗ

ಆಗಸ್ಟ್ ಸಂಚಿಕೆಯಲ್ಲಿನ "ಅನ್ನದ ಭಾಷೆಯಾದರೂ ಕಲ್ಲು ತಪ್ಪದು!" ಎಂಬ ಶೀರ್ಷಿಕೆಯನ್ನು ಹೊತ್ತ ಟಿಪ್ಪಣಿಯನ್ನು ಓದಿದೆ. ಸರಿಯಾದ ಮತ್ತು ಸಮಂಜಸವಾದ ಮಾತುಗಳವು. ಪಠ್ಯಪುಸ್ತಕವಷ್ಟೇ ಕನ್ನಡವನ್ನು ಉಳಿಸುತ್ತದೆ (ಇಂದಿನ ಮಕ್ಕಳಿಗೆ ಭಾಷೆ, ಸಂಸ್ಕೃತಿಯನ್ನು ಪರಿಚಯಿಸುವವಲ್ಲಿ ಪ್ರತಿನಿಧಿಸುವ ಪಠ್ಯ ವಸ್ತುವಿನ ಆಯ್ಕೆ, ಅದರ ಮೂಲಕ ಸೃಷ್ಟಿಸಿಕೊಳ್ಳುವ ಒಂದು ಪಠ್ಯಕ್ರಮವನ್ನೇ ಅನುಮಾನದಿಂದ ನೋಡುವಂತೆ ಮಾಡಿದೆ) ಎಂದು ನಂಬುವವರು ನಿಮ್ಮ ಟಿಪ್ಪಣಿಯಲ್ಲಿರುವ ಕಾಳಜಿಯನ್ನು ಅರ್ಥಮಾಡಿಕೊಳ್ಳದೇ, ಮೊನಚಾದ ವ್ಯಂಗ್ಯ, ನಿಮ್ಮ ನೋವನ್ನಷ್ಟೇ ಕಾಣಬಲ್ಲರು. ಭಾಷೆ, ಸಂಸ್ಕೃತಿ, ಜನಸಮುದಾಯಗಳ ಅನನ್ಯತೆಯನ್ನು ಕಾಪಾಡುವ ಬಗೆಗಿನ ನಿಮ್ಮ ಕಾಳಜಿಗಳನ್ನು ಕಾಣಲಾರರು. "ಒಂದು ಕಡೆ ಕಣ್ಣು ಹೊಡೆದು ಮಲಗಿಸಿ ಇನ್ನೊಂದು ಕಡೆಯಿಂದ ಸುತ್ತಿ ಬಂದು ಮುಖಕ್ಕೆ ಹೊಡೆಯುತ್ತದೆ." ಎಂಬ ನಿಮ್ಮ ಮಾತು ರಾಷ್ಟ್ರೀಯ ಶಿಕ್ಷಣ ನೀತಿ, ಅದನ್ನು ಅನುಷ್ಠಾನಕ್ಕೆ ತರಲು ತುದಿಗಾಲಿನಲ್ಲಿ ನಿಂತವರಿಗೆ ಎಚ್ಚರಿಕೆಯನ್ನು ಕೊಡುತ್ತಿದೆ.

**–ಆರ್. ದಿಲೀಪ್‌ಕುಮಾರ್,** ಚಾಮರಾಜನಗರ

ವರದಿ

# ಈಸೂರಿನಲ್ಲಿ ಭ್ರಷ್ಟಾಚಾರ ವಿರೋಧಿ ಜಾಥಾಗೆ ಚಾಲನೆ




ಆಗಸ್ಟ್ ೮, ೧೯೪೨, ಗಾಂಧೀಜಿಯವರು ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಎಂದು ಕರೆ ಕೊಟ್ಟ ದಿನ. ಆ ಕ್ವಿಟ್ ಇಂಡಿಯಾ ಚಳುವಳಿಯ ನೆನಪಿನಲ್ಲಿ ಕರ್ನಾಟಕ ರಾಷ್ಟ್ರೀಯ ಪಕ್ಷವು "ಭ್ರಷ್ಟರೇ ಪವಿತ್ರ ರಾಜಕಾರಣವನ್ನು ಬಿಟ್ಟು ತೊಲಗಿ, ನಾಡಪ್ರೇಮಿಗಳೇ ರಾಜಕಾರಣಕ್ಕೆ ಮುಂದಾಗಿ" ಎಂಬ ಘೋಷಣೆಯೊಂದಿಗೆ ರಾಜ್ಯಾದ್ಯಾಂತ ಜನಜಾಗೃತಿಗಾಗಿ ಬೈಕ್ ರ್‍ಯಾಲಿಯೊಂದನ್ನು ಹಮ್ಮಿಕೊಂಡಿದೆ. ಸ್ವಾತಂತ್ರ ಸಂಗ್ರಾಮದಲ್ಲಿ ಬಹಳ ಮುಖ್ಯ ಪಾತ್ರವೊಂದನ್ನು ವಹಿಸಿರುವ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಈಸೂರು ಗ್ರಾಮದಿಂದ ಈ ಬೈಕ್ ಜಾಥಾ ಚಾಲನೆ ಪಡೆಯಿತು. ಈಸೂರಿನ ಹುತಾತ್ಮರ ಸ್ಮಾರಕಕ್ಕೆ ಪುಷ್ಪ ನಮನ ಸಲ್ಲಿಸಿ, ಸ್ಮಾರಕದ ಆವರಣದಲ್ಲಿ ಗಿಡ ನೆಡುವ ಮೂಲಕ ಕಾರ್ಯಕ್ರಮಕ್ಕೆ ಸಾಮಾಜಿಕ ಹೋರಾಟಗಾರರಾದ ಎಸ್. ಆರ್. ಹಿರೇಮಠ್ ಅವರು ಚಾಲನೆ ನೀಡಿದ ನಂತರ ತಮ್ಮ ಉದ್ಘಾಟನಾ ಭಾಷಣದಲ್ಲಿ ಹಿಂದಿನ ಮಹನೀಯರು ತಮ್ಮ ತ್ಯಾಗ ಬಲಿದಾನಗಳ ಮೂಲಕ ಸ್ವಾತಂತ್ರ್ಯ ಚಳುವಳಿಯನ್ನು ಕಟ್ಟಿದ ಬಗೆಯನ್ನು ಸ್ಮರಿಸಿದರು. ಗಾಂಧೀಜಿಯವರ  ಹೋರಾಟ ಬಿಹಾರದ ಚಂಪಾರಣ್‌ನಿಂದ ವ್ಯವಸ್ಥಿತವಾಗಿ ಪ್ರಾರಂಭವಾಗಿ ನಂತರ ಗಾಂಧೀಜಿಯವರು "ಮಾಡು ಇಲ್ಲವೇ ಮಡಿ" ಎಂದು ಘೋಷಿಸಿದಾಗ ಅದು ದೇಶವ್ಯಾಪಿಯಾಗಿ ಹರಡಿ ನಿರ್ಣಾಯಕ ಹಂತವನ್ನು ತಲುಪಿತು ಎಂದರು. ಗಾಂಧೀಜಿಯವರು ವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯಲು ದಕ್ಷಿಣ ಆಫ್ರಿಕಾದಿಂದಲೇ ಹೋರಾಟ ಪ್ರಾರಂಭಿಸಿದ್ದನ್ನು ಸ್ಮರಿಸುತ್ತಾ, ೨೦೦೦ ವರ್ಷಗಳ ಹಿಂದೆಯೇ ಜಗತ್ತಿನ ಮೂವರು ಮಹಾನ್ ಚಿಂತಕರಾದ ಬುದ್ಧ, ಸಾಕ್ರಟೀಸ್, ಮತ್ತು ಕನ್ಫ್ಯೂಷಿಯಸ್ ಅವರುಗಳು ಮಾನವ ಘನತೆಯನ್ನು ಎತ್ತಿ ಹಿಡಿಯುವ ಪ್ರಯತ್ನಗಳನ್ನೇ ನಡೆಸಿದರು ಎಂದರು.. ಅಂಬೇಡ್ಕರ್ ಅವರು ಸಮಾನತೆಯ ಸಾಧನೆಗಾಗಿ ಸಂವಿಧಾನದ ಮಾರ್ಗದಲ್ಲಿ ಪ್ರಯತ್ನಗಳನ್ನು ನಡೆಸಿದ್ದನ್ನು ಸ್ಮರಿಸುತ್ತಾ  ಭ್ರಷ್ಟರನ್ನು ನಿಗ್ರಹಿಸಲು ಸಾಂವಿಧಾನಿಕ ಮಾರ್ಗದಲ್ಲೇ ಪ್ರಯತ್ನ ನಡೆಸಬೇಕು ಎಂದೂ ತಿಳಿಸಿದರು. ಭ್ರಷ್ಟಾಚಾರವು ದೇಶದಿಂದ ತೊಲಗುವವರೆಗೂ ಗಾಂಧೀಜಿ ಕಂಡ ಕನಸು ಸಾಕಾರಗೊಳ್ಳುವುದಿಲ್ಲ ಎಂದರು.

ನಂತರ ಮುಖ್ಯ ಅತಿಥಿಯಾಗಿದ್ದ ಚಿಂತಕ ಡಿ.ಎಸ್. ನಾಗಭೂಷಣ ಅವರು ಕ್ವಿಟ್ ಇಂಡಿಯಾ ಚಳುವಳಿಯನ್ನು ನೆನೆಯುವ ಈ ಸಂದರ್ಭದಲ್ಲಿ ನಮ್ಮ ಶಿವಮೊಗ್ಗ ಜಿಲ್ಲೆಯ ಈಸೂರು ಗ್ರಾಮದ ಜನ ನಡೆಸಿದ ಹೋರಾಟವನ್ನು ಸ್ಮರಿಸಬೇಕು ಎಂದರು. ೧೯೪೨ ರ ಸೆಪ್ಟಂಬರ್ ಕೊನೆಯ ವಾರದಲ್ಲಿ ಈಸೂರಿನ ಜನ ತಮ್ಮ ಗ್ರಾಮವನ್ನು ಸ್ವತಂತ್ರ ಗ್ರಾಮವೆಂದು ಘೋಷಿಸಿಕೊಂಡ ನಂತರ ನಡೆದ ಬೆಳವಣಿಗೆಗಳಿಂದಾಗಿ ಐದು ಜನ ಹೋರಾಟಗಾರರು ಗಲ್ಲು ಶಿಕ್ಷೆ ಅನುಭವಿಸಿದ್ದನ್ನು ಇಪ್ಪತ್ತಕ್ಕೂ ಹೆಚ್ಚು ಜನ ಜೀವಾವಧಿ ಶಿಕ್ಷೆಗೆ ಒಳಗಾಗಿದ್ದು ಅದರಲ್ಲಿ ಮಹಿಳೆಯರೂ ಸೇರಿದ್ದುದನ್ನು ನೆನೆದರು. ಬ್ರಿಟಿಷರು ಭಾರತವನ್ನು ಬಿಟ್ಟು ಹೊರಟು ಹೋದ ಕೂಡಲೆ ಭಾರತ ಸ್ವತಂತ್ರವಾಗುವುದಿಲ್ಲ, ಜನ ತಮ್ಮನ್ನು ತಾವೇ ಆಳಿಕೊಳ್ಳುವ ಗ್ರಾಮ ಸ್ವರಾಜ್ಯ ಸ್ಥಾಪನೆಯಾದಾಗ ಮಾತ್ರ ಭಾರತ ನಿಜವಾಗಿ ಸ್ವತಂತ್ರವಾಗುವುದು ಎಂಬ ಗಾಂಧೀಜಿಯವರ ಸ್ವಾತಂತ್ರ್ಯದ ಪರಿಕಲ್ಪನೆಯನ್ನು ವಿವರಿಸಿದರು. ಬ್ರಿಟಿಷರ ಜಾಗಕ್ಕೆ ನಮ್ಮವರೇ ಬಂದಿದ್ದಾರೆ, ಆಡಳಿತ ಲಂಚಮುಕ್ತವಾಗಬೇಕು, ನಮ್ಮ ಅಗತ್ಯಗಳನ್ನು ಕಡಿಮೆ ಮಾಡಿಕೊಂಡು ಸರಳ ಜೀವನಕ್ಕೆ ಒತ್ತು ಕೊಡಬೇಕು ಎಂದರು. ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಅಧ್ಯಕ್ಷ ರವಿಕೃಷ್ಣಾ ರೆಡ್ಡಿಯವರು ಮಾತನಾಡಿ ರಾಜ್ಯದ ಎಲ್ಲ ಜಿಲ್ಲೆಗಳನ್ನೂ ಪ್ರವೇಶಿಸುವ ತಮ್ಮ ಪಕ್ಷದ ಬೈಕ್ ಜಾಥಾ ಮುಖ್ಯ ಪಟ್ಟಣಗಳ ಸರ್ಕಾರಿ ಕಛೇರಿಗಳಿಗೆ ಭೇಟಿ ನೀಡಿ ಭ್ರಷ್ಟ ಸರ್ಕಾರಿ ನೌಕರರನ್ನು ಎಚ್ಚರಿಸುವ ಮೂಲಕ ರಾಜ್ಯದಲ್ಲಿ ಸಾರ್ವಜನಿಕ ಜೀವನವನ್ನು ಭ್ರಷ್ಟಾಚಾರದಿಂದ ಮುಕ್ತಗೊಳಿಸುವ ಪ್ರಯತ್ನ ಮಾಡುವ ಮೂಲಕ ಸ್ವಚ್ಛ ರಾಜಕಾರಣದ ಹೊಸ ಶಕೆಯನ್ನು ಆರಂಭಿಸುವ ಆಶಯ ಹೊಂದಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯ್ತಿ ಅಧ್ಯಕ್ಷರು, ತಾಲ್ಲೂಕು ರೈತ ಸಂಘದ ನಾಯಕರೂ ಸೇರಿದಂತೆ ಊರಿನ ಹಲವು ಗ್ರಾಮಸ್ಥರು ಭಾಗವಹಿಸಿದ್ದರು. ಕಾರ್ಯಕ್ರಮದ ನಂತರ ಜಾಥಾ ಶಿಕಾರಿಪುರದ ಕಡೆ ಹೊರಟಿತು.

(ವರದಿ: **ಮಂಜುಳಾ ಎಂ. ರಾಜು**)

---

‘ಈ ಅಭಿವೃದ್ಧಿ ಇನ್ನು ಸಾಕು’: ಮತ್ತೊಂದು ಪ್ರತಿಸ್ಪಂದನ

# ಕೃಷಿ ರಂಗಕ್ಕೆ ಇದು ಜರೂರು ಆಗಬೇಕಿದೆ

ವಿವಿಧ ಹಳ್ಳಿಗಳಲ್ಲಿ ನಾವು ದೇಸಿ ಬೀಜಗಳ ಬಗ್ಗೆ ಚರ್ಚಿಸುವಾಗ ಬಹುತೇಕ ರೈತರು ಕೇಳುತ್ತಿದ್ದ ಪ್ರಶ್ನೆ "ಒಳ್ಳೆ ಇಳುವರಿ ಕೊಡುವಂತಾ ಬೀಜ ಇದ್ರೆ ಕೊಡಿ". ಅದು ಭತ್ತವಾಗಿರಲಿ, ರಾಗಿ, ಸಿರಿಧಾನ್ಯ, ಕಾಳು, ತರಕಾರಿ, ತೋಟಗಾರಿಕೆ ಹೀಗೆ ಯಾವುದೇ ಬೆಳೆಯಾಗಿರಲಿ ಅವರದ್ದು ಇದೇ ಬೇಡಿಕೆ. ನೋಡಿ, ದೇಸಿ ತಳಿಗಳಿಗೆ ಕೀಟ–ರೋಗ ಬಾಧೆ ಅಷ್ಟಾಗಿ ಇರದು, ಒಳ್ಳೆ ರುಚಿ, ಹೆಚ್ಚು ಪೌಷ್ಟಿಕಾಂಶ ಇರುತ್ತದೆ, ಉತ್ತಮ ಪರಿಮಳ . . . ಹೀಗೆ ಎಷ್ಟೇ ಹೇಳಿದರೂ ಕೊನೆಗೆ ಅವರು ಬಂದು ನಿಲ್ಲುವುದು "ಇಳುವರಿ ಎಷ್ಟು?"

ಒಂದು ಕಾಲದಲ್ಲಿ ಕೃಷಿ ಯಾವುದೇ ಹೊರಸುರಿಗಳನ್ನು ಅವಲಂಬಿಸಿರಲಿಲ್ಲ. ಆದರೆ ಈಗ ಬಹುತೇಕ ಪರಾವಲಂಬಿ. ೬೦ರ ದಶಕದ ನಂತರವಂತೂ ಕೃಷಿಗೆ ಬೇಕಾದ ಪರಿಕರಗಳೆಲ್ಲಾ ನಗರಗಳಲ್ಲಿ, ಕಾರ್ಖಾನೆಯಲ್ಲಿ ತಯಾರಾಗುವ ಮಟ್ಟ ತಲುಪಿದೆ. ಕುಲಾಂತರಿ ತಂತ್ರಜ್ಞಾನ ಬಂದ ಮೇಲಂತೂ ಅತ್ಯಾಧುನಿಕ ಲ್ಯಾಬುಗಳಲ್ಲಿ ನಮ್ಮ ಕೃಷಿಗೆ ಬೇಕಾದ ಬೀಜ, ರಸಗೊಬ್ಬರ, ಕಳೆನಾಶಕ, ರೋಗ–ಕೀಟ ನಾಶಕಗಳು ತಯಾರಾಗಿ ಬಣ್ಣಬಣ್ಣದ ಪೊಟ್ಟಣಗಳಲ್ಲಿ ಮಾರುಕಟ್ಟೆಗೆ ಬರುತ್ತಿವೆ. ಕುಚೋದ್ಯವೆಂದರೆ ಸಾವಯವ ಗೊಬ್ಬರಗಳೂ ಇದೇ ರೀತಿ ಲ್ಯಾಬಿನಲ್ಲಿ ಉತ್ಪತ್ತಿಯಾಗಿ ರೈತರ ಹೊಲ ತಲುಪುತ್ತಿರುವುದು. ಈ ರೀತಿ ಲ್ಯಾಬಿನಲ್ಲಿ ತಯಾರಾದ ಬಿತ್ತನೆ ಬೀಜ ಹೆಚ್ಚು ಇಳುವರಿ ನೀಡುವುದು ನಿಜ. ಆದರೆ ಅದಕ್ಕೆ ವಿಪರೀತ ಆರೈಕೆ ಬೇಕು. ಹೆಚ್ಚು ನೀರು, ಹೆಚ್ಚೆಚ್ಚು ಗೊಬ್ಬರ, ನಿರಂತರ ಔಷಧಿ ಸಿಂಪಡಿಸಿದರೆ ಅದು ಅಧಿಕ ಇಳುವರಿ ನೀಡುತ್ತದೆ. ಒಮ್ಮೆ ಈ ವಿಷಚಕ್ರದಲ್ಲಿ ಸಿಲುಕಿದರೆ ಮುಗಿಯಿತು. ಈಗ ಆಗಿರುವುದು ಅದೇ.

ಹಿಂದೆ ಮಳೆ ಆಶ್ರಯದಲ್ಲಿ ಬೆದ್ದಲು ಭೂಮಿಗೆ ಹಾರಕ ಬಿತ್ತಿ, ನಡುವೆ ಒಂದು ಸಲ ಅರಗಿ ಕಳೆ ತೆಗೆದು ಮತ್ತೆ ಕಟಾವಿಗೆ ಮಾತ್ರ ಹೊಲಕ್ಕೆ ಹೋಗುತ್ತಿದ್ದರು. ಬಿಡುವಿನ ವೇಳೆಯನ್ನು ಬಯಲಾಟ ಆಡಲು, ಕೋಲಾಟ ಉಯ್ಯಲು, ಹರಿಕತೆ ಕೇಳಲು, ನೆಂಟರಿಷ್ಟರ ಮನೆಗಳಿಗೆ ಹೋಗಲು ಬಳಸುತ್ತಿದ್ದರು. ಯಾವುದೂ ಇಲ್ಲಾಂದರೆ ಮಧ್ಯಾಹ್ನ ಗಡದ್ದಾಗಿ ನಿದ್ದೆತೆಗೆಯುತ್ತಿದ್ದರು  ಈಗ ಅದೇ ಹೊಲಕ್ಕೆ ಲ್ಯಾಬಿನ ಗರ್ಕಿನ್ಸ್ ಬೀಜ ಹಾಕಿದ್ದರೆ ಮನೆ ಮಂದಿಯೆಲ್ಲಾ ಮೂರು ಹೊತ್ತೂ ಹೊಲದಲ್ಲೇ ಇರಬೇಕು. ಕಡ್ಡಿ ನಿಲ್ಲಿಸುವುದು, ದಾರ ಕಟ್ಟುವುದು, ನೀರು ಹಾಯಿಸುವುದು, ವಾರಕ್ಕೆ ಎರಡು ಸಲ ಔಷಧಿ ಸಿಂಪಡಣೆ, ಕಾಯಿ ಬಲಿಯುವ ಮುನ್ನವೇ ಕೀಳಬೇಕು . .  ಒಂದೇ ಎರಡೇ. ಮದ್ಯಾಹ್ನವಿರಲಿ ರಾತ್ರಿಯೂ ಸರಿಯಾಗಿ ನಿದ್ದೆ ಮಾಡಲು ಸಾಧ್ಯವಿಲ್ಲ.

ಇಲ್ಲಿ ನಾನು ಕೊಟ್ಟಿರುವ ಹಾರಕ ಮತ್ತು ಗರ್ಕಿನ್ಸ್ ಕೇವಲ ಉದಾಹರಣೆ ಮಾತ್ರ. ಯಾವುದೇ ಬೆಳೆಗೂ ಇದನ್ನು ಅನ್ವಯಿಸಬಹುದು.

ಎಲ್ಲಾ ಬೆಳೆಗಳಲ್ಲೂ ಇಂದು ಅತಿ ಹೆಚ್ಚು ಇಳುವರಿ ನೀಡುವ ತಳಿ, ತಂತ್ರಜ್ಞಾನ ಬಂದಿವೆ. ಎಕರೆಗೆ ೧೫ ಚೀಲ ಇಳುವರಿ ಕೊಡುತ್ತಿದ್ದ ಘಂಗಡಲೆ ಭತ್ತದ ತಳಿಯ ಜಾಗಕ್ಕೆ ೪೦ ಚೀಲ ಇಳುವರಿ ಕೊಡುವ ಸೋನಾ ಮಸೂರಿ ಬಂದಿದೆ. ಆದರೆ ಖರ್ಚು ಎರಡು ಸಾವಿರದಿಂದ ೨೫ ಸಾವಿರಕ್ಕೆ ಹೆಚ್ಚಿದೆ.

ಇದರ ಇನ್ನೊಂದು ಮಗ್ಗುಲು ನೋಡಿ. ಹೆಚ್ಚು ಇಳುವರಿ ಏನೋ ಬಂತು. ಆದರೆ ಅದಕ್ಕೆ ಮಾರುಕಟ್ಟೆಯೇ ಇಲ್ಲ. ಶೇಖರಣಾ ವ್ಯವಸ್ಥೆ ಇಲ್ಲ. ಮೌಲ್ಯವರ್ಧನೆಗೆ ಆದ್ಯತೆ ಶೂನ್ಯ. ಬೆಳೆದಿದ್ದನ್ನು ರಸ್ತೆಗೆ ಸುರಿಯುವ ಪರಿಸ್ಥಿತಿ.

ಮತ್ತೊಂದು ಅನಾಹುತವೆಂದರೆ ಕೃಷಿಯ ಪ್ರತೀ ಹಂತದಲ್ಲಿ ಸುರಿಯುತ್ತಿರುವ ರಸವಿಷಗಳಿಂದ ಮನುಷ್ಯನ ಆರೋಗ್ಯವೂ ಹಾಳು, ಮಣ್ಣಿನ ಆರೋಗ್ಯವೂ ಹಾಳು. ಹಾಗಾಗಿ ನಮ್ಮ ಕೃಷಿಯನ್ನು ಈ ಲ್ಯಾಬುಗಳಿಂದ ಬಿಡಿಸಿಕೊಳ್ಳಬೇಕಿದೆ.

ಹೆಚ್ಚು ಇಳುವರಿ, ಹೆಚ್ಚು ನೀರು, ಹೆಚ್ಚು ರಸ ವಿಷ, ಹೆಚ್ಚು ಸಾಲ . . . ಎಂಬ ಈ ಅಭಿವೃದ್ಧಿಗೆ ಇನ್ನು ಸಾಕು ಎಂದು ಹೇಳಬೇಕಿದೆ.

(**೭ನೇ ಪುಟಕ್ಕೆ**

ದಾಖಲೆ

# ಆದಿವಾಸಿಗಳ ಪರವಾಗಿ ಧ್ವನಿಯೆತ್ತಿದ್ದು ದೇಶದ್ರೋಹವೇ?

–ಸ್ಟ್ಯಾನ್ ಸ್ವಾಮಿ

**ಎರಡು ವರುಷಗಳ ಹಿಂದೆ ಗಂಗಾ ಶುದ್ಧೀಕರಣಕ್ಕಾಗಿ ಉಪವಾಸ ಕೂತ ಎಂಭತ್ತರ ಹರೆಯದ ಪುರುಷೋತ್ತಮ ಅಗರವಾಲ್ ಅವರ ಬಲಿದಾನದಂತೆಯೇ ಆದಿವಾಸಿಗಳ ಕಲ್ಯಾಣಕ್ಕಾಗಿ ದುಡಿಯುತ್ತಿದ್ದ ಸ್ಟ್ಯಾನ್ ಸ್ವಾಮಿಯವರ ಬಲಿದಾನವಾಗಿದೆ. ಈ ಎರಡೂ ನಮ್ಮ ವ್ಯವಸ್ಥೆಯ ಅಸೂಕ್ಷ್ಮತೆ ಮತ್ತು ಔದಾಸೀನ್ಯಗಳ ಪರಿಣಾಮವೇ ಆಗಿದೆ. ಸ್ಟ್ಯಾನ್ ಸ್ವಾಮಿಯವರ ಸಾವಂತೂ ಹಲವು ನ್ಯಾಯವೇತ್ತರ, ಗಣ್ಯ ವಕೀಲರ, ನಿವೃತ್ತ ನ್ಯಾಯಾಧೀಶರ ಪ್ರಕಾರ 'ಹತ್ಯೆ' ಗೆ ಸಮಾನವಾದ ಅಪರಾಧವೇ ಆಗಿದೆ. ಸ್ವಾಮಿಯವರು ಪೋಲೀಸರ ವಶದಲ್ಲಿದ್ದಾಗಲೇ ನ್ಯಾಯಾಂಗದ ನಿಷ್ಕ್ರಿಯತೆಗೆ ಸಮಾನವಾದ ನಿಧಾನಗತಿಯಿಂದಾಗಿ ಪ್ರಾಣತ್ಯಾಗ ಮಾಡಬೇಕಾಗಿ ಬಂದದ್ದು ಇಂದಿನ 'ವ್ಯವಸ್ಥೆ'ಯ ನಿಷ್ಕರುಣೆಗೆ ಸಾಕ್ಷಿಯಾಗಿದೆ. ಸ್ಟ್ಯಾನ್ ಸ್ವಾಮಿಯವರು ತಮ್ಮ ಸಾವಿಗೆ ಮುನ್ನ ಬರೆದ ಈ ಲೇಖನವು ಈ ಇಡೀ ಪ್ರಕರಣದ ಬಗ್ಗೆ ಎಲ್ಲವನ್ನೂ ಹೇಳುತ್ತದೆ.**



**(ಆದಿವಾಸಿ ಪಾತಾಳ್‌ಗಡಿ ಚಳವಳಿಯನ್ನು ಬೆಂಬಲಿಸಿದ್ದಕ್ಕಾಗಿ ಫಾ.ಸ್ಟಾನ್‌ಸ್ವಾಮಿಯವರ ಮೇಲೆ ದ್ರೇಶದ್ರೋಹದ ಆಪಾದನೆಯನ್ನು ಹೊರಿಸಿ ಜಾರ್ಖಂಡ್‌ನ ಅಧಿಕಾರಿಗಳು ಪ್ರಕರಣವನ್ನು ದಾಖಲಿಸಿದ ನಂತರದಲ್ಲಿ, ಫಾ. ಸ್ಟಾನ್‌ಸ್ವಾಮಿಯವರು, ತಮ್ಮನ್ನು 'ದೇಶದ್ರೋಹಿ'ಯನ್ನಾಗಿ ಮಾಡಿರುವ ಎಲ್ಲ ಚಟುವಟಿಕೆಗಳ ಪಟ್ಟಿಮಾಡಿದ್ದಾರೆ ಈ ತೆರೆದ ಪತ್ರದಲ್ಲಿ. ಇದು ಮೊದಲು ಪ್ರಕಟಗೊಂಡಿದ್ದು 01 ಆಗಸ್ಟ್ 2018 ರಲ್ಲಿ. ಅವರ ನೆನಪಿನಲ್ಲಿ ಇಂದು ಇದನ್ನು ಮರುಪ್ರಕಟಿಸಲಾಗುತ್ತಿದೆ.)**

ಕಳೆದೆರಡು ದಶಕಗಳಲ್ಲಿ, ಆದಿವಾಸಿ ಜನರೊಂದಿಗೆ ಘನತೆಯ ಮತ್ತು ಸ್ವಾಭಿಮಾನದ ಬದುಕಿಗಾಗಿ ಅವರು ನಡೆಸುತ್ತಿರುವ ಹೋರಾಟಗಳೊಂದಿಗೆ ನನ್ನನ್ನು ನಾನು ಗುರುತಿಸಿಕೊಂಡಿದ್ದೇನೆ. ನಾನೊಬ್ಬ ಬರಹಗಾರನಾಗಿ ಅವರು ಎದುರಿಸುತ್ತಿರುವ ವಿವಿಧ ಸಮಸ್ಯೆಗಳನ್ನು ವಿಶ್ಲೇಷಿಸುವ ಪ್ರಯತ್ನ ಮಾಡಿದ್ದೇನೆ. ಆ ಸಂದರ್ಭಗಳಲ್ಲಿ, ಭಾರತೀಯ ಸಂವಿಧಾನವು ತೋರಿದ ಬೆಳಕಿನಲ್ಲಿ, ಸರ್ಕಾರದ ಅನೇಕ ನೀತಿ ಮತ್ತು ಕಾನೂನುಗಳ ಬಗೆಗೆ ನನ್ನ ಭಿನ್ನಮತವನ್ನು ಬಹಳ ಸ್ಪಷ್ಟವಾಗಿ ವ್ಯಕ್ತಪಡಿಸಿದ್ದೇನೆ. ಸರ್ಕಾರ ಮತ್ತು ಆಡಳಿತ ವರ್ಗಗಳು ತೆಗೆದುಕೊಂಡಿರುವ ಅನೇಕ ಕ್ರಮಗಳ ಸಿಂಧುತ್ವವನ್ನು, ನ್ಯಾಯಸಮ್ಮತತೆಯನ್ನು, ಔಚಿತ್ಯವನ್ನು ಪ್ರಶ್ನಿಸಿದ್ದೇನೆ.

ಪಾತಾಳ್‌ಗಡಿ ವಿಷಯದಲ್ಲಿ, 'ಆದಿವಾಸಿಗಳು ಇದನ್ನೇಕೆ ಮಾಡುತ್ತಿದ್ದಾರೆ?' ಎಂದು ಪ್ರಶ್ನಿಸಿದ್ದೇನೆ. ಅವರ ತಾಳ್ಮೆಯ ಮಿತಿಮೀರಿ ಅವರನ್ನು ಶೋಷಿಸಲಾಗಿದೆ, ದಮನಿಸಲಾಗಿದೆ ಎನಿಸುತ್ತದೆ ನನಗೆ. ಅವರ ನೆಲದಲ್ಲಿ ಅಗೆದು ತೆಗೆದಿರುವ ಅಮೂಲ್ಯ ಖನಿಜ ಸಂಪತ್ತು ಹೊರಗಿನ ಕೈಗಾರಿಕೋದ್ಯಮಿಗಳನ್ನು ಮತ್ತು ವ್ಯಾಪಾರಸ್ಥರನ್ನು ಕುಬೇರರನ್ನಾಗಿಸಿದೆ ಮತ್ತು ಆದಿವಾಸಿ ಜನರನ್ನು ಹಸಿವಿನಿಂದ ಸಾಯುವಷ್ಟು ಕಡುಬಡತನಕ್ಕೆ ದೂಡಿದೆ.

ಅಲ್ಲಿನ ಉತ್ಪನ್ನಗಳಲ್ಲಿ ಅವರಿಗೆ ಯಾವ ಪಾಲನ್ನೂ ಕೊಟ್ಟಿಲ್ಲ. ಅವರ ಏಳ್ಗೆಗಾಗಿ ರೂಪಿಸಿರುವ ನೀತಿಗಳು ಮತ್ತು ಕಾನೂನುಗಳನ್ನು ಉದ್ದೇಶಪೂರ್ವಕವಾಗಿ ಜಾರಿಗೆ ತಂದಿಲ್ಲ. ಹಾಗಾಗಿ 'ಸಾಕು, ಇನ್ನು ಸಹಿಸಲಾಗದು' ಎನ್ನುವುದು ಅವರಿಗೆ ಮನವರಿಕೆಯಾಗಿದೆ ಮತ್ತು ಅವರು ಪಾತಾಳ್‌ಗಡಿಗಳ ಮೂಲಕ ತಮ್ಮ ಗ್ರಾಮ ಸಭೆಗಳನ್ನು ಬಲಪಡಿಸಿಕೊಳ್ಳುತ್ತಾ ತಮ್ಮ ಅಸ್ಮಿತೆಯನ್ನು ಮರುಶೋಧಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ. ಅವರ ಈ ನಡೆ ಅರ್ಥವಾಗುವಂಥದ್ದೇ.

ನಾನು ಎತ್ತಿರುವ ಕೆಲ ಪ್ರಶ್ನೆಗಳು ಇಂತಿವೆ:

1. ಸಂವಿಧಾನದ 5ನೇ ಶೆಡ್ಯೂಲನ್ನು(ಭಾರತೀಯ ಸಂವಿಧಾನ, 244(1)ನೇ ಕಲಮು) ಜಾರಿಗೊಳಿಸಿಲ್ಲವೇಕೆ ಎಂದು ಪ್ರಶ್ನಿಸಿದ್ದೇನೆ. ರಾಜ್ಯದಲ್ಲಿನ ಆದಿವಾಸಿಗಳ ರಕ್ಷಣೆ, ಯೋಗಕ್ಷೇಮ, ಅಭಿವೃದ್ಧಿ ಮತ್ತಿತರ ಕಾಳಜಿಗಳ ಬಗೆಗೆ ರಾಜ್ಯದ ರಾಜ್ಯಪಾಲರಿಗೆ, ಆದಿವಾಸಿ ಸಮುದಾಯದವರೇ ಸದಸ್ಯರಾಗಿರುವ 'ಬುಡಕಟ್ಟು ಸಲಹಾ ಮಂಡಳಿ'ಯು ಸಲಹೆ ನೀಡತಕ್ಕದ್ದು ಎಂದು ಅದು ಸೂಚಿಸುತ್ತದೆ. ರಾಜ್ಯಪಾಲರು ಆದಿವಾಸಿ ಜನರ ಸಾಂವಿಧಾನಿಕ ಪಾಲಕರಾಗಿದ್ದು, ಆದಿವಾಸಿಗಳ ಯೋಗಕ್ಷೇಮದ ದೃಷ್ಟಿಯಿಂದ ಅವರು ತಾವೇ ಕಾನೂನುಗಳನ್ನು ಮಾಡುವ ಅಧಿಕಾರವುಳ್ಳವರೂ, ಸಂಸತ್ತು ಅಥವಾ ವಿಧಾನಸಭೆಗಳು ರೂಪಿಸಿದ ಕಾನೂನುಗಳನ್ನು ರದ್ದುಪಡಿಸುವ ಅಧಿಕಾರವುಳ್ಳವರೂ ಆಗಿದ್ದಾರೆ. ಆದರೆ, ವಾಸ್ತವವಾಗಿ, ಈ ಏಳು ದಶಕಗಳಲ್ಲಿ, ರಾಜ್ಯದ ಚುನಾಯಿತ ಸರ್ಕಾರದೊಂದಿಗೆ ಸೌಹಾರ್ದದಿಂದ ಕೆಲಸ ಮಾಡಬೇಕು ಎನ್ನುವ ಕಾರಣವನ್ನೇ ಮುಂದು ಮಾಡಿಕೊಂಡು, ಯಾವುದೇ ರಾಜ್ಯದ ರಾಜ್ಯಪಾಲರು ಆದಿವಾಸಿ ಜನರ ಒಳಿತಿಗಾಗಿ ನಿರ್ಧಾರ ಕೈಗೊಳ್ಳುವ ತಮ್ಮ ಸಾಂವಿಧಾನಿಕ ಅಧಿಕಾರವನ್ನು ಬಳಸಿಲ್ಲ. ಬುಡಕಟ್ಟು ಸಲಹಾ ಮಂಡಳಿಯ ಸಭೆಗಳು ನಡೆಯುವುದೇ ಅಪರೂಪ. ಅಂಥ ಸಭೆಯನ್ನು ಕರೆಯುವುದೂ, ಅಧ್ಯಕ್ಷತೆ ವಹಿಸುವುದೂ ಕೂಡಾ ರಾಜ್ಯದ ಮುಖ್ಯಮಂತ್ರಿಗಳೇ ಆಗಿರುತ್ತಾರೆ ಮತ್ತು ಅದನ್ನು ನಿಯಂತ್ರಿಸುವುದು ಆಡಳಿತಾರೂಢ ಪಕ್ಷವೇ ಆಗಿರುತ್ತದೆ. ಹಾಗಾಗಿ ಬುಡಕಟ್ಟು ಸಲಹಾ ಮಂಡಳಿಯು ಹಲ್ಲುಕಿತ್ತ ಹಾವಿನಂತಾಗಿದೆ. ದಿಟವಾಗಿಯೂ ಇದು ಆದಿವಾಸಿ ಜನರಿಗೆ ಮಾಡಿರುವ ಸಾಂವಿಧಾನಿಕ ವಂಚನೆಯಾಗಿದೆ.

2. ಪಂಚಾಯತ್ ಕಾಯ್ದೆ(ಪಿಇಎಸ್‌ಎ–ಪಂಚಾಯತ್ ಎಕ್ಸ್‌ಟೆನ್ಶನ್ ಟು ಶೆಡ್ಯೂಲ್ಡ್ ಏರಿಯಾಸ್, 1996ರ ನಂ.40)ಯನ್ನು ಏಕೆ ಕಡೆಗಣಿಸಲಾಗಿದೆ ಎಂದು ಪ್ರಶ್ನಿಸಿದ್ದೇನೆ. ಭಾರತದಲ್ಲಿನ ಆದಿವಾಸಿ ಸಮುದಾಯಗಳು ಗ್ರಾಮ ಸಭೆಗಳ ಮೂಲಕ ಸ್ವಯಮಾಡಳಿತದ ಶ್ರೀಮಂತವಾದ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಹೊಂದಿವೆ ಎಂಬ ಸತ್ಯವನ್ನು ಮೊದಲ ಬಾರಿಗೆ ಗುರುತಿಸಿರುವ ಕಾಯ್ದೆ ಇದಾಗಿದೆ. ಆದರೆ, ವಾಸ್ತವವಾಗಿ, ಎಲ್ಲ ಒಂಬತ್ತು ರಾಜ್ಯಗಳಲ್ಲೂ ಸಂಸತ್ತಿನ ಈ ಕಾಯ್ದೆಯನ್ನು ಉದ್ದೇಶಪೂರ್ವಕವಾಗಿ ಜಾರಿಗೊಳಿಸಿಲ್ಲ. ಇದರರ್ಥ, ಬಂಡವಾಳಶಾಹಿ ಆಡಳಿತ ವರ್ಗಕ್ಕೆ ಆದಿವಾಸಿ ಜನರ ಸ್ವಯಮಾಡಳಿತಬೇಕಾಗಿಲ್ಲ

3. ಸರ್ವೋಚ್ಚ ನ್ಯಾಯಾಲಯದ 1997ರ ಸಮತಾ ತೀರ್ಪಿನ(1997ರ ಸಿವಿಲ್ ಅಪೀಲ್ ನಂ. 4601–2) ಬಗ್ಗೆ ಸರ್ಕಾರದ ಮೌನವನ್ನು ಪ್ರಶ್ನಿಸಿದ್ದೇನೆ. ನಿಗದಿತ ಸ್ಥಳಗಳಲ್ಲಿರುವ ಆದಿವಾಸಿ ಸಮುದಾಯಗಳಿಗೆ ಬಹಳ ದೊಡ್ಡ ಸಮಾಧಾನವನ್ನು ತಂದುಕೊಟ್ಟ ತೀರ್ಪದು. ಜಾಗತೀಕರಣ, ಉದಾರೀಕರಣ, ವ್ಯಾಪಾರೀಕರಣ, ಖಾಸಗೀಕರಣದಂತಹ ನೀತಿಗಳ ಪರಿಣಾಮವಾಗಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಬಂಡವಾಳ ಸಂಸ್ಥೆಗಳು ಖನಿಜ ಸಂಪತ್ತಿನ ಗಣಿಗಾರಿಕೆ ನಡೆಸುವ ಸಲುವಾಗಿ, ನಿರ್ದಿಷ್ಟವಾಗಿ ಮಧ್ಯಭಾರತದ ಆದಿವಾಸಿಗಳ ನೆಲೆಗಳನ್ನು ಆಕ್ರಮಿಸಲಾರಂಭಿಸಿದ ಕಾಲದಲ್ಲಿ ಬಂದಂತಹ ತೀರ್ಪು ಇದಾಗಿದೆ. ಸರ್ಕಾರೀ ವ್ಯವಸ್ಥೆಯು ಈ ಸಂಸ್ಥೆಗಳಿಗೆ ಸಂಪೂರ್ಣ ಸಹಕಾರವನ್ನು ಕೊಟ್ಟಿತು. ಆದಿವಾಸಿ ಜನರ ಎಲ್ಲಾ ರೀತಿಯ ಪ್ರತಿರೋಧವನ್ನೂ ಬಲಪ್ರಯೋಗದ ಮೂಲಕ ಹತ್ತಿಕ್ಕಲಾಯಿತು. ತಮ್ಮ ನೆಲದಲ್ಲಿ ಖನಿಜ ಸಂಪತ್ತನ್ನು ಅಗೆದು ತೆಗೆಯುವುದರ ಮೇಲೆ ನಿಯಂತ್ರಣ ಹೊಂದುವಂತೆ ಮತ್ತು ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಅನುಕೂಲವಾಗುವಂತೆ ಆದಿವಾಸಿಗಳಿಗೆ ಭದ್ರತೆಯನ್ನು ಒದಗಿಸುವ ಸಲುವಾಗಿ ಬಂದ ತೀರ್ಪು ಇದಾಗಿತ್ತು. ಆದರೆ, ವಾಸ್ತವವಾಗಿ, ಸರ್ಕಾರವು ನ್ಯಾಯಾಲಯದ ಈ ತೀರ್ಪನ್ನು ಕಡೆಗಣಿಸಿತು. ಇದರಿಂದ ಬಾಧಿತವಾದ ಸಮುದಾಯಗಳು ನ್ಯಾಯಾಲಯದಲ್ಲಿ ಹಲವಾರು ದಾವೆಗಳನ್ನು ಹೂಡಿದವು. ಆದರೆ ವಸಾಹತುಶಾಹಿ ಆಡಳಿತಗಾರರ 'ಪರಮ ಸ್ವಾಮ್ಯದ ಕಾನೂನು'ಗಳಿಗೆ ಜೀವಕೊಟ್ಟು, ಆದಿವಾಸಿಗಳನ್ನು ಒಕ್ಕಲೆಬ್ಬಿಸಲು ಮತ್ತು ಅವರ ನೆಲೆಗಳಲ್ಲಿನ ಖನಿಜ ಸಂಪತ್ತನ್ನು ಲೂಟಿ ಮಾಡಲು ಅದನ್ನು ಬಳಸಿಕೊಳ್ಳಲಾಯಿತು.

2006 ರಿಂದ 2011 ರವರೆಗೆ, ಜಾರಿಯಾದಾಗಿನಿಂದಲೂ, ದೇಶಾದ್ಯಂತ ಹಕ್ಕುಪತ್ರಗಳಿಗಾಗಿ ಸುಮಾರು 30 ಲಕ್ಷ ಅರ್ಜಿಗಳು ಬಂದಿವೆ. ಅವುಗಳಲ್ಲಿ ಸುಮಾರು 11 ಲಕ್ಷ ಅರ್ಜಿಗಳು ಸ್ವೀಕೃತವಾಗಿದ್ದು, 14 ಲಕ್ಷ ಅರ್ಜಿಗಳು ತಿರಸ್ಕೃತವಾಗಿವೆ ಮತ್ತು 5 ಲಕ್ಷ ಅರ್ಜಿಗಳು ತಡೆಹಿಡಿಯಲ್ಪಟ್ಟಿವೆ. ಇತ್ತೀಚೆಗೆ ಜಾರ್ಖಂಡ್ ಸರ್ಕಾರವು ಕೈಗಾರಿಕೆಗಳಿಗಾಗಿ ಅರಣ್ಯ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಗ್ರಾಮಸಭೆಗಳನ್ನು ದೂರವಿರಿಸಲು ಪ್ರಯತ್ನಿಸುತ್ತಿದೆ.

5. 'ಭೂಮಿಯ ಮಾಲೀಕತ್ವವನ್ನು ಹೊಂದಿರುವವರು ಅದರಡಿಯಿರುವ ಖನಿಜಗಳಿಗೂ ಮಾಲೀಕರು' ಎನ್ನುವ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು(ಎಸ್‌ಸಿ: ಸಿವಿಲ್ ಅಪೀಲ್ ನಂ 4549; 2000) ಜಾರಿಗೊಳಿಸುವುದಕ್ಕೆ ಸರ್ಕಾರವು ಹಿಂದೇಟು ಹಾಕುತ್ತಿರುವುದನ್ನು ಪ್ರಶ್ನಿಸಿದ್ದೇನೆ. ತೀರ್ಪಿನಲ್ಲಿ ಉಲ್ಲೇಖಿಸಿರುವುದೇನೆಂದರೆ, "ರಾಜ್ಯದಲ್ಲಿರುವ ಎಲ್ಲ ಖನಿಜ ಸಂಪತ್ತಿನ ಭೂಮಿಯಡಿಯ ಹಕ್ಕುಗಳನ್ನು ಘೋಷಿಸುವ ಯಾವ ಅಂಶವೂ ಕಾನೂನಿನಲ್ಲಿಲ್ಲ ಎಂಬುದು, ಮತ್ತು ಯಾವುದಾದರೂ ನ್ಯಾಯಯುತವಾದ ಪ್ರಕ್ರಿಯೆಗಳಿಗಾಗಿ ಆ ಸಂಪತ್ತುಗಳಿಂದ ವಂಚಿತರಾಗಿರುವುದರ ಹೊರತಾಗಿ, ಭೂಮಿಯಡಿಯ ಖನಿಜ ಮತ್ತಿತರ ಸಂಪತ್ತುಗಳು ಸಾಮಾನ್ಯವಾಗಿ ಭೂಮಿಯ ಮಾಲೀಕತ್ವವನ್ನು ಹೊಂದಿರುವವರದ್ದೇ ಆಗಿರಬೇಕು ಎನ್ನುವುದು ನಮ್ಮ ಅಭಿಪ್ರಾಯ". ಅವರ ನೆಲದಲ್ಲಿರುವ ಅಮೂಲ್ಯ ಖನಿಜ ಸಂಪತ್ತನ್ನು ಸರ್ಕಾರೀ ಮತ್ತು ಖಾಸಗೀ ಕಂಪೆನಿಗಳು ಲೂಟಿ ಹೊಡೆಯುತ್ತಿವೆ. ದೇಶದಲ್ಲಿರುವ 219 ಕಲ್ಲಿದ್ದಲು ಗಣಿಗಳಲ್ಲಿ, 214 ಗಣಿಗಳು ಅಕ್ರಮವಾಗಿವೆ ಎಂದು ಸರ್ವೋಚ್ಚ ನ್ಯಾಯಾಲಯವು ಘೋಷಿಸಿದ್ದು, ಅಕ್ರಮ ಗಣಿಗಾರಿಕೆ ನಡೆಸಿದ್ದಕ್ಕಾಗಿ ದಂಡ ಹಾಕಿ, ಅವುಗಳನ್ನು ಮುಚ್ಚಲು ಆದೇಶಿಸಿದೆ. ಆದರೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು,

ಅಕ್ರಮ ಗಣಿಗಳನ್ನು ಹರಾಜು ಹಾಕಿ ಮರುಹಂಚಿಕೆ ಮಾಡುವ ಮೂಲಕ ಸಕ್ರಮವಾಗಿ ಕಾಣುವಂತೆ ಮಾಡುವ ಒಳದಾರಿಗಳನ್ನು ಕಂಡುಕೊಂಡಿವೆ!

. ಸರ್ವೋಚ್ಚ ನ್ಯಾಯಾಲಯವು ಉಲ್ಲೇಖಿಸಿರುವ, 'ಒಬ್ಬ ವ್ಯಕ್ತಿಯು ಹಿಂಸೆಯ ದಾರಿಯನ್ನು ಹಿಡಿದ ಅಥವಾ ಜನರನ್ನು ಹಿಂಸೆಯ ದಾರಿಗೆಳೆದ ಅಥವಾ ಹಿಂಸೆಯಿಂದ ಸಾರ್ವಜನಿಕ ಅಶಾಂತಿಯನ್ನು ಸೃಷ್ಟಿಸಿದ ಅಥವಾ ಹಿಂಸೆಯನ್ನು ಪ್ರಚೋದಿಸಿದ ಕಾರಣಗಳ ಹೊರತಾಗಿ, ಕೇವಲ ಒಂದು ನಿಷೇಧಿತ ಸಂಸ್ಥೆಯಲ್ಲಿ ಸದಸ್ಯತ್ವ ಪಡೆದ ಮಾತ್ರಕ್ಕೇ ಆ ವ್ಯಕ್ತಿಯನ್ನು ಅಪರಾಧಿ ಎನ್ನಲಾಗುವುದಿಲ್ಲ(ಎಸ್‌ಸಿ: ಕ್ರಿಮಿನಲ್ ಅಪೀಲ್ ನಂ. 889; 2007)' ಎಂಬ ಅಂಶವನ್ನೇಕೆ ಕಡೆಗಣಿಸಲಾಗುತ್ತಿದೆ ಎಂದು ಪ್ರಶ್ನಿಸಿದ್ದೇನೆ. 'ಸಹಭಾಗಿತ್ವದ ಅಪರಾಧ' ಎನ್ನುವ ಸಿದ್ಧಾಂತವನ್ನು ನ್ಯಾಯಾಲಯವು ತಿರಸ್ಕರಿಸಿದೆ. 'ನಕ್ಸಲರ ಸಹಾಯಕರು' ಅನ್ನುವ ಅನುಮಾನದ ಮೇಲೆ ಹಲವಾರು ಯುವಜನರನ್ನು ಜೈಲಿನಲ್ಲಿಟ್ಟಿರುವುದು ಈಗ ಎಲ್ಲರಿಗೂ ಗೊತ್ತಿರುವ ಸಂಗತಿ. ಬಂಧಿಸಿದ ನಂತರ ಇನ್ನಿತರ ದಂಡನಾ ವಿಧಿಗಳನ್ನು ಸೇರಿಸಲಾಗುತ್ತದೆ. ಪೋಲೀಸರು ಯಾರನ್ನಾದರೂ ಹಿಡಿಯಲು ಬಯಸಿದರೆ ಅವರ ಮೇಲೆ ಹಾಕಲು ಸುಲಭಕ್ಕೆ ಸಿಗುವುದು ಇಂಥ ಹಣೆಪಟ್ಟಿಗಳ ಆರೋಪಗಳೇ. ಈ ಆರೋಪಕ್ಕೆ ಯಾವ ಸಾಕ್ಷಿಯ ಅಥವಾ ಸಬೂತಿನ ಅವಶ್ಯಕತೆ ಇಲ್ಲ. ಅತ್ತ ನೋಡಿದರೆ, ಒಂದು ನಿಷೇಧಿತ ಸಂಸ್ಥೆಯಲ್ಲಿ ಸದಸ್ಯತ್ವ ಹೊಂದಿರುವುದೂ ಕೂಡ ವ್ಯಕ್ತಿಯನ್ನು ಅಪರಾಧಿಯನ್ನಾಗಿ ಮಾಡುವುದಿಲ್ಲ ಎಂದು ಸರ್ವೋಚ್ಚ ನ್ಯಾಯಾಲಯ ಹೇಳುತ್ತದೆ. ಈ ಕಾನೂನು ಸುವ್ಯವಸ್ಥೆಯ ಪಾಲಕರು ನ್ಯಾಯಾಂಗದಿಂದ ಅದೆಷ್ಟು ದೂರವಾಗಿದ್ದಾರೆ!

7. ಇತ್ತೀಚೆಗೆ ಜಾರ್ಖಂಡ್ ಸರ್ಕಾರವು '2013ರ ಭೂ ಸ್ವಾಧೀನ ಕಾಯ್ದೆ'ಗೆ ತಂದಿರುವ ತಿದ್ದುಪಡಿಯನ್ನೂ ನಾನು ಪ್ರಶ್ನಿಸಿದ್ದೇನೆ. ಆದಿವಾಸಿ ಸಮುದಾಯಕ್ಕಿದು ಮರಣಶಾಸನವಾಗಿದೆ. ಪರಿಸರವನ್ನು, ಬಾಧಿತ ಜನರ ಸಾಮಾಜಿಕ ಸಂಬಂಧಗಳನ್ನು ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ರಕ್ಷಿಸುವ ಗುರಿಯನ್ನಿಟ್ಟುಕೊಂಡಿದ್ದ 'ಸಾಮಾಜಿಕ ಪರಿಣಾಮದ ಮೌಲ್ಯಮಾಪನ'(ಸೋಶಿಯಲ್ ಇಂಪ್ಯಾಕ್ಟ್ ಅಸೆಸ್‌ಮೆಂಟ್)ದ ಅಗತ್ಯವನ್ನು ಈ ತಿದ್ದುಪಡಿಯಲ್ಲಿ ಕೈಬಿಡಲಾಗಿದೆ. ಅತ್ಯಂತ ಅಪಾಯಕಾರಿಯಾದ ಅಂಶವೇನೆಂದರೆ, ಯಾವುದೇ ಕೃಷಿ ಭೂಮಿಯನ್ನು ಕೃಷಿಯೇತರ/ವ್ಯಾಪಾರೀ ಉದ್ದೇಶಗಳಿಗಾಗಿ ಬಳಸಲು ಸರ್ಕಾರವು ಅನುಮತಿಯನ್ನು ನೀಡಬಹುದಾಗಿದೆ. ಹಾಗಾಗಿ ಯಾವುದನ್ನೂ ಮತ್ತು ಎಲ್ಲವನ್ನೂ ಇದು ಒಳಗೊಳ್ಳಬಹುದಾಗಿದೆ.

8. 'ಭೂ ಬ್ಯಾಂಕ್' ಪರಿಕಲ್ಪನೆಯನ್ನೂ ನಾನು ಪ್ರಶ್ನಿಸಿದ್ದೇನೆ. ಇದು ಆದಿವಾಸಿ ಜನರನ್ನು ಎತ್ತಂಗಡಿ ಮಾಡುವ ಇತ್ತೀಚಿನ ಹುನ್ನಾರ ಎಂದು ನನಗೆ ಕಾಣುತ್ತದೆ. ಸರ್ಕಾರವು, ಫೆಬ್ರವರಿ 2017 ರಲ್ಲಿ ನಡೆದ 'ಜಾರ್ಖಂಡ್‌ನತ್ತ ಓಟ' ಎಂಬ ಉದ್ಯಮ ಮೇಳದ ಸಂದರ್ಭದಲ್ಲಿ, ಭೂ ಬ್ಯಾಂಕ್‌ನಲ್ಲಿ ಈಗಾಗಲೇ 21 ಎಕರೆ ಪ್ರದೇಶವಿದ್ದು, ಅದರಲ್ಲಿ 10 ಎಕರೆ ಭೂಮಿಯನ್ನು ಉದ್ಯಮಿಗಳಿಗೆ ಹಂಚಿಕೆ ಮಾಡಲು ಸರ್ಕಾರ ಸಿದ್ಧವಿದೆ ಎಂದು ಘೋಷಿಸಿತು.

'ಗೈರ್ ಮಜುರ್ವಾ' (ಬೀಳು ಭೂಮಿ) ಭೂಮಿಯು 'ಖಾಸ್'(ಖಾಸಗೀ) ಅಥವಾ 'ಆಮ್'(ಊರೊಟ್ಟಿನ ಸಾಮಾನ್ಯ ಗೋಮಾಳ) ಆಗಿರಬಹುದು. ಸಾಂಪ್ರದಾಯಿಕವಾಗಿ, ವೈಯಕ್ತಿಕ ಆದಿವಾಸಿ ಕುಟುಂಬಗಳು ಅಥವಾ ಸಮುದಾಯಗಳು ಇದರ ಸ್ವಾಮ್ಯವನ್ನು ಹೊಂದಿದ್ದು, ಅದನ್ನು ಬಳಸಿಕೊಳ್ಳುತ್ತಿರುತ್ತಾರೆ(ಜಮಾಬಂದಿ ಹಕ್ಕುಪತ್ರಗಳನ್ನಿಟ್ಟುಕೊಂಡು). ಈಗ ಆಘಾತಕರವಾಗಿ ಸರ್ಕಾರವು ಎಲ್ಲ 'ಜಮಾಬಂದಿ' ಹಕ್ಕುಪತ್ರಗಳನ್ನು ರದ್ದುಮಾಡಿದೆ. ಅಷ್ಟೇ ಅಲ್ಲದೆ, ಎಲ್ಲ 'ಗೈರ್ ಮಜುರ್ವಾ' ಭೂಮಿಯು ಸರ್ಕಾರದ್ದು ಮತ್ತು ಸರ್ಕಾರವು ಅದನ್ನು ಸಣ್ಣ ಅಥವಾ ದೊಡ್ಡ ಕೈಗಾರಿಕೆಗಳನ್ನು ಆರಂಭಿಸುವ ಯಾರಿಗಾದರೂ (ಕೈಗಾರಿಕೋದ್ಯಮಿಗಳಿಗೆ ಎಂದು ಓದಿಕೊಳ್ಳಿ) ಹಂಚಿಕೆ ಮಾಡುವ ಸ್ವಾತಂತ್ರವನ್ನು ಹೊಂದಿದೆ ಎಂದು ಸಮರ್ಥಿಸಿಕೊಳ್ಳುತ್ತಿದೆ.

ತಮ್ಮ ಭೂಮಿಯು ಕೈತಪ್ಪಿಹೋಗುತ್ತಿರುವ ಬಗ್ಗೆ ಜನರು ಕತ್ತಲಲ್ಲಿದ್ದಾರೆ. ಬುಡಕಟ್ಟು ಸಲಹಾ ಮಂಡಳಿಯು 5ನೇ ಶೆಡ್ಯೂಲ್‌ನಲ್ಲಿ ಅಗತ್ಯವಾಗಿರುವ ಅನುಮೋದನೆಯನ್ನು ಇನ್ನೂ ಮಾಡಿಲ್ಲ, ಗ್ರಾಮ ಸಭೆಗಳು ಪಂಚಾಯತ್ ಕಾಯ್ದೆಯಡಿ ಅಗತ್ಯವಾಗಿರುವ ಒಪ್ಪಿಗೆಯನ್ನು ಇನ್ನೂ ಕೊಟ್ಟಿಲ್ಲ, ಬಾಧಿತ ಆದಿವಾಸಿ ಜನರು ಭೂಸ್ವಾಧೀನ ಕಾಯ್ದೆ(2013)ಯಂತೆ ಅಗತ್ಯವಿರುವ ಸಮ್ಮತಿಯನ್ನು ಇನ್ನೂ ಸೂಚಿಸಿಲ್ಲ.

ಮೇಲ್ಕಾಣಿಸಿರುವ ಎಲ್ಲ ಪ್ರಶ್ನೆಗಳನ್ನೂ ನಾನು ನಿರಂತರವಾಗಿ ಎತ್ತುತ್ತಾ ಬಂದಿದ್ದೇನೆ. ಇದು ನನ್ನನ್ನು 'ದೇಶದ್ರೋಹಿ'ಯನ್ನಾಗಿ ಮಾಡುವುದಾದರೆ, ಹಾಗೇ ಆಗಲಿ!

**(ಕನ್ನಡಕ್ಕೆ:ರೇಖಾಂಬ ಟಿ.ಎಲ್**

**ಕೃಪೆ:*ಜನತಾ*, ಜುಲೈ,೧೮, ೨೦೨೧)**

**ಯುವ ರಂಗಕರ್ಮಿ–ಕಲಾವಿದ ಚನ್ನಕೇಶವ, ಹಿರಿಯ ರಾಜಕೀಯ ಮುತ್ಸದ್ದಿ ಜಿ. ಮಾದೇಗೌಡ, ಪತ್ರಕರ್ತ ಮತ್ತು ವೃತ್ತಿ ರಂಗಭೂಮಿ ಇತಿಹಾಸಕಾರ ಗುಡಿಹಳ್ಳಿ ನಾಗರಾಜ ಮತ್ತು ಹಿರಿಯ ವೈದ್ಯೆ ಮತ್ತು ಲೇಖಕಿ ಎಚ್, ಗಿರಿಜಮ್ಮ ಅವರ ನಿಧನಕ್ಕೆ 'ಹೊಸ ಮನುಷ್ಯ' ತನ್ನ ತೀವ್ರ ಸಂತಾಪಗಳನ್ನು ವ್ಯಕ್ತಪಡಿಸುತ್ತದೆ–ಸಂ.**

**ಕಾವ್ಯಾಂಜಲಿ**

## ಪಾದ್ರಿ ಸ್ಟ್ಯಾನ್ ಸ್ವಾಮಿ



ತಂದೆಯೇ ನಮ್ಮನ್ನು ಕ್ಷಮಿಸು
ನಾವೇನು ಮಾಡುತ್ತಿದ್ದೇವೆ? ನಮಗೆ ತಿಳಿಯದು ನಮಗಿಷ್ಟೇ ಗೊತ್ತಿರುವುದು
ಬಾಯಾರಿದರೂ, ಕೈ ನಡುಗಿದರೂ, ಲೋಟವನೆತ್ತಿ ನೀರು ಕುಡಿಯಲಾಗದೆ
ಹೀರುಗೊಳವೆ ಕೇಳಿದರೆ
ದೇವರಂಥ ಮನುಷ್ಯನಿಗೂ ಕೊಡದೆ ಸುಮ್ಮನಿರಬೇಕೆಂದು!
ನೀನು ಮೆತ್ತಗಾಗುತ್ತಾ ಹೋಗುತ್ತಿದ್ದರೂ
ನಮಗೇನೂ ಅನಿಸುವುದೇ ಇಲ್ಲ, ಗಾಬರಿ–ಆತಂಕ ಉಹುಂ ಏನೇನೂ
ಆಗುವುದಿಲ್ಲ. . . .
ನೀವು ಅವರಿಗೆ ಹೇಳಿದಿರಿ–ಇಲ್ಲ ನನ್ನ ಕೈಲಾಗುತ್ತಿಲ್ಲ, ಮೀಯಲು, ಉಣ್ಣಲು,
ಉಹುಂ ಒಂದು ಹುಲ್ಲುಕಡ್ಡಿಯನೆತ್ತಿ ನಾನಾಗೇ ಇಡಲಾರೆ,
ಇನ್ನೇನು ಸಾಯಬಹುದೆಂದು.
ಆದರವರು ತೊರೆದರು, ನಿನ್ನಷ್ಟಕ್ಕೇ ನಿನ್ನನ್ನು ಬಿಟ್ಟರು. ಕಣ್ಣೆತ್ತಿ ಕೂಡ
ನೋಡಲಿಲ್ಲ
ನಿನ್ನನ್ನಷ್ಟೇ ಅಲ್ಲ ಮಾನವತೆಯನ್ನು...

೨೪೪ ದಿನ ನೋಯಲು ಬಿಟ್ಟು, ಜಾಮೀನು ಕೊಡದೆ ಜೈಲಿನಲ್ಲೇ ಇಟ್ಟು,
ಪಾರ್ಕಿನ್‌ಸನ್–ಕೋವಿಡ್ ದಾಳಿಗೀಡಾಗಿ ನೀನು ತೇಲುಗಣ್ಣು
ಮೇಲುಗಣ್ಣಾಗಲು ಅಳವಡಿಸಿದರು ವೆಂಟಿಲೇಟರು

ಜಾಮೀನು ನೀಡಬೇಕೋ ಬೇಡವೋ?
ವಿಚಾರಣೆಯ ದಿನ. ಇಂದಲ್ಲ, ನಾಳೆ ಎಂದು ಮುಂದೂಡಿದರು
ಆಗ ವೈದ್ಯರು ಘೋಷಿಸಿದರು ಗೌರವಾನ್ವಿತರೇ. .
ಅವರು ನಿನ್ನೆಯೇ ತೀರಿಕೊಂಡರು.
ಅವರು ವಿರೂಪಗೊಳಿಸಿದ್ದು ಕೇವಲ ನಿಮ್ಮನ್ನಷ್ಟೇ ಅಲ್ಲ ನಮ್ಮ
ಮನಃಸಾಕ್ಷಿಯನ್ನೂ. .

ತಂದೆ, ನೀನೊಂದು ಚೈತನ್ಯದ ಚಿಲುಮೆ. ಇತ್ತು ನಿನ್ನೊಳಗೆ ಕ್ರಿಸ್ತನ ನಡೆ, ಕರುಣೆ
ನಾವು ನಿನಗಾಗಿ ಕಣ್ಣೀರಿಡುವೆವು. ದುರಿತಕಾಲದಲ್ಲೂ ನಿನ್ನದು ಮಾದರಿ,
ಮಾರ್ದವ ನಡೆ, ನಡವಳಿಕೆ–
ಬಂದೀಖಾನೆಯಲ್ಲಿರುವಾಗ ನೀನು ಹೇಳಿದೆ ಎಂದೂ ತಾನು
ಒಂಟಿಯಲ್ಲವೆಂದೂ
ವಿಚಾರಣಾಧೀನ ಸಹಕೈದಿಗಳ ಸಹವಾಸ ನೋವು ನಲಿವುಗಳು
ದೇವರ ಹತ್ತಿರ ಹತ್ತಿರ ಕರೆದೊಯ್ಯಿತೆಂದು.

ಆದಿವಾಸಿಗಳೊಂದಿಗೆ ಬೆರೆತು ಕೆಲಸಮಾಡಿದ್ದಕ್ಕೇ ಶಂಕಿಸಿದರು,
ನಕ್ಸಲರ ಕಾರ್ಯಕರ್ತನಿರಬಹುದೇ?
ಉಗ್ರನಿರಬೇಕೆಂದು. . . . ಎಷ್ಟು ಸಲೀಸಾಗಿ ಉಗ್ರನೆಂದು ಕರೆದರು
ದೇವರೆಡೆಗೆ, ತೀರ್ಥಯಾತ್ರೆಗೆ ಹೊರಟವನನ್ನು. . . .
ಛೇ ಹೇಗೆ ಮೀರುವುದು ಆದ ತಪ್ಪು? ತಲೆ ಎತ್ತಿ ನಡೆಯಲಾಗದೆ,
ಬಾಗಿಸಿರುವೆವು ತಲೆ ಲಜ್ಜೆಯಿಂದ
ನಿನ್ನನ್ನು ಶಿಲುಬೆಗೆ ಕಟ್ಟಿರುವೆವು ಜತೆಗೆ ನಮ್ಮನ್ನೂ. . .

ಒಂದೊಂದು ಮೊಳೆ ಹೊಡೆಯುವಾಗಲೂ ಜಿನುಗಿದೆ ರಕ್ತ
ಭಾರತದ ಆತ್ಮ ಗಾಯಗೊಂಡು
ನೀನು ತೀರಿಲ್ಲ. ಇಲ್ಲವಾಗಿಲ್ಲ ತಂದೆ. . . .ನಾವು ನಿಮ್ಮನ್ನು ಪ್ರೀತಿಸುವೆವು
ಈಗಲೂ ನೀನಿರುವೆ ನಮ್ಮ ನಡುವೆ ನಿನ್ನ ಹೆಸರ ಜಪಿಸುವುದು ನಾಲಗೆ
ನಿನ್ನನ್ನು ಬದುಕಿಸಿಕೊಳ್ಳುವುದೆಂದರೆ,
ಮರುಹುಟ್ಟು ನೀಡುವುದೆಂದರೆ ಅರ್ಥಕ್ಕೇ ನಿಂತುಹೋದ ಅರ್ಥಪೂರ್ಣ

**ಇಂಗ್ಲಿಷ್ ಮೂಲ: ಸಾಗರಿ ಚಾಬ್ರ**

ಪ್ರಚಲಿತ

# ಪ್ರಜಾತಾಂತ್ರಿಕ ವ್ಯವಸ್ಥೆಯನ್ನೇ ಬುಡಮೇಲುಗೊಳಿಸಬಲ್ಲ 'ಪೆಗಾಸಸ್'

–ಪ್ರಭೀರ್ ಪುರ್‌ಕಾಯಸ್ಥ

ಇಸ್ರೇಲ್‌ನ ಸಂಸ್ಥೆಯೊಂದರಿಂದ ಉತ್ಪಾದಿತವಾಗಿ ಆ ದೇಶದ ಸರ್ಕಾರದ ಮಧ್ಯಸ್ಥಿಕೆಯಲ್ಲಿ ಮಾರಾಟವಾಗುತ್ತಿರುವ ಪೆಗಾಸಸ್ ಎಂಬ ತಂತ್ರಾಂಶವು ಅನ್ಯರ ಫೋನುಗಳನ್ನು ಕದ್ದಾಲಿಸುವುದನ್ನು ಸುಗಮಗೊಳಿಸಿರುವ ಮೂಲಕ ಗೂಢಚರ್ಯೆ ನಡೆಸುವ ಹೊಸ ಜಾಗತಿಕ ಸಾಧನವಾಗಿದೆ. ಇದನ್ನು ಬಳಸಿಕೊಂಡು ಜಗತ್ತಿನ ಹಲವು ದೇಶಗಳಲ್ಲಿ ಸರ್ಕಾರದ ಪರ ಮತ್ತು ವಿರುದ್ಧ ಗೂಢಚರ್ಯೆ ನಡೆಸಿರುವ ಸಂಗತಿಯು ಈಗ ಬಯಲಾಗಿದ್ದು ಈ ದೇಶಗಳ ಆಡಳಿತ ವಿಧಾನ ವ್ಯವಸ್ಥೆಗಳನ್ನೇ ತಲ್ಲಣಕ್ಕೀಡುಮಾಡಿದೆ. ಇದಕ್ಕೆ ಭಾರತವೂ ಹೊರತಾಗಿರದೆ ದೇಶದ ವಿರೋಧ ಪಕ್ಷಗಳ ನಾಯಕರೂ, ಸರಕಾರದ ಟೀಕಾಕಾರ ಹಿರಿಯ ಪತ್ರಕರ್ತರೂ, ಮಾನವ ಹಕ್ಕುಗಳ ಹೋರಾಟಗಾರರೂ ಮತ್ತು ಕೆಲ ನ್ಯಾಯಾಧೀಶರ ಫೋನ್‌ಗಳ ಕದ್ದಾಲಿಕೆ ನಡೆದಿದೆ ಎಂಬ ಸುದ್ದಿ ಪ್ರಚಲಿತವಿದ್ದು ಇದು ನಿಜವೇ ಆಗಿದ್ದರೆ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಒಂದು ಕಂಟಕವೇ ಒದಗಿದೆ ಎನ್ನಬಹುದು. ಈ ಕುರಿತ ಅರ್ಜಿಯೊಂದು ನಮ್ಮ ಸರ್ವೋನ್ನತ ನ್ಯಾಯಾಲಯದಲ್ಲಿ ವಿಚಾರಣೆಯ ಹಂತದಲ್ಲಿದ್ದು ಫಲಿತಾಂಶವನ್ನು ಕಾದು ನೋಡಬೇಕಾಗಿದೆ.– ಸಂ.




ಗ್ರೀಕ್ ಪೌರಾಣಿಕ ಕಥೆಗಳಲ್ಲಿ ಬರುವ ರೆಕ್ಕೆ ಹೊಂದಿರುವ ಕುದುರೆ ಪೆಗಾಸಸ್ ಮೋದಿ ಸರ್ಕಾರವನ್ನು ಪುನಃ ಕಾಡತೊಡಗಿದೆ. ದಿ ವೈರ್, ವಾಷಿಂಗ್ಟನ್ ಪೋಸ್ಟ್, ಮತ್ತು ದಿ ಗಾರ್ಡಿಯನ್ ಎಂಬ ಪತ್ರಿಕೆಗಳು ಮತ್ತು ಆಮ್ನೆಸ್ಟಿ ಇಂಟರ್‌ನ್ಯಾಷನಲ್ ಹಾಗೂ ಫರ್‌ಬಿಡನ್ ಸ್ಟೋರೀಸ್ ಎಂಬ ಎರಡು ಸರ್ಕಾರೇತರ ಸಂಸ್ಥೆಗಳು ಹಲವಾರು ತಿಂಗಳುಗಳಿಂದ 45–50 ದೇಶಗಳ ಸುಮಾರು 50,000 ಸಂಭಾವ್ಯ ಫೋನ್ ಸಂಖ್ಯೆಗಳನ್ನು ಪರಿಶೀಲಿಸಿವೆ. ಈ ಫೋನ್ ಸಂಖ್ಯೆಗಳು ಹಲವು ದೇಶಗಳ ಸಂಭವನೀಯ ಸೈಬರ್ ದಾಳಿಯ ಗುರಿಗಳು. ಹೀಗೆ ಗುರಿಯಾದವರ ಪಟ್ಟಿಯಲ್ಲಿದ್ದ, ತಮ್ಮ ಫೋನ್‌ಗಳನ್ನು ಪರೀಕ್ಷೆಗೆ ಒಳಪಡಿಸಲು ಸಮ್ಮತಿಸಿದ ಹಲವರ ಫೋನ್‌ಗಳನ್ನು ವಿಧಿವಿಜ್ಞಾನ ಪರೀಕ್ಷೆಗೆ ಒಳಪಡಿಸಿದಾಗ ಇವುಗಳಲ್ಲಿ 85% ಫೋನ್‌ಗಳನ್ನು ಪೆಗಾಸಸ್ ಬೇಹುಗಾರಿಕಾ ತಂತ್ರಾಂಶದ ಮೂಲಕ ಅತಿಕ್ರಮ ಪ್ರವೇಶ ಮಾಡಲಾಗಿತ್ತು ಎಂಬುದು ತಿಳಿದು ಬಂತು.

ಸಂಭಾವ್ಯ ಅತಿಕ್ರಮ ದಾಳಿಗೆ ಗುರಿಯಾಗಿದ್ದವರಲ್ಲಿ ಕೇವಲ ಪತ್ರಕರ್ತರು ಮತ್ತು ಹೋರಾಟಗಾರರು ಮಾತ್ರವಾಗಿರದೆ ಸರ್ಕಾರೀ ಉದ್ಯೋಗಿಗಳೂ ಸಹ ಇದ್ದರು. ಇದೆಲ್ಲಕ್ಕಿಂತ ಹೆಚ್ಚಾಗಿ ಈ ಪಟ್ಟಿಯಲ್ಲಿ ಹದಿನಾಲ್ಕು ದೇಶಗಳ ಮತ್ತು ಸರ್ಕಾರಗಳ ಮುಖ್ಯಸ್ಥರ ಹೆಸರುಗಳೂ ಇದ್ದವು. ಫ್ರಾನ್ಸ್‌ದೇಶದ ಇಮ್ಯಾನುಯೆಲ್ ಮ್ಯಾಕ್ರನ್, ಇರಾಕ್ ದೇಶದ ಬರ್‌ಹಾಮ್ ಸಲಿಹ್ ಮತ್ತು ದಕ್ಷಿಣ ಆಫ್ರಿಕಾದ ಸಿರಿಲ್ ರಾಂಫೋಸಾ, ಮೂವರೂ ಈಗ ಅಧಿಕಾರದಲ್ಲಿರುವ ಅಧ್ಯಕ್ಷರು. ಇವರಲ್ಲದೆ ಏಳು ಜನ ಹಿಂದಿನ ಪ್ರಧಾನ ಮಂತ್ರಿಗಳು, ಮೊರಾಕ್ಕೋದ ಮಹಮದ್ VI ಎಂಬ ಒಬ್ಬ ರಾಜನ ಹೆಸರೂ ಸಹ ಈ ಪಟ್ಟಿಯಲ್ಲಿವೆ. ಈ ಪಟ್ಟಿಯಲ್ಲಿ ಮೂರು ಜನ ಹಾಲಿ ಪ್ರಧಾನಮಂತ್ರಿಗಳಾದ ಇಮ್ರಾನ್‌ಖಾನ್(ಪಾಕಿಸ್ತಾನ), ಮೊಸ್ತಫಾ ಮದ್ಬೌಲಿ(ಈಜಿಪ್ಟ್) ಮತ್ತು ಸಾದ್–ಎದ್ದಿನ್ ಅಲ್ ಒತ್ಮಾನಿ (ಮೊರಾಕ್ಕೋ) ಅವರ ಹೆಸರುಗಳೂ ಇದ್ದವು. ಈ ಪಟ್ಟಿಯಲ್ಲಿ ಮಾಜಿ ಪ್ರಧಾನಿಗಳಾದ ಮಾಜಿಸಾದ್ ಹರಿರಿ(ಲೆಬನಾನ್), ಎಡ್ವರ್ಡ್ ಫಿಲಿಪ್(ಫ್ರಾನ್ಸ್), ನೌರುದ್ದೀನ್ ಬೆದೋಯಿ(ಅಲ್ಜೀರಿಯಾ) ಮತ್ತು ಚಾರ್ಲ್ಸ್ ಮೈಖೇಲ್(ಬೆಲ್ಜಿಯಂ) ಹೀಗೆ ಏಳು ಜನರ ಹೆಸರುಗಳಿವೆ.

ಹೀಗೆ ಗುರುತು ಮಾಡಲ್ಪಟ್ಟ ಫೋನ್‌ಗಳಿಗೆ ಯಾರು ಕುತಂತ್ರಾಂಶದ ಮೂಲಕ ಅತಿಕ್ರಮ ಪ್ರವೇಶ ಸಾಧಿಸುತ್ತಾರೋ ಅವರಿಗೆ ಈ ಫೋನ್‌ಗಳಲ್ಲಿರುವ ಮಾಹಿತಿಗೆ ಮಾತ್ರವಲ್ಲದೆ, ಕ್ಯಾಮರಾ ಮತ್ತು ಮೈಕ್ರೋಫೋನ್‌ಗಳ ಮೇಲೂ ನಿಯಂತ್ರಣ ದೊರೆಯುತ್ತದೆ. ಮಾಲೀಕರ ಕೈಯಲ್ಲಿ ಒಂದು ಸಾಧನವಾಗಿ ಕೆಲಸ ಮಾಡುವುದಕ್ಕೆ ಬದಲಾಗಿ ಫೋನ್‌ಗಳು ಆತನ/ಆಕೆಯ ಜೇಬಿನಲ್ಲಿರುವ ಒಬ್ಬ ಪತ್ತೇದಾರನಂತೆ ಕೆಲಸ ಮಾಡುತ್ತವೆ. ಇದು ಫೋನ್ ಮೂಲಕ ನಡೆಯುವ ಸಂಭಾಷಣೆಗಳನ್ನು ದಾಖಲಿಸುವುದರ ಜೊತೆಗೆ ಸಂಭಾಷಣೆಯಲ್ಲಿ ಭಾಗಿಯಾದವರ ಚಿತ್ರಗಳನ್ನೂ ಒಳಗೊಂಡಂತೆ ಫೋನ್ ಸ್ವಿಚ್‌ಆನ್ ಆಗದೇ ಇರುವಾಗ ನಡೆಸುವ ಎಲ್ಲ ಭೌತಿಕ ಸಂಭಾಷಣೆಗಳನ್ನೂ ಕೂಡ ಇದು ದಾಖಲಿಸುತ್ತದೆ. ನಂತರ ಅದು ಪೆಗಾಸಸ್ ತಂತ್ರಾಂಶ ಅಳವಡಿಸಿದವರಿಗೆ ಎಲ್ಲ ಮಾಹಿತಿಯನ್ನೂ ರವಾನಿಸುತ್ತದೆ.

ನಮ್ಮ ಕೇಂದ್ರ ಸರ್ಕಾರದ ಹಿಂದಿನ ಮತ್ತು ಈಗಿನ ಇಬ್ಬರು ಮಾಹಿತಿ ತಂತ್ರಜ್ಞಾನ ಮಂತ್ರಿಗಳು–ರವಿಶಂಕರ್ ಪ್ರಸಾದ್ ಮತ್ತು ಅಶ್ವಿನಿ ವೈಷ್ಣವ್–ಭಾರತದಲ್ಲಿ "ಅನಧಿಕೃತವಾಗಿ ನಾವು ಪ್ರತಿಬಂಧಿಸಿಲ್ಲ" (ಇಂಟರ್‌ಸೆಪ್ಟ್) ಎಂದು ಹೇಳಿಕೆ ನೀಡಿದ್ದಾರೆ. ಆದರೆ ಭಾರತ ಸರ್ಕಾರವು ಎನ್.ಎಸ್.ಒ. ಸಂಸ್ಥೆಯ ಅತಿಕ್ರಮಣಕಾರೀ (ಹ್ಯಾಕಿಂಗ್)ತಂತ್ರಾಂಶವನ್ನು ಖರೀದಿಸಿ ಭಾರತೀಯ ಪ್ರಜೆಗಳನ್ನು ಗುರಿ ಮಾಡುವುದಕ್ಕೆ ಅನುಮತಿ ನೀಡಿದೆಯೇ ಎಂಬ ಪ್ರಶ್ನೆಗೆ ನೇರವಾದ ಉತ್ತರ ನೀಡದೆ ತಪ್ಪಿಸಿಕೊಂಡಿದ್ದಾರೆ. ಸ್ಮಾರ್ಟ್ ಫೋನ್‌ಗಳನ್ನು ಇನ್‌ಫೆಕ್ಟ್ ಮಾಡುವುದಕ್ಕೆ ಮತ್ತು ಫೋನ್‌ಗಳು ನಿರ್ವಹಿಸಬೇಕಾದ ಮೂಲಭೂತ ಕಾರ್ಯಗಳನ್ನೇ ಬದಲಾಯಿಸುವುದಕ್ಕೆ ಪೆಗಾಸಸ್ ಬೇಹುಗಾರಿಕಾ ತಂತ್ರಾಂಶವನ್ನು ಬಳಸುವುದನ್ನು ಮಾಹಿತಿ ತಂತ್ರಜ್ಞಾನದ ನಿಯಮಗಳ ಅಡಿಯಲ್ಲಿ ಕಾನೂನುಬದ್ಧ ಅನುಮತಿ ನೀಡುವಿಕೆ ಎಂದು ಪರಿಗಣಿಸಬಹುದೇ?

ಕಾನೂನಿನ ವಿಚಾರಗಳನ್ನು ನಿರ್ವಹಿಸುವ ಕಾರ್ಯವನ್ನು ಅದರಲ್ಲಿ ಪರಿಣತರಾದವರಿಗೆ ಬಿಟ್ಟುಕೊಡುತ್ತೇನೆ. ರಾಷ್ಟ್ರಗಳು ಕುತಂತ್ರಾಂಶಗಳನ್ನು ಅಸ್ತ್ರವನ್ನಾಗಿ ಮಾಡಿಕೊಳ್ಳುವುದು ಪ್ರಪಂಚಕ್ಕೆ ಉಂಟುಮಾಡಲಿರುವ ಅಪಾಯಗಳನ್ನು ಪರಿಶೀಲಿಸಬಯಸುತ್ತೇನೆ. ಕೇವಲ ಪೆಗಾಸಸ್ ಮಾತ್ರವೇ ಇಂತಹದೊಂದು ತ್ರಾಂಶವಲ್ಲ. ಸ್ನೋಡೆನ್ ಬಹಿರಂಗಪಡಿಸಿದ್ದ ಅಮೆರಿಕದ ರಾಷ್ಟ್ರೀಯ ಭದ್ರತಾ ಸಂಸ್ಥೆಯ ಮತ್ತು ಫೈವ್–ಐಸ್ ಸರ್ಕಾರಗಳು (ಫೈವ್‌ಐಸ್ ಒಪ್ಪಂದ ಎನ್ನುವುದು ಆಸ್ಟ್ರೇಲಿಯ, ಕೆನಡಾ, ನ್ಯೂಜೀಲೆಂಡ್, ಯು.ಕೆ. ಮತ್ತು ಯು.ಎಸ್. ಎಂಬ ಐದು ದೇಶಗಳು ಮಾಡಿಕೊಂಡಿರುವ ಬೇಹುಗಾರಿಕಾ ಒಪ್ಪಂದ) ಮತ್ತು ಅವುಗಳ ಸಕಲವನ್ನೂ ಒಳಗೊಳ್ಳುವ ಕಣ್ಗಾವಲು ಮಾಡುವ ಈ ಪ್ರಭುತ್ವಗಳು ಏನು ಮಾಡಬಲ್ಲವು ಎಂಬುದನ್ನು ಬಹಿರಂಗಪಡಿಸಿದೆ. ಅವು ಬೇರೆ ದೇಶಗಳ ಡಿಜಿಟಲ್ ಮೂಲಸೌಕರ್ಯಗಳನ್ನು ಅತಿಕ್ರಮಣ (ಹ್ಯಾಕ್) ಮಾಡಿವೆ, ಹೊರದೇಶಗಳ 'ಭದ್ರತಾ' ಸಂವಹನಗಳಲ್ಲಿ ನುಸುಳಿವೆ, ತಮ್ಮ ಮಿತ್ರರಾಷ್ಟ್ರಗಳ ಮೇಲೂ ಗೂಢಚರ್ಯೆ ನಡೆಸಿವೆ. ಜರ್ಮನ್ ಚಾನ್ಸಲರ್ ಏಂಜೆಲಾ ಮರ್ಕೆಲ್ ಅವರ ಮೇಲೆಯೂ ಎನ್‌ಎಸ್‌ಎ ಗೂಢಚರ್ಯೆ ನಡೆಸದೆ ಬಿಟ್ಟಿಲ್ಲ.

ಪ್ರಭುತ್ವ ಮತ್ತು ಸೈಬರ್ ಅಪರಾಧಿಗಳ ನಡುವಿನ ಮುಖ್ಯ ವ್ಯತ್ಯಾಸವೆಂದರೆ ರಾಷ್ಟ್ರಗಳು ಇಂತಹ ಕುತಂತ್ರಾಂಶಗಳನ್ನು ಅಭಿವೃದ್ಧಿಪಡಿಸಲು ಹೊಂದಿರುವ ಅಗಾಧ ಸಂಪನ್ಮೂಲ ಮಾತ್ರ. ಶಾಡೋ ಬ್ರೋಕರ್ಸ್(ಅಮೆರಿಕದ ರಾಷ್ಟ್ರೀಯ ಭದ್ರತಾ ಮಂಡಳಿಯ ಮಾಹಿತಿಯನ್ನು ಹ್ಯಾಕ್ ಮಾಡಿ ಅದನ್ನು ಬಹಿರಂಗ ಪಡಿಸಿದ ಒಂದು ಗುಂಪು) ಉದಾಹರಣೆಯನ್ನು ನೋಡುವುದಾದರೆ ಅವರು ರಾಷ್ಟ್ರೀಯ ಭದ್ರತಾ ಸಂಸ್ಥೆಗೆ ಸೇರಿದ, ಶಸ್ತ್ರದಂತೆ ಬಳಸಬಹುದಾದ ಒಂದು ಗೀಗಾಬೈಟ್ ಸಾಮರ್ಥ್ಯದ ತಂತ್ರಾಂಶವನ್ನು ( ವ್ಯಕ್ತಿ ಅಥವಾ ಗುಂಪಿಗೆ ಹಾನಿಯುಂಟುಮಾಡಲು ಸಾಧ್ಯವಾಗುವಂತಹ ತಂತ್ರಾಂಶ) 2017 ರಲ್ಲಿ ಜಾಲತಾಣದ ಮೇಲೆ ತಂದು ಸುರಿದಿದ್ದಾರೆ. ಸುಪ್ರಸಿದ್ಧ ಭದ್ರತಾ ಪರಿಣತ ಮ್ಯಾಥೆ ಹಿಕಿ "ಇದನ್ನು ಡೌನ್‌ಲೋಡ್ ಮಾಡಿಕೊಳ್ಳುವ ಯಾರ ಕೈಗಾದರೂ ಪರಿಣಾಮಕಾರಿಯಾದ ಸೈಬರ್ ಅಸ್ತ್ರಗಳು ಪರಿಣಾಮಕಾರಿಯಾಗಿ ಲಭ್ಯವಾಗುವಂತೆ ಮಾಡುತ್ತದೆ" ಎಂದಿದ್ದಾರೆ. ವಾನ್ನಕ್ರೈ ಮತ್ತು ನಾಟ್‌ಪೆಟ್ಯ ಎಂಬ ರ್‍ಯಾನ್‌ಸಮ್‌ವೇರ್‌ಗಳು (ತಮ್ಮಲ್ಲಿರುವ ಯಾವುದೋ ಮಾಹಿತಿಯನ್ನು ಬಹಿರಂಗಪಡಿಸುವುದಾಗಿ ಬೆದರಿಸಿ ಹಣ ಕೀಳಲು ಬಳಕೆಯಾಗುವ ತಂತ್ರಾಂಶ)ಎನ್.ಎಸ್.ಎ ನಿರ್ಮಿಸಿರುವ ಟೂಲ್‌ಕಿಟ್‌ಗಳನ್ನು ಬಳಸಿ ಅನಾಹುತ ಸೃಷ್ಟಿಸಿದಾಗ ಬಹಳ ವ್ಯಾಪಕವಾಗಿ ಬಹಿರಂಗಗೊಂಡವು. ಪೆಗಾಸಸ್ ಬಗ್ಗೆ ಚರ್ಚಿಸುವಾಗ ನಾನು ಎನ್.ಎಸ್.ಎ. ಸಂಸ್ಥೆಯ ಕುತಂತ್ರಾಂಶಗಳ ಬಗ್ಗೆ ಏಕೆ ಪ್ರಸ್ತಾಪಿಸುತ್ತಿದ್ದೇನೆ ಎನಿಸುತ್ತಿದೆಯೇ? ಏಕೆಂದರೆ ಪೆಗಾಸಸ್ ಇಸ್ರೇಲ್ ದೇಶದ ಎನ್. ಎಸ್. ಒ. ಎಂಬ ಕಂಪನಿಗೆ ಸೇರಿದ್ದು, ಈ ಕಂಪನಿಗೆ ಅಮೆರಿಕದ ಎನ್.ಎಸ್.ಎ. ಗೆ ಸಮಾನವಾದ ಇಸ್ರೇಲಿನ 8200 ಎಂಬ ಘಟಕದೊಂದಿಗೆ ಆಪ್ತವಾದ ಸಂಬಂಧವಿದೆ. ಇತರೆ ಹಲವಾರು ವ್ಯಾಪಾರೀ ಸೈಬರ್ ಬೇಹುಗಾರಿಕಾ ಕಂಪನಿಗಳ ಹಾಗೆ ಎನ್.ಎಸ್.ಒ. ಕೂಡ 8200 ಘಟಕದ ನಿವೃತ್ತ

ಅಧಿಕಾರಿಗಳಿಂದ ಸ್ಥಾಪಿಸಲ್ಪಟ್ಟು ನಿರ್ವಸಲ್ಪಡುತ್ತಿದೆ. ಈ ಅಂಶ ಅಂದರೆ ಪ್ರಭುತ್ವವು ತನ್ನ ಕೌಶಲ ಮತ್ತು ಜ್ಞಾನವನ್ನು ನಾಗರಿಕ ವಲಯದ ಮೇಲೆ ಪ್ರಯೋಗಿಸುವ ಅಂಶ ಈ ಬೇಹುಗಾರಿಕಾ ತಂತ್ರಾಂಶಗಳನ್ನು ವಿಪರೀತ ಅಪಾಯಕಾರಿಯಾಗಿಸಿದೆ.

ತೈಲ ರಫ್ತು ಮಾಡುವ ಕೊಲ್ಲಿ ರಾಷ್ಟ್ರಗಳ, ಅಂದರೆ ಸಂಯುಕ್ತ ಅರಬ್ ಎಮಿರೇಟ್ಸ್ (ಯುಎಇ) ಮತ್ತು ಸೌದಿ ಅರೇಬಿಯಾಗಳ ಜೊತೆ ಇಸ್ರೇಲ್ ದೇಶದ ಸಂಬಂಧವನ್ನು ಉತ್ತಮಪಡಿಸುವಲ್ಲಿ ಎನ್.ಎಸ್. ಒ. ಪಾತ್ರ ವಹಿಸಿರುವಂತೆ ಕಾಣುತ್ತದೆ. ಆದ್ದರಿಂದ ಇಂತಹ ದೇಶಗಳಿಗೆ ಬೇಹುಗಾರಿಕೆ ತಂತ್ರಾಂಶವನ್ನು ಮಾರಾಟ ಮಾಡುವುದನ್ನು ಇಸ್ರೇಲ್ ವಿದೇಶಾಂಗ ನೀತಿಯ ವಿಸ್ತರಣೆ ಎಂಬಂತೆ ಪರಿಗಣಿಸುತ್ತದೆ. ಯು.ಎ.ಇ. ಮತ್ತು ಸೌದಿ ಅರೇಬಿಯಾ ದೇಶಗಳು ಪೆಗಾಸಸ್ ತಂತ್ರಾಂಶವನ್ನು ದೇಶೀಯ ಭಿನ್ನ ಮತೀಯರನ್ನು ಹಾಗೇ ವಿದೇಶೀ ಟೀಕಾಕಾರರನ್ನು ದಮನ ಮಾಡುವುದಕ್ಕೆ ವ್ಯಾಪಕವಾಗಿ ಬಳಸಿಕೊಂಡಿವೆ. ಸೌದಿ ಭಿನ್ನಮತೀಯರೂ ಮತ್ತು ವಾಷಿಂಗ್ಟನ್ ಪೋಸ್ಟ್ ಅಂಕಣಕಾರರೂ ಆಗಿದ್ದ ಜಮಾಲ್ ಖಷೊಗಿ ಅವರನ್ನು ಇಸ್ತಾನ್‌ಬುಲ್‌ನಲ್ಲಿನ ಸೌದಿ ರಾಯಭಾರಿ ಕಛೇರಿಯಲ್ಲಿ ಹತ್ಯೆ ಮಾಡಿದ ಪ್ರಕರಣ ಸಾಕಷ್ಟು ಕುಪ್ರಸಿದ್ಧವಾದುದು.

ಎನ್‌ಎಸ್‌ಓ ಸಂಸ್ಥೆಯ ಮಾರುಕಟ್ಟೆ ಬಂಡವಾಳ ಒಂದು ಬಿಲಿಯನ್ ಡಾಲರ್ ಎನ್ನಲಾಗುತ್ತದೆ, ಇದು ಬಹುಶಃ ಅತ್ಯಂತ ದುಬಾರಿಯಾದ ನಾಗರಿಕ ಸೈಬರ್ ಬೇಹುಗಾರಿಕಾ ಸಂಸ್ಥೆ. ಈ ಬೇಹುಗಾರಿಕಾ ಸಂಸ್ಥೆಗಳ ಕಾರ್ಯಾಚರಣೆಯ ವಿರುದ್ಧ ರಕ್ಷಣೆ ಪಡೆಯುವ ಯಾವ ಮಾರ್ಗಗಳೂ ಇಲ್ಲದಿರುವುದರಿಂದ ಇವು ಅತ್ಯಂತ ಭಯಾನಕವಾಗಿವೆ. ಪೆಗಾಸಸ್‌ನ ತಂತ್ರಾಂಶಗಳನ್ನು ಸೈಬರ್ ಉಪಕರಣಗಳು ಎಂದು ವರ್ಗೀಕರಿಸಿರುವುದರಿಂದ ಅವುಗಳನ್ನು ರಫ್ತು ಮಾಡುವುದಕ್ಕೆ ಇಸ್ರೇಲೀ ಸರ್ಕಾರದ ಅನುಮತಿ ಬೇಕಾಗುವುದು. ಇಸ್ರೇಲ್ ಸರ್ಕಾರ ಮತ್ತು ಎನ್.ಎಸ್. ಒ. ಸಂಸ್ಥೆಗಳ ನಡುವೆ ಸಂಬಂಧ ಇರುವುದು ಇದರಿಂದ ಸ್ಪಷ್ಟವಾಗುತ್ತದೆ.


ಪೆಗಾಸಸ್ ಎಂದರೇನು? ಅದು ಏಕೆ ಅಷ್ಟೊಂದು ಅಪಾಯಕಾರಿ? ಪೆಗಾಸಸ್ ಎಂಬುದು ಬರೀ ನಮ್ಮ ಸಂವಹನಗಳನ್ನು ಕದ್ದಾಲಿಸುವುದು ಅಥವಾ ಉಸ್ತುವಾರಿ ಮಾಡುವುದು ಮಾತ್ರವಲ್ಲ. ಒಮ್ಮೆ ಅದು ನಮ್ಮ ಸ್ಮಾರ್ಟ್‌ಫೋನ್‌ಗಳಿಗೆ ಅಂಟಿಕೊಂಡರೆ ಅದು ಫೋನ್‌ನಲ್ಲಿರುವ ತಂತ್ರಾಂಶವನ್ನೇ 'ರೂಪಾಂತರಿಸುತ್ತದೆ'. ವಾಸ್ತವದಲ್ಲಿ ಅದೇ ನಮ್ಮ ಫೋನ್‌ನ ಮಾಲೀಕನಾಗಿರುತ್ತದೆ. ಫೋನ್ ಮೂಲಕ ಆಡುವ ಮಾತುಗಳನ್ನಷ್ಟೇ ಅಲ್ಲದೆ ಫೋನ್ ಹತ್ತಿರವಿದ್ದಾಗ ನೀವು ಆಡುವ ಎಲ್ಲಾ ಮಾತುಗಳನ್ನು ಅದು ಕದ್ದು ಕೇಳಬಲ್ಲದು. ಕ್ಯಾಮರಾ ನೋಡುವ ಯಾವ ದೃಶ್ಯವನ್ನಾದರೂ ಚಿತ್ರೀಕರಿಸಿ ದಾಖಲಿಸಬಲ್ಲದು. ಹೀಗೆ ದಾಖಲಿಸಿದ ಮಾಹಿತಿಗಳನ್ನು ಅದು ಪೆಗಾಸಸ್‌ನ ಸರ್ವರ್‌ಗೆ ಕಳುಹಿಸುತ್ತದೆ. ಪೆಗಾಸಸ್ ಜೊತೆ ಒಪ್ಪಂದ ಮಾಡಿಕೊಳ್ಳುವ ಯಾರಾದರೂ ಅಲ್ಲಿಂದ ಈ ಮಾಹಿತಿಗಳನ್ನು ಪಡೆದುಕೊಳ್ಳಬಹುದು.

ಪೆಗಾಸಸ್ ಏಕೆ ಅಷ್ಟೊಂದು ಅಪಾಯಕಾರಿ ಎಂಬುದಕ್ಕೆ ಮತ್ತೊಂದು ಕಾರಣವೆಂದರೆ ನಮ್ಮ ಫೋನ್ ಮೂಲಕ ನಾವು ಯಾವ ಚಟುವಟಿಕೆಯನ್ನೂ ನಡೆಸುವ ಅಗತ್ಯವಿಲ್ಲದೆಯೇ ಫೋನ್ ಸೋಂಕಿಗೊಳಗಾಗುತ್ತದೆ. ನಮ್ಮ ಫೋನ್ ಸಾಮಾನ್ಯವಾಗಿ ಸೋಂಕಿಗೊಳಗಾಗುವುದು ಇ-ಮೈಲ್, ಎಸ್‌ಎಮ್‌ಎಸ್ ಇತ್ಯಾದಿ ನಮ್ಮ ಫೋನ್‌ಗೆ ಬಂದಾಗ ಅದರ ಮೇಲೆ ನಾವು ಕ್ಲಿಕ್ ಮಾಡಿದಾಗ. ಆದರೆ ವಾಟ್ಸ್‌ಆಪ್‌ನಲ್ಲಿದ್ದ ಒಂದು ಭದ್ರತಾ ಕೊರತೆಯನ್ನು ಬಳಸಿಕೊಂಡು ಪೆಗಾಸಸ್ ಬರೀ ಒಂದು ತಪ್ಪಿದ ಕರೆಯ ಮೂಲಕ ಫೋನ್‌ಗಳನ್ನು ಸೋಂಕಿಗೊಳಪಡಿಸಬಲ್ಲ ವಿಧಾನಗಳನ್ನು ಸೃಷ್ಟಿಸಿಕೊಂಡಿದೆ. ನಮ್ಮ ಫೋನ್ ಒಮ್ಮೆ ರಿಂಗ್ ಆದರೆ ಸಾಕು ಅಷ್ಟರಿಂದಲೇ ಪೆಗಾಸಸ್ ಬೇಹುಗಾರಿಕಾ ತಂತ್ರಾಂಶ ನಮ್ಮ ಪೋನ್‌ಗಳ ಒಳಕ್ಕೆ ತೂರಿಕೊಳ್ಳಬಲ್ಲದು. ಅಪರಿಚಿತ ಮೂಲಗಳಿಂದ ಮಾಹಿತಿಗಳನ್ನು ಸ್ವೀಕರಿಸುವ ಮೆಸೇಜ್, ವಾಟ್ಸ್‌ಆಪ್, ಫೇಸ್‌ಟೈಮ್, ವಿ ಚಾಟ್, ಟೆಲಿಗ್ರಾಮ್ ಮುಂತಾದ ಇತರೆ ಆಪ್‌ಗಳಲ್ಲಿರಬಹುದಾದ ದೌರ್ಬಲ್ಯಗಳನ್ನು ಬಳಸಿಕೊಂಡು ಪೆಗಾಸಸ್ ತನ್ನ ಬೇಹುಗಾರಿಕಾ ಸಾಮರ್ಥ್ಯವನ್ನು ಮತ್ತಷ್ಟು ಹೆಚ್ಚಿಸಿಕೊಳ್ಳುತ್ತಿದೆ. ಅದರರ್ಥ ಫೋನ್ ಬಳಕೆದಾರರು ಯಾವುದೋ ಕೊಂಡಿಯ ಮೇಲೆ ಕ್ಲಿಕ್ ಮಾಡಬೇಕಾದ ಕನಿಷ್ಠ ಅಗತ್ಯವೂ ಇಲ್ಲದೆ ಫೋನ್‌ಗಳೊಂದಿಗೆ ಪೆಗಾಸಸ್ ಹೊಂದಾಣಿಕೆ ಮಾಡಿಕೊಳ್ಳಬಹುದು. ಸೈಬರ್ ವಲಯದಲ್ಲಿ ಇದನ್ನು ಶೂನ್ಯ-ಕ್ಲಿಕ್ ಶೋಷಣೆ ಎಂದು ಕರೆಯಲಾಗುತ್ತದೆ.

ಒಮ್ಮೆ ಸ್ಥಾಪನೆಗೊಂಡರೆ ಪೆಗಾಸಸ್ ಬಳಕೆದಾರರ ಸಂದೇಶಗಳನ್ನು ಇ-ಮೈಲ್‌ಗಳನ್ನು ಓದಬಲ್ಲದು, ಸ್ಕ್ರೀನ್ ಶಾಟ್ ತೆಗೆಯಬಲ್ಲದು, ಬಳಸಲಾದ ಕೀಲಿಗಳನ್ನು, ಹುಡುಕಾಟದ ಇತಿಹಾಸವನ್ನು, ಮತ್ತು ಸಂಪರ್ಕಗಳನ್ನು ದಾಖಲು ಮಾಡಿಕೊಳ್ಳಬಲ್ಲದು. ಅದು ಫೈಲ್‌ಗಳನ್ನು ಗುಪ್ತವಾಗಿ ಹೊರಕ್ಕೆ ಕಳುಹಿಸಬಲ್ಲದು ಅಂದರೆ ಅವನ್ನು ಸರ್ವರ್‌ಗೆ ಹಿಂದಕ್ಕೆ ಕಳುಹಿಸಬಲ್ಲದು. ವಾಸ್ತವದಲ್ಲಿ ಅದಕ್ಕೆ ಗುರಿಯಾದವರ ಜೀವನದ ಎಲ್ಲ ಆಯಾಮಗಳ ಮೇಲೂ ಬೇಹುಗಾರಿಕೆ ನಡೆಸಬಲ್ಲದು. ಗೌಪ್ಯತೆಯನ್ನು ಕಾಪಾಡುವುದಕ್ಕಾಗಿ ಇ ಮೈಲ್‌ಗಳ ಮತ್ತು ಸಂಕೇತಗಳ ಗೂಢ ಲಿಪೀಕರಣ ಸೇವೆಗಳನ್ನು ಬಳಸುವುದಕ್ಕೆ ಯಾವುದೇ ಅರ್ಥವೂ ಇರುವುದಿಲ್ಲ. ಏಕೆಂದರೆ ಪೆಗಾಸಸ್ ಬೇಹುಗಾರಿಕೆಯು ನೀವು ಏನನ್ನು ಓದುತ್ತೀರೋ ಅದನ್ನು ಓದುತ್ತದೆ. ನೀವು ಏನನ್ನು ಟೈಪ್ ಮಾಡುತ್ತೀರೋ ಅದನ್ನು ಗ್ರಹಿಸುತ್ತದೆ. ಹಲವಾರು ಜನ ತಾವು ಸುರಕ್ಷಿತರಾಗಿರುತ್ತೇವೆ ಎಂಬ ನಂಬಿಕೆಯಲ್ಲಿ ಐಫೋನ್‌ಗಳನ್ನು ಬಳಸುತ್ತಾರೆ. ದುರಂತ ಏನೆಂದರೆ ಪೆಗಾಸಸ್ ಎದುರು ಐಫೋನ್‌ಗಳೂ ಕೂಡ ಕೆಲವು ಭಿನ್ನವಾದ ರೀತಿಯಲ್ಲಿ ಆಂಡ್ರಾಯ್ಡ್ ಫೋನ್‌ಗಳಷ್ಟೇ ದುರ್ಬಲವಾಗುತ್ತವೆ. ಅವು ನಡೆಸುವ ಕಾರ್ಯಗಳೆಲ್ಲವೂ ದಾಖಲಾಗುವುದರಿಂದ ಐಫೋನ್‌ಗಳು ಸೋಂಕಿಗೊಳಗಾಗಿವೆಯೇ ಎಂಬುದನ್ನು ಪತ್ತೆಮಾಡುವುದು ಸುಲಭ. ಆಂಡ್ರಾಯ್ಡ್ ಫೋನ್‌ಗಳು ಈ ರೀತಿಯ ದಾಖಲೆಗಳನ್ನು ಮಾಡುವುದಿಲ್ಲವಾಗಿ ಇವನ್ನು ಭೇದಿಸಿರುವ ಗುರುತುಗಳನ್ನು ಪೆಗಾಸಸ್ ಬಹಳ ಸುಲಭವಾಗಿ ಮುಚ್ಚಿಡಬಲ್ಲದು.

ಲಾಭಕ್ಕಾಗಿ ಇಂತಹ ಕುತಂತ್ರಾಂಶಗಳನ್ನು ಸೃಷ್ಟಿಸುವ ಸಂಸ್ಥೆಗಳನ್ನು "ಅಸ್ತಿತ್ವದಲ್ಲಿರಬಾರದ ಉದ್ಯಮ" ಎಂದು ಸ್ನೋಡೆನ್ ಕರೆಯುತ್ತಾನೆ. ನೀವು ಇದನ್ನು ತಡೆಯುವುದಕ್ಕೆ ಏನೂ ಮಾಡದಿದ್ದರೆ ಅದು ಬರೀ 50,000 ಜನರ ಮೇಲಲ್ಲ, 50 ಮಿಲಿಯನ್ ಜನರ ಮೇಲೆ ಕಣ್ಣಿಡುತ್ತದೆ, ಮತ್ತು ಯಾರೂ ನಿರೀಕ್ಷಿಸಲಾಗದ ವೇಗದಲ್ಲಿ ಅದು ನಡೆಯಲಿದೆ. ಅಂತರರಾಷ್ಟ್ರೀಯ ಬೇಹುಗಾರಿಕಾ ತಂತ್ರಾಂಶಗಳ ಮಾರಾಟದ ಮೇಲೆ ತಕ್ಷಣದಲ್ಲಿ ನಿಷೇಧ ವಿಧಿಸಬೇಕೆಂದು ಸ್ನೋಡೆನ್ ಕರೆ ನೀಡುತ್ತಾರೆ. ಅವರು ಹೇಳುವಂತೆ ಈ ಬೇಹುಗಾರಿಕಾ ತಂತ್ರಾಂಶಗಳ ಮಾರಾಟವನ್ನು ನಿಷೇಧಿಸಿದರೆ ಸಾಲದು, ಬೇಹುಗಾರಿಕಾ ತಂತ್ರಾಂಶವನ್ನು ಒಳಗೊಂಡಂತೆ ಇಡೀ ಸೈಬರ್‌ಕ್ಷೇತ್ರವನ್ನು ನಿಶ್ಶಸ್ತ್ರೀಕರಣಗೊಳಿಸಬೇಕು. ಇತ್ತೀಚಿಗೆ ಸ್ಫೋಟಗೊಂಡ ಸೈಬರ್ ದಾಳಿಗಳು – ಪ್ರತಿದಿನ ಹತ್ತಾರು ಸಾವಿರ – ನಮ್ಮೆಲ್ಲಾ ಸಂಸ್ಥೆಗಳು ಅವಲಂಬಿಸಿರುವ ಸೈಬರ್ ಮೂಲಸೌಕರ್ಯಕ್ಕೇ ಅಪಾಯ ತಂದೊಡ್ಡುತ್ತಿವೆ. ಎನ್.ಎಸ್.ಎ. ಮತ್ತು ಸಿ.ಐ.ಎ. ಸೋರಿಕೆಗಳ ನಂತರ ಈಗ ಎನ್.ಎಸ್.ಒ. ಪೆಗಾಸಸ್ ತಂತ್ರಾಂಶವನ್ನು ಯಾವ ನಿರ್ಬಂಧವೂ ಇಲ್ಲದೆ ಬಳಸಿರುವುದು ಇಂತಹ ಅಸ್ತ್ರಗಳನ್ನು ಅಭಿವೃದ್ಧಿಪಡಿಸುವಂತಹ ಈ ರಾಷ್ಟ್ರಗಳನ್ನು ನಂಬಬಹುದೇ ಎಂಬ ಪ್ರಶ್ನೆಯನ್ನು ನಾವೆಲ್ಲ ಕೇಳಬೇಕಾಗಿದೆ. 2017 ರಲ್ಲಿ ಮೈಕ್ರೋಸಾಫ್ಟ್‌ನ ಅಧ್ಯಕ್ಷರಾಗಿದ್ದ, ಯುದ್ಧವಿರೋಧಿಯಲ್ಲದ ಅಥವಾ ಎಡಪಂಥೀಯರಾಗಿರದ ಬ್ರಾಡ್‌ಸ್ಮಿತ್ ಅವರು "ಸರ್ಕಾರಗಳ ಕೈಯಲ್ಲಿ ಎಕ್ಸ್‌ಪ್ಲಾಯ್ಟ್‌ಗಳು ಪದೇ ಪದೇ ಸಾರ್ವಜನಿಕ ವಲಯದೊಳಕ್ಕೆ ಸೋರಿಕೆಯಾಗಿ ಅಪಾರವಾದ ಹಾನಿಯನ್ನುಂಟು ಮಾಡಿವೆ," ಎಂದು ಬರೆಯುತ್ತಾರೆ. ಕೆಲವು ಪ್ರಮುಖ ಕಂಪನಿಗಳಾದ ಮೈಕ್ರೋಸಾಫ್ಟ್, ಡ್ಯೂಷ್, ಟೆಲಿಕಾಮ್ ಮತ್ತು ಇತರ ಕಂಪೆನಿಗಳು 2017 ರಲ್ಲಿ ಸೈಬರ್ ಅಸ್ತ್ರಗಳನ್ನು ನಿಷೇಧಿಸಬೇಕೆಂದು ಒತ್ತಾಯಿಸಿದವು. ಚೀನಾ ಮತ್ತು ರಷ್ಯಾ ದೇಶಗಳು ಇನ್ನೂ ಮುಂಚಿನಿಂದಲೂ ಇಂತಹ ಕರೆಯನ್ನು ಕೊಡುತ್ತಿವೆ. ಆದರೆ ಈ ಬೇಹುಗಾರಿಕಾ ತಂತ್ರಾಂಶಗಳಿಂದ ಸೈಬರ್‌ಸ್ಪೇಸ್‌ಗೆ ಮಿಲಿಟರಿ ವಲಯದಲ್ಲಿ ಲಾಭವಿದೆ ಎಂಬ ಅಂಶದಲ್ಲಿ ನಂಬಿಕೆಯಿಟ್ಟು, ಅದನ್ನು ವ್ಯರ್ಥ ಮಾಡಿಕೊಳ್ಳಬಾರದು ಎಂದು ಅಮೆರಿಕವು ತುಸುವೂ ಯೋಚಿಸದೇ ಈ ಕರೆಯನ್ನು ತಳ್ಳಿಹಾಕಿತು.

ಪೆಗಾಸಸ್ ಎಂಬುದು ಪ್ರಭುತ್ವಗಳು ಸೈಬರ್ ಅಸ್ತ್ರಗಳನ್ನು ಅಭಿವೃದ್ಧಿಪಡಿಸುತ್ತಿರುವುದರಲ್ಲಿನ ಅಪಾಯದ ಬಗ್ಗೆ ಮತ್ತೊಮ್ಮೆ ನೆನಪಿಸುವಂತಹದು. ಇವು ಸೋರಿಕೆ ಮಾತ್ರವಲ್ಲ, ಖಾಸಗಿ ಲಾಭಕ್ಕಾಗಿ ಅಪಾಯಕಾರಿಯಾದ ತಂತ್ರಜ್ಞಾನದ ಉದ್ದೇಶಪೂರ್ವಕ ಬಳಕೆ. ಪತ್ರಕರ್ತರಿಗೆ, ಹೋರಾಟಗಾರರಿಗೆ, ವಿರೋಧ ಪಕ್ಷಗಳಿಗೆ ಅಂತಿಮವಾಗಿ ಪ್ರಜಾಪ್ರಭುತ್ವಕ್ಕೆ ಅಪಾಯಕಾರಿಯಾದುದು. ನಮ್ಮೊಂದಿಗೆ ಸದಾ ಇರುವ ಸ್ಮಾರ್ಟ್‌ಫೋನ್‌ಗಳು ನಾವೆಲ್ಲರೂ ಅವಲಂಬಿಸಿರುವ ಸೈಬರ್ ಮೂಲಸೌಕರ್ಯದ ಮೇಲಿನ ದಾಳಿಗೆ ವಾಹಕಗಳಾಗಿ ಬಳಕೆಯಾಗಲು ಹೆಚ್ಚು ಕಾಲ ಬೇಕಾಗಿಲ್ಲ.



**(ಲೇಖಕರು 'ಸೈನ್ಸ್ ಅಂಡ್ ಫ್ರೀ ಸಾಫ್ಟ್‌ವೇರ್' ಆಂದೋಲನದಲ್ಲಿ ಸಕ್ರಿಯರಾಗಿರುವವರು)**

(ಕನ್ನಡಕ್ಕೆ: **ಎಂ.ರಾಜು** ಕೃಪೆ: ***ಜನತಾ,*** ಆಗಸ್ಟ್೮, ೨೦೨೧)

---

೩ನೇ ಪುಟದಿಂದ)

ಅಲ್ಲದೆ ಇಂದು ಎಲ್ಲಿ ನೋಡಿದರೂ ರಸ್ತೆ ಅಗಲೀಕರಣ, ಚತುಷ್ಪಥ, ಷಟ್ಪಥ, ಫ್ಲೈ ಓವರುಗಳು, ನೇರ ರಸ್ತೆ, ಎತ್ತರಿಸಿದ ರಸ್ತೆ, ಸುರಂಗ ಮಾರ್ಗಗಳು ವಿಪರೀತ ನಡೆಯುತ್ತಿವೆ. ಅದಕ್ಕೆ ಫಲವತ್ತಾದ ಜಮೀನು ಬಲಿಯಾಗುತ್ತಿದೆ. ಲಕ್ಷಾಂತರ ಟನ್ ಫಲವತ್ತಾದ ಮಣ್ಣು ರಸ್ತೆ ನಿರ್ಮಾಣಕ್ಕೆ ಬಳಕೆಯಾಗುತ್ತಿದೆ. ಬೆಂಗಳೂರಿನಿಂದ ಮೈಸೂರಿಗೆ ಒಂದೇ ಗಂಟೆಯಲ್ಲಿ ಹೋಗಬಹುದು, ಚೆನ್ನೈಯಿಂದ ಬೆಂಗಳೂರಿಗೆ ನಾಲ್ಕೇ ಗಂಟೆಯಲ್ಲಿ ಬರಬಹುದು ಎಂಬುದು ಇದಕ್ಕೆ ನೀಡುವ ಕಾರಣ. ಭಾಷಣ, ಜಾಹೀರಾತುಗಳಲ್ಲೂ ಇದನ್ನೆ ದೊಡ್ಡದಾಗಿ ನೋಡಬಹುದು.

ನನ್ನ ಪ್ರಶ್ನೆ, ಅಷ್ಟು ಬೇಗ ಯಾಕೆ ಹೋಗಬೇಕು, ಹೋಗಿ ಮಾಡುವುದಾದರೂ ಏನು, ಸ್ವಲ್ಪ ಬೇಗ ಹೊರಟರೆ ಆಯಿತಲ್ಲಾ.

**–ಮಲ್ಲಿಕಾರ್ಜುನ ಹೊಸಪಾಳ್ಯ** ತುಮಕೂರು

**(ಸುಸ್ಥಿರ ಕೃಷಿ ಹಾಗೂ ಜಲಸಂರಕ್ಷಣೆ ಕ್ಷೇತ್ರದಲ್ಲಿ ಕಾರ್ಯನಿರ್ವಹಣೆ. ಪ್ರಸ್ತುತ ಹೊಸಪೇಟೆಯ ವಿಜಯನಗರ ಕಾಲುವೆ ಆಧುನೀಕರಣ ಯೋಜನೆಯಲ್ಲಿ ಸಮಾಲೋಚಕ)**

ವಿದ್ಯಮಾನ

# ಪ್ರಜಾತಂತ್ರ ಮತ್ತು ಮಠವ್ಯವಸ್ಥೆ

–ರಾಜೇಂದ್ರ ಚೆನ್ನಿ

ಮತಾಚಾರ್ಯರುಗಳ ಪರಂಪರೆಯಲ್ಲಿ ಧರ್ಮ ಪ್ರಚಾರ ಮತ್ತು ಸಂಘಟನೆಗೆ ಸೀಮಿತವಾಗಿದ್ದು, ನಂತರ ಸಾಮಾಜಿಕ ಜಾಗೃತಿಯ ಭಾಗವಾಗಿ ಆರಂಭದಲ್ಲಿ ಕೆಲ, ಹಿಂದುಳಿದ ಸಮುದಾಯಗಳ ಕಲ್ಯಾಣಕ್ಕಾಗಿ ಆರಂಭವಾದ, ಕರ್ನಾಟಕಕ್ಕೆ ವಿಶಿಷ್ಟವಾದ ಮಠವ್ಯವಸ್ಥೆ ಇಂದು ಜಾತಿ ಸಂಘಟನೆಯ ಮೂಲಕ ಒಂದು ಪ್ರಬಲ ರಾಜಕೀಯ ಶಕ್ತಿಯಾಗಿ ಮಾರ್ಪಾಡಾಗಿರುವುದನ್ನು ರಾಜ್ಯದಲ್ಲಿ ಇತ್ತೀಚೆಗೆ ನಡೆದ ಅಧಿಕಾರ ರಾಜಕಾರಣದ ಸಂದರ್ಭದಲ್ಲಿ ನಾವು ನೋಡಿದ್ದೇವೆ. ಇದು ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ಒಗ್ಗೂಡಿ ನಡೆಸುವ ಅನಪೇಕ್ಷಿತ ವಿದ್ಯಮಾನವೂ ಆಗಿದ್ದು ಈ ಬೆಳವಣಿಗೆಯ ಬಗ್ಗೆ ಗಂಭೀರ ಚರ್ಚೆ ನಡೆಸುವ ಕಾಲವೀಗ ಬಂದಿದೆ. ಈ ಲೇಖನ ಇಂತಹ ಚರ್ಚೆಯ ಆರಂಭಿಕ ಪ್ರಯತ್ನವಾಗಿದೆ. -ಸಂ.




ಪ್ರಜಾತಂತ್ರ ರಾಜಕಾರಣವು ಅದರ ಹುಟ್ಟಿನಿಂದ ಆರಂಭಗೊಂಡು ಅದು ಬೆಳೆದ ಅನೇಕ ಸಮಾಜಗಳ ಹಾಗೂ ರಾಷ್ಟ್ರಗಳಲ್ಲಿ ಅನೇಕ ವಿರೋಧಾಭಾಸಗಳನ್ನು ತನ್ನ ಒಡಲಲ್ಲಿ ಕಟ್ಟಿಕೊಂಡೇ ಬಂದಿದೆ. ಮುಖ್ಯವಾದುದೆಂದರೆ ಪ್ರಜಾಪ್ರಭುತ್ವದ ಆಧಾರವಾಗಿರುವುದು ಪ್ರಜೆಗಳ ಅಭಿಪ್ರಾಯ. ಆದರೆ 'ಪ್ರಜೆಗಳು' ಅನ್ನುವುದೇ ಒಂದು ಅಮೂರ್ತವಾದ ಪರಿಕಲ್ಪನೆ. ವಾಸ್ತವ ಸಮಾಜಗಳಲ್ಲಿ ಪ್ರಜೆಗಳು ವರ್ಗ, ಜಾತಿ, ಅಂತಸ್ತು, ಲಿಂಗ, ಭಾಷೆ ಇತ್ಯಾದಿಗಳಿಂದಾಗಿ ವಿಭಜಿತರಾಗಿರುತ್ತಾರೆ. ಈ ಭಿನ್ನತೆಗಳು ಮೇಲ್ಪದರಿನವಲ್ಲ; ಆಳವಾಗಿರುತ್ತವೆ. ಅಲ್ಲದೆ ಇವುಗಳಿಂದಾಗಿ ವಿಭಜಿತವಾದ ಗುಂಪುಗಳು ತಮ್ಮನ್ನು ಒಂದು ಗುಂಪಾಗಿ ರಚಿಸಿಕೊಳ್ಳುವುದು ಸಹಜವಾದ ಅಥವಾ ಸಾವಯವವಾದ ಪ್ರಕ್ರಿಯೆಯಲ್ಲ. ಯಾವುದನ್ನು ಆದಿಮ ಅಸ್ಮಿತೆಗಳು (primordial identities)ಎಂದು ಕರೆಯುತ್ತೇವೆಯೋ ಅವುಗಳು ನಾಗರೀಕತೆಯ ಬೆಳವಣಿಗೆಯ ಯಾವುದೋ ಹಂತದಲ್ಲಿ ತಮ್ಮ ಆದಿಮ ಸ್ಥಿತಿಯನ್ನು ಕಳೆದುಕೊಂಡು ರಚನೆಗಳ ಸ್ವರೂಪವನ್ನು ಪಡೆದುಕೊಂಡವು. ಉದಾಹರಣೆಗೆ ಬುಡಕಟ್ಟುಗಳು ಮತ್ತು ಜನಾಂಗಗಳು ನಂಬಿಕೊಂಡಿದ್ದ ಹುಟ್ಟಿನಿಂದ, 'ರಕ್ತದಿಂದ' ಬರುವ ಅಸ್ಮಿತೆಗಳನ್ನು ಕೂಡ ಇಂದು ನಾವು ಚಾರಿತ್ರಿಕವಾಗಿ ಬೆಳೆದು ಬದಲಾಗುವ ಅಸ್ಮಿತೆಗಳು ಎಂದೇ ನೋಡುತ್ತೇವೆ. ಉದಾಹರಣೆಗೆ 'ಕಪ್ಪು ಜನಾಂಗ'ವೆನ್ನುವಾಗ ಈ ಪರಿಕಲ್ಪನೆಯ ಬುನಾದಿಯೇನು, ಇದು ಚರ್ಮದ ಬಣ್ಣವೆನ್ನುವುದಾದರೆ ಎಷ್ಟು ಪ್ರಮಾಣದ ಕಪ್ಪನ್ನು ಕಪ್ಪು ಎಂದು ಈ ವರ್ಗೀಕರಣ ಒಪ್ಪುತ್ತದೆ? ಜನಾಂಗೀಯ ಸಂಕರದಿಂದಾಗಿ ಹುಟ್ಟುವ ಮಿಶ್ರ ಜನಾಂಗೀಯ ವ್ಯಕ್ತಿಗಳನ್ನು ಯಾವ ಕಾರಣಕ್ಕಾಗಿ ಯಾವ ಜನಾಂಗಗಳಿಗೆ ಸೇರಿಸುವುದು? ಹಾಗೆಯೆ ಬ್ರಾಹ್ಮಣ ಕುಲದಲ್ಲಿ ಜನಿಸಿ ಪಡೆಯುವ ಬ್ರಾಹ್ಮಣ ಅಸ್ಮಿತೆಯೂ ಅಸ್ಥಿರವಲ್ಲವೆ? ಉದಾಹರಣೆಗೆ ಒಂದು ಕಾಲದಲ್ಲಿ ಕೋಟ, ಶಿವಳ್ಳಿ, ದೇಶಸ್ಥ ಬ್ರಾಹ್ಮಣರು ಬ್ರಾಹ್ಮಣ ಜಾತಿಯಲ್ಲಿಯೇ ಅನಿಶ್ಚಿತವಾದ ಸ್ಥಾನವನ್ನು ಹೊಂದಿರಲಿಲ್ಲವೆ? ಇವೆಲ್ಲದರ ತಾತ್ಪರ್ಯವೆಂದರೆ ಯಾವುದೇ ಆಧುನಿಕ ಸಮಾಜದಲ್ಲಿ ಶಾಶ್ವತವಾದ ಆದಿಮವೆನ್ನಬಹುದಾದ ಅಸ್ಮಿತೆಗಳು ಇರುವುದಿಲ್ಲ. ಹೀಗಾಗಿ ವರ್ಗ, ಜಾತಿ ಇತ್ಯಾದಿಗಳ ಆಧಾರದ ಮೇಲೆ ವಿಭಿನ್ನ ಗುಂಪುಗಳ ರಚನೆಯಾಗುತ್ತದೆ. ಪ್ರಜೆಗಳು ಇಂಥ ಗುಂಪುಗಳಿಗೆ ಸೇರಿರುತ್ತಾರೆ. ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯು ಸಂವಿಧಾನ, ಕಾನೂನು, ಆಡಳಿತಗಳ ಮೂಲಕ ರಚಿಸಲು ಬಯಸುವ 'ಪ್ರಜೆಗಳು' ಎನ್ನುವ categoryಗೆ ಸೇರುವ ಮೊದಲು ಇಲ್ಲಿ ಹೇಳಿದ categoryಗಳಿಗೆ ಸೇರಿರುತ್ತಾರೆ. ಹೀಗಾಗಿಯೇ ಈ ಗುಂಪುಗಳ ಅಸ್ಮಿತೆಯು ಪ್ರಜಾಪ್ರಭುತ್ವವು ಬಯಸುವ ಅಸ್ಮಿತೆಗಿಂತ ಭಿನ್ನವಾಗಿರುತ್ತದೆ; ಕೆಲವೊಮ್ಮೆ ವಿರೋಧಿಯೂ ಆಗಿರುತ್ತದೆ. ಅಂಬೇಡ್ಕರ್ ಅವರು ಗಾಢವಾಗಿ ಚಿಂತಿಸಿದ ಸಮಸ್ಯೆ ಇದೇ ಆಗಿತ್ತು. ಸಂವಿಧಾನದ ಮೂಲಕ ನಾವು 'ಒಬ್ಬ ವ್ಯಕ್ತಿ, ಒಂದು ಮತ' ಎನ್ನುವ ರಾಜಕೀಯ ಸಮಾನತೆಯನ್ನು ಅನುಷ್ಠಾನಕ್ಕೆ ತರುವುದೇನೋ ಸರಿ. ಆದರೆ ರಾಜಕೀಯವಲ್ಲದ (ಉದಾಹರಣೆಗೆ ಆರ್ಥಿಕ, ಸಾಮಾಜಿಕ ಅಥವಾ ಸಾಂಸ್ಕೃತಿಕ) ಸಮಾನತೆ ಇಲ್ಲದೆ ಇರುವ ವಾಸ್ತವ ಪ್ರಜಾಪ್ರಭುತ್ವದ ವಿರೋಧಾಭಾಸಗಳನ್ನು ಎದುರಿಸುವುದು ಹೇಗೆ?

ಅಂಬೇಡ್ಕರ್ ಅವರು ಗುರುತಿಸಿದ ವಿರೋಧಾಭಾಸದ ಒಂದು ಸಂಕೀರ್ಣವಾದ ಉದಾಹರಣೆಯೆಂದರೆ ಕರ್ನಾಟಕದ ರಾಜಕೀಯದಲ್ಲಿ ಮಠಗಳು ವಹಿಸುತ್ತಿರುವ ಪಾತ್ರವಾಗಿದೆ. ಕರ್ನಾಟಕದ ಜಾತಿ ಸಮುದಾಯಗಳು ರಾಜಕೀಯವಾಗಿ ತಮ್ಮನ್ನು ಸಂಘಟಿತಗೊಳಿಸುವ ಪ್ರಕ್ರಿಯೆಯು ಪ್ರಬಲವಾಗಿ ಪ್ರಾರಂಭವಾಗಿದ್ದು ವಸಾಹತುಶಾಹಿ ಕಾಲದ, ೧೯ನೇ ಶತಮಾನದ ಕೊನೆಯ ಭಾಗದಲ್ಲಿ ಹಾಗೂ ಇಪ್ಪತ್ತನೇಯ ಶತಮಾನದ ಮೊದಲ ದಶಕಗಳಲ್ಲಿ. ಜಾತಿವ್ಯವಸ್ಥೆಯ ಹಾಗೂ ಜಾತಿ ಸಂಘರ್ಷಗಳ ಸುದೀರ್ಘವಾದ ಇತಿಹಾಸವನ್ನು ನಾನು ಇಲ್ಲಿ ಚರ್ಚಿಸುವುದಿಲ್ಲ. ಆದರೆ ವಸಾಹತು ಪೂರ್ವ ಕಾಲದಿಂದಲೂ ಇಂದು ಕರ್ನಾಟಕವೆಂದು ಕರೆಯುವ ನಾಡಿನಲ್ಲಿ ಪ್ರಭುತ್ವ ಮತ್ತು ಧಾರ್ಮಿಕ ಸಂಸ್ಥೆಗಳ ಸಂಬಂಧಗಳು ಆತ್ಮೀಯವಾಗಿದ್ದವು. ಅಲ್ಲದೆ ಈ ಸಂಬಂಧಗಳು ಧಾರ್ಮಿಕವೆಂದು ಕಂಡರೂ ಮೂಲತಃ ಅಧಿಕಾರ ರಾಜಕೀಯದ ಸಂಬಂಧಗಳಾಗಿದ್ದವು. ಹೀಗಾಗಿಯೇ ಕರ್ನಾಟಕದಲ್ಲಿ ಸಿಕ್ಕಿರುವ ಶಾಸನಗಳ ಮೊದಲ ಹಂತದಿಂದಲೂ ಈ ಧರ್ಮ ಸಂಸ್ಥೆಗಳಿಗೆ ದಾನ, ದತ್ತಿ ಇತ್ಯಾದಿಗಳನ್ನು ಪ್ರಭುತ್ವವು ನೀಡಿರುವ ದಾಖಲೆಗಳಿವೆ. ಅಲ್ಲದೆ ರಾಜಕೀಯ ವಿಷಯಗಳಲ್ಲಿ ಈ ಸಂಸ್ಥೆಗಳು ನೇರವಾಗಿ ಭಾಗವಹಿಸಿದ ದಾಖಲೆಗಳೂ ಇವೆ. ಹೀಗಾಗಿ ಈ ನಾಡಿನಲ್ಲಿ ಧರ್ಮ ಸಂಸ್ಥೆಗಳು ಹಾಗೂ ಪ್ರಭುತ್ವದ ಸಂಬಂಧಗಳು ಪರಸ್ಪರ ಅವಲಂಬನೆಯ ಪೂರಕ ಸಂಬಂಧಗಳಾಗಿದ್ದವು. ಮತ್ತು ಈ ಸಂಬಂಧಗಳು ಅಧಿಕಾರಶಾಹಿ ಹಾಗೂ ಪ್ರತಿಷ್ಠಿತ ವರ್ಗಗಳನ್ನು ಒಳಗೊಂಡಿದ್ದವು. ಧಾರ್ಮಿಕ ಅಥವಾ ಅನುಭಾವಿ ಕಾರಣಗಳಿಗಾಗಿ ಜನಸಾಮಾನ್ಯರು ಮಠಗಳ ಆಚೆಗೆ ಅಥವಾ ಮಠದೊಳಗಿದ್ದರೂ ಮಠವಿರೋಧಿ ನಿಲುವುಗಳ ಆಧ್ಯಾತ್ಮ ಪರಂಪರೆಗಳನ್ನು, ಗುರುಪರಂಪರೆಗಳನ್ನು ಆಶ್ರಯಿಸಿದ್ದರು. ಇದರಿಂದಾಗಿ ಮಠಗಳ/ ಧಾರ್ಮಿಕ ಸಂಸ್ಥೆಗಳ ಸೆಕ್ಯೂಲರ್ ಅಧಿಕಾರವೇನೂ ಕಡಿಮೆಯಾಗಲಿಲ್ಲ. ಕರ್ನಾಟಕದ ರಾಜಕಾರಣಕ್ಕೆ ಪ್ರಸ್ತುತವಾಗಿರುವ ವಸಾಹತುಶಾಹಿಯ ಈ ಹಂತದಲ್ಲಿ ವಿಶೇಷವಾಗಿ ಮಠಗಳು ಮುನ್ನೆಲೆಗೆ ಬಂದದ್ದು ವಸಾಹತುಶಾಹಿ ತೆರೆದಿಟ್ಟ ಶಿಕ್ಷಣ ಹಾಗೂ ಉದ್ಯೋಗಾವಕಾಶಗಳಿಂದಾಗಿ. ಉದಾಹರಣೆಗೆ ಲಿಂಗಾಯತ ಮಠಗಳು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ವಸತಿನಿಲಯ ಇವುಗಳನ್ನು ಒದಗಿಸಿಕೊಟ್ಟವು. ಈ ಉದ್ದೇಶಗಳಿಂದಾಗಿ ಲಿಂಗಾಯತ ಸಮುದಾಯವು ಆಧುನಿಕ ರೀತಿಯಲ್ಲಿ ಸಂಘಟಿತವಾಗತೊಡಗಿತು. ಅಷ್ಟು ಮಾತ್ರವಲ್ಲ ಈ ಎರಡೂ ಕ್ಷೇತ್ರಗಳಲ್ಲಿ ಯಜಮಾನಿಕೆ ಹೊಂದಿದ ಬ್ರಾಹ್ಮಣರೊಂದಿಗೆ ಸ್ಪರ್ಧೆಗೆ ಇಳಿಯಿತು. ಈ ವಿದ್ಯಮಾನಗಳ ವಿವರಗಳನ್ನು ಚಿದಾನಂದಮೂರ್ತಿಯವರು ತಮ್ಮ ಕೃತಿಗಳಲ್ಲಿ ಒದಗಿಸಿಕೊಟ್ಟಿದ್ದಾರೆ. ಈ ವಿದ್ಯಮಾನದ ಹಿಂದೆ ಮೈಸೂರು ರಾಜ್ಯದಲ್ಲಿ ಜಾತಿವಾರು ಮೀಸಲಾತಿಯು ೧೯೧೯ರಿಂದಲೇ ಆರಂಭವಾದದ್ದು ಮುಖ್ಯವಾಗಿದೆ. ಬಹು ಸಂಕೀರ್ಣ ವಸ್ತುವನ್ನು ಸಂಕ್ಷಿಪ್ತವಾಗಿ ಹೇಳುವುದಾದರೆ ಆಧುನಿಕ ಕರ್ನಾಟಕದಲ್ಲಿ ಜಾತಿ ಸಂಘಟನೆ ಮತ್ತು ಅಸ್ಮಿತೆಗಳ ರಚನೆಯಲ್ಲಿ ಮಠಗಳ ಪಾತ್ರವು ಬಹು ಮುಖ್ಯವಾಗಿತ್ತು. ಒಂದು ಕಡೆಗೆ ಕ್ರಮೇಣವಾಗಿ ಪ್ರಜಾಪ್ರಭುತ್ವವಾದಿ ಸಂಸ್ಥೆಗಳು, ಆಡಳಿತ ಆರಂಭವಾಗುವ ಕಾಲದಲ್ಲಿಯೆ ಜಾತಿ ಸಂಘಟನೆಗಳು ಮತ್ತು ಮಠಗಳು ಪ್ರಬಲವಾಗತೊಡಗಿದ್ದವು. ಭಾರತದ ಮಟ್ಟದಲ್ಲಿ ಕೂಡ ಸ್ಥಳೀಯ ಆಡಳಿತ ಸಂಸ್ಥೆಗಳು, ಪ್ರಾಂತಮಟ್ಟದ assembly ಇತ್ಯಾದಿಗಳ ಚುನಾವಣೆಗಳಲ್ಲಿ ಜಾತಿಯೇ ಪ್ರಮುಖ ಪಾತ್ರವಹಿಸತೊಡಗಿದವು. ಇದರ ಪರಿಣಾಮವಾಗಿ ಜಾತಿಕೇಂದ್ರಿತ ಮಠಗಳು ಹಾಗೂ ಸಂಸ್ಥೆಗಳು ರಾಜಕೀಯ ಪ್ರಾಬಲ್ಯವನ್ನು ಪಡೆಯಲಾರಂಭಿಸಿದವು.

ಕರ್ನಾಟಕದ ಏಕೀಕರಣದ ದೀರ್ಘ ಹೋರಾಟವು ಯಶಸ್ವಿಯಾಗಿ ಇನ್ನೇನು ಏಕೀಕೃತ ಕರ್ನಾಟಕ ಉದಯವಾಗಬಹುದು ಎಂದ ಕೂಡಲೇ ಕರ್ನಾಟಕ ರಾಜಕೀಯದ ಜಾತಿ ರಾಜಕೀಯವು ಅತ್ಯಂತ ಕ್ರಿಯಾಶೀಲವಾಯಿತು. ಏಕೀಕರಣವಾದರೆ ಲಿಂಗಾಯತರ ಜನಸಂಖ್ಯೆ ಹೆಚ್ಚಾಗುತ್ತದೆ ಮತ್ತು ಮೈಸೂರು ಪ್ರಾಂತದಲ್ಲಿ ಪ್ರಬಲವಾಗಿದ್ದ ಒಕ್ಕಲಿಗರ ರಾಜಕೀಯ ಅಧಿಕಾರಕ್ಕೆ ಇದು ಸವಾಲಾಗುತ್ತದೆ ಎನ್ನುವ ಕಾರಣಕ್ಕಾಗಿ ಏಕೀಕರಣವನ್ನು ವಿರೋಧಿಸಿ ಎರಡು ಪ್ರತ್ಯೇಕ ರಾಜ್ಯಗಳ ಬೇಡಿಕೆ ಮೈಸೂರಿನಲ್ಲಿ ಬಲಪಡೆಯಿತು. ಏಕೀಕರಣದ ಪರವಾಗಿದ್ದರಿಂದಾಗಿ ಕೆಂಗಲ್ ಹನುಮಂತಯ್ಯನವರು ಮುಂದೆ ಸೋತು ರಾಜೀನಾಮೆ ಕೊಡಬೇಕಾಯಿತು. ಕರ್ನಾಟಕದ ಜಾತಿ ರಾಜಕೀಯವು ಅದೆಷ್ಟು ಆಳವಾಗಿವೆಯೆಂದರೆ ಏಕೀಕರಣವನ್ನೇ ವಿರೋಧಿಸುವ ಮಟ್ಟದಲ್ಲಿತ್ತು ಎನ್ನುವುದನ್ನು ಇತಿಹಾಸ ಶಂಶೋಧಕ ಎಸ್.ಚಂದ್ರಶೇಖರ ವಿವರವಾಗಿ ಚರ್ಚಿಸಿದ್ದಾರೆ. ಇಷ್ಟಾದರೂ ಏಕೀಕರಣದ ಹಂತದಲ್ಲಿ ಮಠಗಳು ನೇರವಾಗಿ ರಾಜಕೀಯಕ್ಕೆ ಪ್ರವೇಶಿಸಲಿಲ್ಲ. ಮುಂದೆ ಕೂಡ ಕರ್ನಾಟಕದ ಪ್ರಜಾಪ್ರಭುತ್ವ ರಾಜಕಾರಣವು ಲಿಂಗಾಯತ ಹಾಗೂ ಒಕ್ಕಲಿಗ ಜಾತಿಗಳ ರಾಜಕೀಯವಾಗಿಯೇ ಬೆಳೆದುಬಂದಿದೆ. ಈ ವಾಸ್ತವವು ಖಚಿತವಾದ ಮೇಲೆ

ಜಾತಿ ಮಠಗಳು ಅತಿಶಯವಾದ ಪ್ರಾಬಲ್ಯ ಪಡೆಯತೊಡಗಿದವು. ಇದು ಧಾರ್ಮಿಕತೆಯ ಸೋಂಕೂ ಇರದ 'ಸೆಕ್ಯೂಲರ್'('ಲೌಕಿಕ') ಆದ ರಾಜಕೀಯ. ತಮ್ಮ ಜಾತಿಯ ಸರಕಾರಗಳು ಹಾಗೂ ಧುರೀಣರ ಬೆಂಬಲದಿಂದ ಅಪಾರವಾದ ಆಸ್ತಿಗಳನ್ನು ಸಂಪಾದಿಸಿ, ಯಾವ ತೆರಿಗೆಯನ್ನೂ ಕೊಡದೆ ಈ ಆಸ್ತಿಯನ್ನು ಶಿಕ್ಷಣ ಸಂಸ್ಥೆಗಳು (ವಿಶೇಷವಾಗಿ ವೈದ್ಯಕೀಯ ಹಾಗೂ ಇಂಜಿನಿಯರಿಂಗ್), ಆಸ್ಪತ್ರೆಗಳು, ಇತರ ಸಂಸ್ಥೆಗಳನ್ನು ಕಟ್ಟುವುದರಲ್ಲಿ ತೊಡಗಿಸಿ ಅನೇಕ ಮಠಗಳು/ಧಾರ್ಮಿಕ ಸಂಸ್ಥೆಗಳು ಬಂಡವಾಳಶಾಹಿಯ ಸ್ವರೂಪವನ್ನು ಪಡೆದುಕೊಂಡವು. ತಮ್ಮ ಸಂಘಟನೆ, ಆಡಳಿತ ಹಾಗೂ ಸಾರ್ವಜನಿಕ ಕ್ರಿಯೆಗಳಲ್ಲಿ ವಾಸ್ತವ ರಾಜಕಾರಣವನ್ನು ಅಕ್ಷರಶಃ ಅನುಕರಿಸತೊಡಗಿದವು. (ಭ್ರಷ್ಟಾಚಾರ ಹಾಗೂ candalಗಳಲ್ಲಿ ಕೂಡ). ಈ ಬೆಳವಣಿಗೆಗೆ ನ್ಯಾಯಸಮರ್ಥನೆ ದೊರೆತದ್ದು ಬಲಪಂಥೀಯ ರಾಜಕೀಯ ಹಾಗೂ ಸಿದ್ಧಾಂತಗಳಿಂದಾಗಿ. ಎಲ್ಲಾ ಧರ್ಮಗಳ ಮಠಗಳು "ಹಿಂದೂ" ಎನ್ನುವ ಅನುಕೂಲಸಿಂಧು ಛತ್ರದ ಅಡಿಯಲ್ಲಿ ಬಲಪಂಥೀಯ ರಾಜಕೀಯ ಪಕ್ಷವನ್ನು ಎಗ್ಗಿಲ್ಲದೆ ಬೆಂಬಲಿಸತೊಡಗಿದವು. ಉಡುಪಿಯ ಶ್ರೀ ಕೃಷ್ಣಮಠವೂ (ಬಹುತೇಕ) ಲಿಂಗಾಯತ ಮಠಗಳೂ ಒಂದೇ ಪಕ್ಷವನ್ನು ಸಮರ್ಥಿಸಬಲ್ಲವು ಎಂದರೆ ಈ ಮಠರಾಜಕಾರಣಗಳ ಸ್ವರೂಪವನ್ನು ಅರ್ಥಮಾಡಿಕೊಳ್ಳಬಹುದು. ಇದನ್ನು ಹೇಳಲು ಕಾರಣವೆಂದರೆ ಒಂದು ಬ್ರಾಹ್ಮಣ ಮಠಕ್ಕೂ ಶಂಕರಾಚಾರ್ಯರ ತತ್ವಜ್ಞಾನಕ್ಕೂ, ಒಂದು ಲಿಂಗಾಯತ ಮಠಕ್ಕೂ ವಚನಕಾರರಿಗೂ ಯಾವುದೇ ಸಂಬಂಧವೇ ಇಲ್ಲವೆನ್ನುವುದನ್ನು ಸ್ಪಷ್ಟಗೊಳಿಸುವುದಕ್ಕಾಗಿ.

ಹೀಗೆ ಜಾತಿ ರಾಜಕೀಯ ಮತ್ತು ಮಠಗಳು ಕರ್ನಾಟಕ ರಾಜಕೀಯವನ್ನು ನಿಯಂತ್ರಿಸತೊಡಗಿದ್ದರ ಪರಿಣಾಮವೆಂದರೆ ಇಲ್ಲಿಯ ಪ್ರಜಾಪ್ರಭುತ್ವವಾದಿ ರಾಜಕಾರಣವೇ ಇಬ್ಭಾಗವಾಗಿ ಚುನಾವಣಾತ್ಮಕ ಪ್ರಜಾಪ್ರಭುತ್ವ (electoral democracy) ಹಾಗೂ ನಿಜ ಪ್ರಜಾಪ್ರಭುತ್ವ (real democracy)ಗಳು ಸಂಪೂರ್ಣ ಬೇರೆಯಾದವು. ರಾಜಕೀಯ ತತ್ವಗಳು, ಕಾರ್ಯಕ್ರಮಗಳು, ಕ್ರಿಯೆಗಳು ಹಿನ್ನೆಲೆಗೆ ಸರಿದು ಜಾತಿ ಲೆಕ್ಕಾಚಾರಗಳಿಗೆ ಪ್ರಾಧಾನ್ಯ ದೊರೆಯಿತು. ಇದು ಎಷ್ಟರಮಟ್ಟಿಗೆ ರಾಜಕೀಯ common sense ಆಯಿತೆಂದರೆ ಕರ್ನಾಟಕದ ಯಾವುದೇ ಚುನಾವಣೆಯ ವಿಶ್ಲೇಷಣೆಯು ಜಾತಿಯಿಂದಲೇ ಆರಂಭವಾಗುತ್ತದೆ. ಈ ಬಗೆಯ ಜಾತಿ ರಾಜಕಾರಣದಲ್ಲಿ ಶೂದ್ರ ಹೋರಾಟಗಳು, ಹಿಂದುಳಿದ ಜಾತಿ ಹೋರಾಟಗಳಿಗೆ ಆಸ್ಪದವೇ ಇಲ್ಲ, ದಲಿತ ರಾಜಕಾರಣಕ್ಕೆ ಆಸ್ಪದವಿಲ್ಲ, ಭಾರತದ ಇತರ ಕೆಲವು ರಾಜ್ಯಗಳಲ್ಲಿ ಒಂದು ಸಣ್ಣ ಪ್ರಮಾಣದಲ್ಲಾದರೂ ಹಿಂದುಳಿದ ಜಾತಿ ಹೋರಾಟಗಳು ಮಹತ್ವಪೂರ್ಣವಾಗಿದ್ದರೆ ಕರ್ನಾಟಕದಲ್ಲಿ ದೇವರಾಜ್ ಅರಸು ಅವರ ರಾಜಕಾರಣವನ್ನು ಬಿಟ್ಟರೆ ಇಲ್ಲಿ ಜಾತಿರಾಜಕಾರಣವು ಸಿದ್ಧಾಂತವಾಗಿ ಬೆಳೆಯಲೇ ಇಲ್ಲ. ಕೇವಲ ಚುನಾವಣಾ ರಾಜಕೀಯದ ತಂತ್ರವಾಗಿ ಅದು ಬೆಳೆಯಿತು. ಹೀಗಾಗಿ ಕರ್ನಾಟಕದ ಮಠಗಳು ಯಾವ ಸಿದ್ಧಾಂತವೂ ಇಲ್ಲದೆ ತಮ್ಮನ್ನು ತಾವೇ ವೋಟ್ ಬ್ಯಾಂಕ್‌ಗಳಾಗಿ ಪರಿವರ್ತಿಸಿಕೊಂಡಿವೆ. ಈ ವೋಟ್ ಬ್ಯಾಂಕ್ ರಾಜಕಾರಣದ ಹರಹು ಹೇಗಿದೆಯೆಂದರೆ ಯಡಿಯೂರಪ್ಪನವರ ಪರವಾಗಿ ಕಾಂಗ್ರೆಸ್ ಪಕ್ಷದ ಇಬ್ಬರು ಹಿರಿಯ ಹಾಗೂ ಪ್ರಭಾವಿ ನಾಯಕರು ಪಕ್ಷಾತೀತವಾಗಿ ಅವರ ಪರವಾಗಿ ವಾದ ಮಂಡಿಸಿದರು. ಇದಕ್ಕೆ ಕಾರಣವೆಂದರೆ ಕಾಂಗ್ರೆಸ್ ಆಗಲಿ, ಇನ್ನಾವ ರಾಜಕೀಯ ಪಕ್ಷವಾಗಲಿ ಇಂದು ಸಿದ್ಧಾಂತವನ್ನು ಹೊಂದಿಲ್ಲ. ಕಾಂಗ್ರೆಸ್ ಪಕ್ಷಕ್ಕೆ ಸ್ವಾತಂತ್ರ್ಯ ಹೋರಾಟ ಕಾಲದ ಕಾಂಗ್ರೆಸ್ ನೆನಪುಗಳಂತು ಇಲ್ಲವೇ ಇಲ್ಲ. ತನ್ನ ಸೆಕ್ಯೂಲರ್ ಪ್ರಣಾಳಿಕೆಯ ನೆನಪು ಇಲ್ಲ, ಹೀಗಾಗಿ ಮಠಗಳಿಗೆ ಲಿಂಗಾಯಿತ ವೀರಶೈವ ಸಂಘಟನೆಗಳಿಗೆ ವಿಧೇಯರಾಗಿರುವ ಪಕ್ಷದ ನಾಯಕರು ಪಕ್ಷಕ್ಕಿಂತಲೂ ಜಾತಿಅಸ್ಮಿತೆಯನ್ನೇ ನೆಚ್ಚಿಕೊಂಡರೆ ಇದನ್ನೇ ಜೆಡಿಎಸ್‌ನ ಒಕ್ಕಲಿಗ ನಾಯಕರಲ್ಲೂ ಕಾಣಬಹುದು. ಇದೆಲ್ಲ ಅದಷ್ಟು ಧಾರ್ಷ್ಟ್ಯದಿಂದ ನಡೆಯುತ್ತಿದೆಯೆಂದರೆ ಬಿ.ಜೆ.ಪಿಯಾಗಲಿ, ಕಾಂಗ್ರೆಸ್ ಆಗಲಿ ಇಂಥ ನಾಯಕರ ಮೇಲೆ ಕ್ರಮ ಕೈಗೊಳ್ಳುವ ಧೈರ್ಯವನ್ನು ತೋರಿಸಲಿಲ್ಲ. ಕಾಂಗ್ರೆಸ್ ಲಿಂಗಾಯಿತರಲ್ಲಿ ಇನ್ನೆಷ್ಟು ಜನ ಗುಪ್ತ ಆರಾಧಕರಿದ್ದಾರೆಯೆನ್ನುವುದನ್ನು ಕಾಲವೇ ಬಯಲು ಮಾಡಬೇಕಾಗಿದೆ.

ನಾನು ನನ್ನ ನೆನಪಿನ ಆಧಾರದಲ್ಲಿ ಹೇಳುವುದಾದರೆ ಕರ್ನಾಟಕದಲ್ಲಿ ಇಷ್ಟೊಂದು ಮಠಗಳಿವೆ ಹಾಗೂ ಸ್ವಾಮಿಗಳಿದ್ದಾರೆ ಎನ್ನುವುದು ಇತ್ತೀಚಿನ ವರ್ಷಗಳಲ್ಲಿ ಮಾತ್ರ ನನಗೆ ಗೊತ್ತಾಯಿತು. ರಾಜ್ಯದ ಒಟ್ಟು ಜನಸಂಖ್ಯೆಯ ಅರ್ಧದಷ್ಟು ಕಾವಿಧಾರಿ ಸ್ವಾಮಿಗಳೇ ಇದ್ದಾರೆ ಎನ್ನುವ ಭಾವನೆಯನ್ನು ನಮ್ಮ ಮಾಧ್ಯಮಗಳು ಕೊಡುತ್ತಿವೆ. ಇರಲಿ. ಈ ಮಠ ರಾಜಕಾರಣದ ಇನ್ನೊಂದು ಆಯಾಮವೆಂದರೆ ಅದು ಜಾತಿಯಿಂದ ಉಪಜಾತಿ ಹಾಗೂ ಬಣಗಳವರೆಗೆ ಸತತವಾಗಿ ಒಡೆದು ಹೋಗುತ್ತದೆ. ಲಿಂಗಾಯತ ಎನ್ನುವುದು ಈಗ ಪಂಚಮಸಾಲಿ, ಸಾದರ, ಬಣಜಿಗ ಎನ್ನುವ ಅಸ್ಮಿತೆಗಳ ಕಡೆಗೆ ಚಲಿಸಿದೆ. ಇದರ ಪ್ರತಿಬಿಂಬ ಎನ್ನುವಂತೆ ಎಲ್ಲಾ ಚಿಕ್ಕ ಸಮುದಾಯಗಳು ಕೂಡ ಸಂಘಟಿತವಾಗಿ ತಮ್ಮ ಮಠಗಳನ್ನು ಕಟ್ಟಿಕೊಂಡಿವೆ. ಇದು ಪ್ರಜಾಪ್ರಭುತ್ವ ರಾಜಕಾರಣಕ್ಕೆ, ಎಂಥಾ ಅಪಾಯವೆಂದು ವಿವರಿಸಬೇಕಾಗಿಲ್ಲ. ಈ ಮಠಗಳು ಅ) ಜಾತಿ ಸಂಘಟನೆ ಆ) ಲಾಬಿಗಳು ಇ) pressure groups ಉ)ವೋಟ್ ಬ್ಯಾಂಕ್‌ಗಳು ಇವೇ ಮುಂತಾದ ವೈವಿಧ್ಯಮಯ ಕಾರ್ಯಗಳನ್ನು, ಪಾತ್ರಗಳನ್ನು ನಿರ್ವಹಿಸುತ್ತಿವೆ. ಈ ಲೇಖನದ ಶುರುವಾತಿಗೆ ಮರುಳುವುದಾದರೆ ಈಗ ಪ್ರಜೆಗಳೇ ಇಲ್ಲವಾಗಿ ಜಾತಿಸಂಘಟನೆಗಳ ಸದಸ್ಯರು ಮಾತ್ರ ಇರುವುದರಿಂದ ಪ್ರಜೆಗಳಿಲ್ಲದ ಪ್ರಜಾಪ್ರಭುತ್ವ ರಾಜಕಾರಣ ಮಾಡುವ ಬಿಕ್ಕಟ್ಟಿನಲ್ಲಿ ಇಂದು ಕರ್ನಾಟಕ ರಾಜ್ಯವಿದೆ.

ಈ ಪರಿಸ್ಥಿತಿ ಈ ಬಿಕ್ಕಟ್ಟಿಗೆ ತಲುಪಲು ಪ್ರಮುಖ ಕಾರಣವೆಂದರೆ ಈಗ ಮಾಜಿಯಾಗಿರುವ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಎಡಿಯೂರಪ್ಪನವರು. ಅವರ ಹಿಂದೆ ಇಡೀ ಲಿಂಗಾಯತ ಸಮುದಾಯವೇ ಇದೆ ಮತ್ತು ಇದು ಅವರ ವ್ಯಕ್ತಿತ್ವದ ವರ್ಚಸ್ಸಿನಿಂದಾಗಿ ಎನ್ನುವ ಎರಡು ಪುರಾಣಗಳನ್ನು ಹರಿಬಿಡಲಾಗಿದೆ. ವಾಸ್ತವವೆಂದರೆ ವೀರೇಂದ್ರ ಪಾಟೀಲರಿಗೆ ಕೇಂದ್ರದ ಕಾಂಗ್ರೆಸ್ ಸರಕಾರ ಮಾಡಿದ ಅವಮಾನ ಮತ್ತು ಇಂದಿಗೂ ಫ್ಯೂಡಲ್ ಧೋರಣೆಗಳ ಜಾತಿ ಶ್ರೇಷ್ಠತೆಯ ಧೋರಣೆಯ ಲಿಂಗಾಯತ ರಾಜಕೀಯ ಧುರೀಣರಿಗೆ ಕಾಂಗ್ರೆಸ್ ಹಿಂದುಳಿದ ಜಾತಿಗಳ ಪರವಾಗಿದೆ ಎನ್ನುವ ಸಂಶಯಗಳಿಂದಾಗಿ ಯಡಿಯೂರಪ್ಪನವರ "ಲಿಂಗಾಯತ" ರಾಜಕಾರಣಕ್ಕೆ ಅನುವು ದೊರೆಯಿತು. ಈ ಲೇಖನದಲ್ಲಿ ಈ ಹಿಂದೆಯೇ ಹೇಳಿದಂತೆ ಏಕೀಕರಣಪೂರ್ವದ ಕಾಲದಿಂದಲೇ ಕರ್ನಾಟಕ ರಾಜಕೀಯವೆ ಲಿಂಗಾಯತ–ಒಕ್ಕಲಿಗ ರಾಜಕೀಯವಾಗಿದೆ. ಅದರಲ್ಲಿ ಯಡಿಯೂರಪ್ಪನವರು ಒಬ್ಬ ಪಾತ್ರಧಾರಿ. ಆದರೆ ಪ್ರಜಾಪ್ರಭುತ್ವವಾದಿ ರಾಜಕಾರಣದ ಮೂಲ ನಿಯಮಗಳನ್ನೇ ಮರೆತು ಅವರು ಅವರೆಗೆ ಅತ್ಯಲ್ಪ ಮಟ್ಟಕ್ಕಾದರೂ ಸಾಧ್ಯವಾಗಿದ್ದ ರಾಜಕಾರಣದ ಲೋಕತತ್ವೀಕರಣ ("secularization of politics") ಪ್ರಕ್ರಿಯೆಯನ್ನು ನಾಶಗೊಳಿಸಿದರು. ನೇರವಾಗಿ ಆರ್ಥಿಕ ಹಾಗೂ ಇತರ ಬೆಂಬಲದ ಮೂಲಕ ಮಠಗಳನ್ನು 'ಖರೀದಿ' ಮಾಡಲು ಶುರು ಮಾಡಿದರು. ಇಲ್ಲಿ ಕೇಳಬೇಕಾದ ಪ್ರಶ್ನೆಯೆಂದರೆ ಲಿಂಗಾಯತ ಅಸ್ಮಿತೆಯು ನಿಜವಾಗಿಯೂ ಈ ಪ್ರಮಾಣದ ಅಭದ್ರತೆಯನ್ನು ಹೊಂದಿತ್ತೆ? ಅಥವಾ ರಾಜಕಾರಣದಲ್ಲಿ ಮಾತ್ರ ಬಲಾಢ್ಯ ಜನಾಂಗವಾದ ತನಗೆ ಅಧಿಕಾರ ಸಿಕ್ಕುತ್ತಿಲ್ಲವೆಂದು ಈ ಸಮುದಾಯವು ಅಂದುಕೊಂಡಿತೆ? ಇದರ ಇನ್ನೊಂದು ಆಯಾಮವೆಂದರೆ ಯಡಿಯೂರಪ್ಪನವರ 'ಲಿಂಗಾಯತ ರಾಜಕಾರಣ' ದಿಂದಾಗಿ ಮಠಗಳು ಮತ್ತು ರಾಜಕೀಯ ಧುರೀಣರ ಹೊರತಾಗಿ ಸಾಮಾನ್ಯ ಲಿಂಗಾಯತರಿಗೆ ಏನಾದರೂ ಪ್ರಯೋಜನವಾಗಿತ್ತೆ? ಉತ್ತರವೆಂದರೆ ಏನೂ ಇಲ್ಲ. ಅಷ್ಟು ಮಾತ್ರವಲ್ಲ ಲಿಂಗಾಯತರಲ್ಲಿಯೆ ಬಲಾಢ್ಯ ಉಪಜಾತಿಯಾದ ಪಂಚಮಸಾಲಿ ಜನಾಂಗವು ಮೀಸಲಾತಿಯಲ್ಲಿ ಹೆಚ್ಚಿನ ಪಾಲನ್ನು ಕೇಳಿತೆ ಹೊರತು ಲಿಂಗಾಯಿತರಲ್ಲಿಯೆ ದುರ್ಬಲ ಹಾಗೂ ಹಿಂದುಳಿದ ಅನೇಕ ಉಪಜಾತಿಗಳ ಪರವಾಗಿ ಯಾವ ಮಠಗಳೂ ಈವರೆಗೆ ದನಿ ಎತ್ತಿಲ್ಲ. ಹೀಗಾಗಿ ಕರ್ನಾಟಕದ ಜಾತಿ ರಾಜಕಾರಣವನ್ನು ಆಯಾ ಜಾತಿಗಳಲ್ಲಿ ಇರುವ ಬಲಾಢ್ಯರ ರಾಜಕಾರಣವೆಂದು ವಿಶ್ಲೇಷಿಸಬೇಕೆ ಹೊರತು ಅದು ಆಯಾ ಜಾತಿಯೊಳಗಿನ ಉಪಜಾತಿಗಳನ್ನು, ಸಣ್ಣ ಸಮುದಾಯಗಳನ್ನು ಒಳಗೊಳ್ಳುವುದಿಲ್ಲ. ಸಂಖ್ಯೆಯಲ್ಲಿ ಚುನಾಯಿತ ಲಿಂಗಾಯತ ಪ್ರತಿನಿಧಿಗಳ ಸಂಖ್ಯೆ ಹೆಚ್ಚಿರಬಹುದು ಆದರೆ ಅವರೆಲ್ಲರೂ ಕೇವಲ ಲಿಂಗಾಯತ ಮಠಗಳಿಂದ ಗೆದ್ದರು ಎನ್ನುವುದು ಒಂದು ಸುಳ್ಳು ಪುರಾಣ. ಅನೇಕ ಲಿಂಗಾಯತರಲ್ಲದ ಎಂ.ಎಲ್.ಎ.ಗಳು ಕಾಂಗ್ರೆಸ್, ಜೆ.ಡಿ.ಎಸ್.ನಿಂದ ಬಿ.ಜೆ.ಪಿ.ಗೆ ಪಕ್ಷಾಂತರ ಮಾಡದಿದ್ದರೆ ಯಡಿಯೂರಪ್ಪನವರು ಅಧಿಕಾರಕ್ಕೆ ಬರುತ್ತಿರಲಿಲ್ಲ. ಹೀಗಾಗಿ ಇಡೀ ಲಿಂಗಾಯತ ಜನಾಂಗದ ಒಮ್ಮತದ ರಾಜಕೀಯ ಆಯ್ಕೆಯನ್ನು ತಾವು ನಿಯಂತ್ರಿಸುತ್ತೇವೆ ಅಥವಾ ಪ್ರತಿನಿಧಿಸುತ್ತೇವೆ ಎಂದು ಮಠಗಳು ಹೇಳಿಕೊಳ್ಳುತ್ತಿರುವುದು ಸುಳ್ಳು ಪ್ರತಿಪಾದನೆ. ಲಿಂಗಾಯತ ಉಪಜಾತಿಗಳ ಮಧ್ಯ ಅದೆಷ್ಟು ಬಿರುಕುಗಳಿವೆ, ಕಂದರಗಳಿವೆ ಎಂದರೆ ಲಿಂಗಾಯತ ಎನ್ನುವುದು ಒಂದು ಸಮಾಜವೆನ್ನುವುದು ಒಂದು ಕೃತ್ರಿಮ ರಚನೆ.

ಡಾ. ಬಿ.ಆರ್. ಅಂಬೇಡ್ಕರ್ ಅವರು ವಿಶ್ಲೇಷಿಸಿದಂತೆ "ತಾರತಮ್ಯಗಳಿರುವ ಅಸಮಾನತೆ" (graded inequality)ಯೇ ಲಕ್ಷಣವಾಗಿರುವ ಜಾತಿ ವ್ಯವಸ್ಥೆಯು ಕರ್ನಾಟಕದಲ್ಲಿ ಪಡೆದಿರುವ ಸ್ವರೂಪವೆಂದರೆ ಹಿಂದುಳಿದ ಹಾಗೂ ದಲಿತ ಸಮುದಾಯಗಳೂ ಈಗ ತಮ್ಮದೆ ಮಠಗಳ, ಸ್ವಾಮಿಗಳ ನೇತೃತ್ವದಲ್ಲಿ ತಮ್ಮನ್ನು ಗುರುತಿಸಿಕೊಳ್ಳುತ್ತಿವೆ. ಈ ಪ್ರಕ್ರಿಯೆಗೆ ನ್ಯಾಯ ಸಮರ್ಥನೆಯೆಂದರೆ "ಶೋಷಿತರಾದ ನಾವು ಸಂಘಟಿತರಾಗಬೇಡವೆ? ಸಂಘಟಿತರಾಗದೆ ಸಾಮಾಜಿಕ ನ್ಯಾಯ ಹೇಗೆ ಸಿಕ್ಕುವುದು ಸಾಧ್ಯ?" ಇತ್ಯಾದಿ ವಾದಗಳು. ನೂರಾರು ಜಾತಿಗಳಲ್ಲಿ ಹರಿದು ಹಂಚಿಹೋಗಿದ್ದ ಮತ್ತು ಭೌಗೋಳಿಕವಾಗಿ ಚದುರಿ ವಾಸವಾಗಿರುವ ದಲಿತ ಸಮುದಾಯಗಳನ್ನು ಚಾರಿತ್ರಿಕ ಶೋಷಣೆ, ಅವಮಾನ ಮತ್ತು exclusionಗಳ ಆಧಾರದ ಮೇಲೆ ಒಟ್ಟುಗೂಡಿಸಿ ಅವರನ್ನು ಒಂದು ರಾಜಕೀಯ ಹಕ್ಕುದಾರ ಸಮೂಹವನ್ನಾಗಿ ಮಾಡಿದ್ದು ಅಂಬೇಡ್ಕರ್ ಅವರ ಅಪ್ರತಿಮ ಸಾಧನೆ. ಆದರೆ ದಲಿತ ಸಂಘರ್ಷ ಸಮಿತಿಯ ಚಾರಿತ್ರಿಕ ಸಾಧನೆಯ ನಂತರ ಕರ್ನಾಟಕದಲ್ಲಿ ಈಗ ಮತ್ತೆ ದಲಿತ ಸಮುದಾಯಗಳು ತಮ್ಮ ಜಾತಿ ಅಸ್ಮಿತೆಗೆ ಮರಳುತ್ತಿವೆ. ಈ ಮರಳುವಿಕೆಗೆ ಬಹುದೊಡ್ಡ ಚಾಲನೆಯು ಮಠಗಳಿಂದ ದೊರೆತಿದೆ. ಅಂದರೆ ಅಂಬೇಡ್ಕರ್ ಅವರ ರಾಜಕೀಯವು ಹಿನ್ನೆಲೆಗೆ ಸರಿದು ಪ್ರತಿಗಾಮಿಯಾದ ಜಾತಿ ಅಸ್ಮಿತೆಯ ರಾಜಕಾರಣವು ಮುನ್ನೆಲೆಗೆ ಬರುತ್ತಿದೆ. ಆದ್ದರಿಂದಲೇ ಮೀಸಲಾತಿಯ ಆಚೆಗೆ ಸಾಮಾಜಿಕ ನ್ಯಾಯ ಹಾಗೂ ಸಮಾನತೆಗಾಗಿ ಹೋರಾಟದ ಪರಿಕಲ್ಪನೆಗಳೇ ಇಲ್ಲವಾಗುತ್ತಿವೆ. ಇದರ ಒಂದು ಪರಿಣಾಮವೆಂದರೆ ಇಂಥ ಸೈದ್ಧಾಂತಿಕ ನಿರ್ವಾತದಲ್ಲಿ ಹಿಂದುತ್ವ ರಾಜಕಾರಣವು ದಲಿತ ಸಮುದಾಯಗಳನ್ನು ತನ್ನ ಕಾಲಾಳುಗಳನ್ನಾಗಿ ಮಾಡಿಕೊಳ್ಳುವುದರಲ್ಲಿ ಯಶಸ್ವಿಯಾಗುತ್ತಿದೆ. ಭಾರತದಲ್ಲಿ ಸಾಮಾಜಿಕ ನ್ಯಾಯ ಹಾಗೂ ಹಿಂದುತ್ವ ರಾಜಕೀಯಗಳು ಪರಸ್ಪರ ವಿರುದ್ಧವೆನ್ನುವ ತಿಳುವಳಿಕೆ ಇಲ್ಲದಿದ್ದರೆ

(೧೪ನೇ ಪುಟಕ್ಕೆ

# ಕರ್ನಾಟಕ ರಾಷ್ಟ್ರ ಸಮಿತಿ ಅಧ್ಯಕ್ಷ ರವಿಕೃಷ್ಣಾ ರೆಡ್ಡಿಯವರೊಂದಿಗೆ ಒಂದು ಪ್ರಶ್ನೋತ್ತರ

**ಅಮೇರಿಕಾದಲ್ಲಿನ ಉದ್ಯೋಗ ತೊರೆದು ಬಂದು ಕರ್ನಾಟಕದ ರಾಜಕಾರಣದಲ್ಲಿ ಕಳೆದ ಹತ್ತು ವರ್ಷಗಳಿಂದ ವಿವಿಧ ರೂಪಗಳಲ್ಲಿ– ಮುಖ್ಯವಾಗಿ ಲಂಚಮುಕ್ತ ಕರ್ನಾಟಕ ಆಂದೋಲನ– ಸಕ್ರಿಯರಾಗಿರುವ ರವಿಕೃಷ್ಣಾರೆಡ್ಡಿಯವರು ಈಗ ಸಾಮಾಜಿಕ ಬದ್ಧತೆಯ ಹಲವು ಯುವಜನರನ್ನು ಒಳಗೊಂಡ 'ಕರ್ನಾಟಕ ರಾಷ್ಟ್ರ ಸಮಿತಿ' ಎಂಬ ಹೊಸ ರಾಜಕೀಯ ಪಕ್ಷವನ್ನು ಸ್ಥಾಪಿಸಿ ಒಂದು ಹೊಸ ಸಾಹಸವನ್ನು ಆರಂಭಿಸಿದ್ದಾರೆ. ಅವರ ಈ ಸಾಹಸದ ಹಿಂದು–ಮುಂದು ಕುರಿತಂತೆ 'ಹೊಸಮನುಷ್ಯ' ಇಲ್ಲಿ ಕೆಲ ಪ್ರಶ್ನೆಗಳನ್ನು ಕೇಳಿದೆ.–ಸಂ.**



**೧.ಅಮೇರಿಕಾದಲ್ಲಿ ಕುಟುಂಬ ಸಮೇತರಾಗಿ ಸುಖವಾಗಿದ್ದ ನೀವು ಕರ್ನಾಟಕದ ಸಾರ್ವಜನಿಕ ಜೀವನವನ್ನು ಪ್ರವೇಶಿಸಲು ಪ್ರೇರಣೆಯಾದದ್ದಾದರೂ ಏನು?**

ಚಿಕ್ಕಂದಿನಿಂದಲೂ ಕೇಳಿಕೊಂಡು ಮತ್ತು ಓದಿಕೊಂಡು ಬಂದ ಪೌರಾಣಿಕ ಕತೆಗಳು, ಚರಿತ್ರೆ ಮತ್ತು ಸಾಹಿತ್ಯವೇ ನನ್ನ ಸಾರ್ವಜನಿಕ ಜೀವನಕ್ಕೆ ಪ್ರೇರಣೆ. ಪ್ರೌಢಶಾಲೆಯಲ್ಲಿ ಓದುತ್ತಿರುವಾಗಲೇ ಒಂದಷ್ಟು ರಾಜಕೀಯ ಪ್ರಜ್ಞೆ ಬೆಳೆದಿತ್ತು ಮತ್ತು ನನ್ನ ಜೀವನದ ಉದ್ದೇಶ ಮತ್ತು ಸಾರ್ಥಕತೆ ರಾಜಕೀಯದಲ್ಲಿ ಅದರಲ್ಲಿಯೂ ಪ್ರಾಮಾಣಿಕ ರಾಜಕೀಯದಲ್ಲಿ ಇದೆ ಎಂದು ಅನ್ನಿಸಿತ್ತು. ಪ್ರಾಥಮಿಕ ಮತ್ತು ಪ್ರೌಢಶಾಲಾ ಹಂತದಲ್ಲಿ ಮನಸ್ಸಿನಲ್ಲಿ ರೂಪುಗೊಂಡ ಆದರ್ಶಗಳು ನನ್ನನ್ನು ಆ ಕಡೆಗೆ ಸೆಳೆದಿದ್ದವು.

ಆದರೆ ಕೌಟುಂಬಿಕ ಮತ್ತು ಸಾಮಾಜಿಕ ಒತ್ತಡಗಳ ಕಾರಣಕ್ಕೆ ನಾನು ಸಾರ್ವಜನಿಕ ಜೀವನ ಪ್ರವೇಶಿಸುವುದು ತಡವಾಯಿತು. ವೈಯಕ್ತಿಕ ಮತ್ತು ಕೌಟುಂಬಿಕ ಜೀವನವನ್ನು ಕಟ್ಟಿಕೊಳ್ಳಬೇಕಾದ ಅನಿವಾರ್ಯತೆಯಿತ್ತು. ಆದರೂ ಒಳಗಿನ ಒತ್ತಡವನ್ನು ತಡೆದುಕೊಳ್ಳಲಾರದೆ ಇಲ್ಲಿ ಸಾರ್ವಜನಿಕ ಜೀವನದಲ್ಲಿ ಸಕ್ರಿಯನಾಗಲು ಅಮೇರಿಕದಿಂದ ಕುಟುಂಬಸಮೇತ ವಾಪಾಸಾದೆ ಮತ್ತು ಇಲ್ಲಿ ಸರಳವಾದ ಸ್ವಾವಲಂಬಿ ಜೀವನ ನಡೆಸುವುದಕ್ಕೆ ಇನ್ನು ಸಮಸ್ಯೆಯಿಲ್ಲ ಎನ್ನಿಸಿದ ಮೇಲೆ, ಹಲವು ತರಹದ ಇತರೆ ಒತ್ತಡಗಳಿದ್ದರೂ, ಈಗ ಸಂಪೂರ್ಣ ಸಮಯವನ್ನು ರಾಜಕೀಯ ಮತ್ತು ಸಾಮಾಜಿಕ ಕೆಲಸಗಳಿಗೆ ನೀಡುತ್ತಿದ್ದೇನೆ.

**೨.ಹತ್ತು ವರ್ಷಗಳಿಗೂ ಹೆಚ್ಚು ಕಾಲದಿಂದ ರಾಜ್ಯದ ರಾಜಕಾರಣದಲ್ಲಿ ಸಕ್ರಿಯರಾಗಿದ್ದೀರಿ, ನಾಲ್ಕು ಬಾರಿ ಚುನಾವಣೆ ಎದುರಿಸಿದ್ದೀರಿ, ಸೋತಿದ್ದೀರಿ. ನೇರವಾಗಿ ಚುನಾವಣಾ ರಾಜಕಾರಣವನ್ನು ಪ್ರವೇಶಿಸಿದ್ದು ಸ್ವಲ್ಪ ಘಾತುಕತನವೇ ಹೌದು ಎಂದು ನಿಮಗನ್ನಿಸಿಲ್ಲವೆ? ನೀವು ಆಮ್‌ಆದ್ಮಿ ಪಕ್ಷದ ಅಭ್ಯರ್ಥಿಯಾಗಿದ್ದ ಸಂದರ್ಭದ ಹೊರತಾಗಿ ನಿಮ್ಮ ಯಾವ ಚರಿತ್ರೆಯ ಆಧಾರದ ಮೇಲೆ ಜನ ನಿಮಗೆ ಮತ ಹಾಕುವರು ಎಂಬ ನಿರೀಕ್ಷೆ ನಿಮಗಿತ್ತು?**

ಚುನಾವಣಾ ರಾಜಕಾರಣವನ್ನು ಎಲ್ಲಿಂಯೋ ಒಂದು ಕಡೆ ಆರಂಭಿಸಲೇಬೇಕಾಗುತ್ತದೆ. ಉತ್ತಮ ಜನಪ್ರತಿನಿಧಿಯಾಗಲು ಬೇಕಾದ ಪ್ರಾಥಮಿಕ ವಿದ್ಯಾರ್ಹತೆ, ಸಮಾಜದ ಕುರಿತು ಕಾಳಜಿ, ವಿಚಾರಗಳಲ್ಲಿ ಬದ್ಧತೆ ಇದ್ದು ನಾನೂ ಜನಪ್ರತಿನಿಧಿಯಾಗಲು ಯೋಗ್ಯ ಎಂದು ಭಾವಿಸುವ ಯಾರೇ ಆಗಲಿ ಚುನಾವಣೆಗೆ ನಿಲ್ಲಬೇಕು ಎಂದು ನಾನು ಅಪೇಕ್ಷಿಸುತ್ತೇನೆ. ೨೦೦೮ರಲ್ಲಿ ನಾನು ಮೊದಲ ಸಲ ಚುನಾವಣೆಗೆ ನಿಂತಾಗ ಅಮೇರಿಕದಲ್ಲಿ ಇದ್ದೆ ಮತ್ತು ಆ ಸಮಯದಲ್ಲಿ ರಾಜ್ಯದಲ್ಲಿ ನಡೆಯುತ್ತಿದ್ದ ಅನೈತಿಕ ರಾಜಕೀಯ ಪರಂಪರೆಗೆ ಸಾತ್ವಿಕ ಪ್ರತಿರೋಧ ದಾಖಲಿಸುವುದು ಮಾತ್ರ ಆ ಸ್ಪರ್ಧೆಯ ಉದ್ದೇಶವಾಗಿತ್ತು. ತದನಂತರದಲ್ಲಿ ನಿಂತ ಚುನಾವಣೆಗಳ ಕಾಲಕ್ಕೆ ಭ್ರಷ್ಟಾಚಾರ ವಿರೋಧಿ ಹೋರಾಟಗಾರನಾಗಿ, ಲೇಖಕನಾಗಿ, ರಾಜಕೀಯ ಮತ್ತು ಸಾಮಾಜಿಕ ಸಂಘಟನೆಗಳ ಕಾರ್ಯಕರ್ತ ಮತ್ತು ಸಂಘಟಕನಾಗಿ ಕೆಲಸ ಮಾಡಿದ್ದೆ. ಒಳ್ಳೆಯ ಸಂದರ್ಭದಲ್ಲಿ ಜನರು ಒಬ್ಬ ವ್ಯಕ್ತಿಯನ್ನು ತಮ್ಮ ಜನಪ್ರತಿನಿಧಿ ಎಂದು ಆರಿಸಿಕೊಳ್ಳಲು ಇಷ್ಟು ಸಾಕು. ಆದರೆ ಕಳೆದ ಎರಡುಮೂರು ದಶಕಗಳಲ್ಲಿ ನಮ್ಮ ಸಾಮಾಜಿಕ ಮತ್ತು ರಾಜಕೀಯ ಪರಿಸ್ಥಿತಿ ತೀರಾ ಕೆಟ್ಟಿದೆ. ಮತ್ತು ಕೇವಲ ಸಂಪತ್ತು ಹಾಗೂ ಕೌಟುಂಬಿಕ ಹಿನ್ನೆಲೆ ಮಾತ್ರವೇ ಇರುವ ವಂಶಪಾರಂಪರ್ಯ ರಾಜಕಾರಣಿಗಳಿಗೆ ಕೇಳದ ಇಂತಹ ಪ್ರಶ್ನೆಗಳನ್ನು ಸಾಮಾನ್ಯ ಹಿನ್ನೆಲೆಯ ಆದರೆ ಉತ್ತಮ ಜನಪ್ರತಿನಿಧಿಯಾಗುವ ಎಲ್ಲಾ ಪ್ರಾಥಮಿಕ ಅರ್ಹತೆಗಳಿರುವ ವ್ಯಕ್ತಿಗಳನ್ನು ಕೇಳುವುದು ಮತ್ತು ಅವರು ಏನಾದರೂ ದೊಡ್ಡ ಸಾಧನೆ ಮಾಡಿ ರಾಜಕೀಯ ಪ್ರವೇಶಿಸಬೇಕು ಎಂದು ಅಪೇಕ್ಷಿಸುವುದು ವಿಚಿತ್ರ ವಿದ್ಯಮಾನ. ಇದೇ ಕಾರಣಕ್ಕಾಗಿಯೇ ಇಂದು ಹಣ, ಕುಟುಂಬ, ಜಾತಿ ಮುಂತಾದ ಕ್ಷುಲ್ಲಕ ವಿಷಯಗಳು ಮತ ಪಡೆಯಲು ಅರ್ಹತೆಗಳಾಗಿಯೇ ಹೊರತು ವ್ಯಕ್ತಿಯ ಇತರೆ ಗುಣಾತ್ಮಕ ಅರ್ಹತೆಗಳಲ್ಲ.

**೩.ನೀವು ಕೆಲಕಾಲದ ಹಿಂದೆ ಆರಂಭಿಸಿದ 'ಲಂಚಮುಕ್ತ ಕರ್ನಾಟಕ ಆಂದೋಲನ'ಕ್ಕೆ ಸಾರ್ವಜನಿಕ ಪ್ರತಿಕ್ರಿಯೆ ಹೇಗಿತ್ತು? ಜನ ನಿಜವಾಗಿಯೂ ಭ್ರಷ್ಟಾಚಾರ ವಿರುದ್ಧದ ಹೋರಾಟಕ್ಕೆ ಗಂಭೀರ ಬೆಂಬಲ ನೀಡುವರು ಎನಿಸಿದೆಯೇ?**

"ಲಂಚಮುಕ್ತ ಕರ್ನಾಟಕ ನಿರ್ಮಾಣ ವೇದಿಕೆ"ಯ ಮೂಲಕ ಶುರುವಾದ "ಲಂಚಮುಕ್ತ ಕರ್ನಾಟಕ" ಅಭಿಯಾನವು ನಮ್ಮ ಭ್ರಷ್ಟ ಆಡಳಿತ ವ್ಯವಸ್ಥೆಯಲ್ಲಿ ಈಗಾಗಲೇ ಸಾಕಷ್ಟು ಸಕಾರಾತ್ಮಕ ಬದಲಾವಣೆಗಳನ್ನು ತಂದಿದೆ. ಸಾರ್ವಜನಿಕರು ಭೇಟಿ ಕೊಡುವ ಯಾವುದೇ ಸರ್ಕಾರಿ ಕಚೇರಿ ಯಾವ ರೀತಿ ಇರಬೇಕು ಮತ್ತು ಸರ್ಕಾರಿ ನೌಕರರು ಯಾವ ರೀತಿ ವರ್ತಿಸಬೇಕು ಎನ್ನುವ ವಿಷಯದಲ್ಲಿ ಕಳೆದ ಮೂರ್ನಾಲ್ಕು ವರ್ಷಗಳಲ್ಲಿ ಏನಾದರೂ ಸಕಾರಾತ್ಮಕ ಬದಲಾವಣೆಗಳು ಆಗಿದ್ದರೆ ಅದಕ್ಕೆ ನೇರ ಕಾರಣ ನಮ್ಮ ವೇದಿಕೆಯ ಕಾರ್ಯ. ಆಡಳಿತದಲ್ಲಿ ಪಾರದರ್ಶಕತೆ ತರುವ ವಿಚಾರವಾಗಿ ನಾವು ನೂರಾರು ಸರ್ಕಾರಿ ಕಚೇರಿಗಳಿಗೆ ಭೇಟಿ ಕೊಟ್ಟು ಸಾರ್ವಜನಿಕ ಪರಿಶೀಲನೆ (social audit) ಮಾಡಿದ್ದೇವೆ, ಸರ್ಕಾರದ ಉನ್ನತ ಸ್ಥಾನಗಳವರೆಗೂ ಪತ್ರ ವ್ಯವಹಾರ ಮಾಡಿ ಸರ್ಕಾರವು ಹತ್ತಾರು ಸುತ್ತೋಲೆಗಳನ್ನು ಹೊರಡಿಸುವ ಹಾಗೆ ಮಾಡಿದ್ದೇವೆ, ಲಂಚಬೇಡಿಕೆಯ ವಿಚಾರವಾಗಿ ಸಹಾಯವಾಣಿ ನಿರ್ವಹಿಸಿ ಹತ್ತಾರು ಲಂಚಕೋರ ಅಧಿಕಾರಿಗಳು ಭ್ರಷ್ಟಾಚಾರ ನಿಗ್ರಹ ದಳಕ್ಕೆ ಸಿಕ್ಕಿಬಿದ್ದು ಜೈಲುಪಾಲಾಗುವ ಹಾಗೆ ಮಾಡಿದ್ದೇವೆ, ನ್ಯಾಯಬೆಲೆ ಅಂಗಡಿಗಳಲ್ಲಿ ನೂರಾರು ಕೋಟಿ ರೂಪಾಯಿಗಳ ವಂಚನೆಗೆ ಕಡಿವಾಣ ಹಾಕಿದ್ದೇವೆ. ಇವೆಲ್ಲವೂ ನಮ್ಮ ಸಾಮಾಜಿಕ ಮಾಧ್ಯಮಗಳಲ್ಲಿ ವರದಿ ಆಗಿದೆ. ಆದರೆ ಸಾಂಪ್ರದಾಯಿಕ ಮಾಧ್ಯಮಗಳು ಇಂತಹುದನ್ನು ಬಹುತೇಕವಾಗಿ ವರದಿ ಮಾಡುವುದಿಲ್ಲ. ಮಾಧ್ಯಮಗಳಲ್ಲಿ ವೃತ್ತಿಪರತೆಯ ಕೊರತೆ ಮತ್ತು ಭ್ರಷ್ಟತೆಯೆ ಅದಕ್ಕೆ ಕಾರಣ. ಆದರೆ ಬಹುತೇಕ ಸರ್ಕಾರಿ ನೌಕರರಿಗೆ ನಮ್ಮ ಕೆಲಸಗಳ ಬಗ್ಗೆ ಅರಿವಿದೆ ಮತ್ತು ಭ್ರಷ್ಟರಿಗೆ ಒಂದಷ್ಟು ಭಯವೂ ಇದೆ.

ಇಂದು ಸಮಾಜದಲ್ಲಿ ಲಂಚಕೋರತನ ಮತ್ತು ಭ್ರಷ್ಟಾಚಾರವು ಒಪ್ಪಿತ ಮೌಲ್ಯಗಳಾಗಿವೆ. ಈ ಅಪಮೌಲ್ಯಗಳನ್ನು ಜನಸಾಮಾನ್ಯರು ವಿಧಿಯಿಲ್ಲದೆ ಸಹಿಸಿಕೊಂಡಿದ್ದಾರೆ. ಭ್ರಷ್ಟಾಚಾರ–ರಹಿತ ಆಡಳಿತ ಸಾಧ್ಯ ಎಂದು ಅವರಿಗೆ ಖಾತ್ರಿಯಾದಾಗ ಖಂಡಿತ ಜನರು ಬೆಂಬಲಿಸುತ್ತಾರೆ. ಅಂತಹ ವಿಶ್ವಾಸ ಮೂಡಿಸುವ ಕೆಲಸವನ್ನು, ನಮ್ಮ ತಂಡದ ಮೇಲೆ ಹಲವು ಸುಳ್ಳು ಮತ್ತು ಬೆದರಿಕೆ ಮೊಕದ್ದಮೆಗಳು ದಾಖಲಾಗುತ್ತಿದ್ದರೂ ನಾವು ಮಾಡುತ್ತಿದ್ದೇವೆ. ಈಗಾಗಲೇ ಅದರ ಪ್ರಾಥಮಿಕ ಯಶಸ್ಸನ್ನು ನಾವು ಕಾಣುತ್ತಿದ್ದೇವೆ.

**೪.ನೀವು ಇತ್ತೀಚೆಗೆ 'ಕರ್ನಾಟಕ ರಾಷ್ಟ್ರ ಸಮಿತಿ' ಎಂಬ ಹೆಸರಿನ ನಿಮ್ಮದೇ ಪಕ್ಷ ಸ್ಥಾಪಿಸಿ ಒಂದೆರಡು ಚುನಾವಣೆಗಳಲ್ಲಿ ಭಾಗವಹಿಸಿದ್ದೀರಿ ಕೂಡ. ಇರುವ ಮುಖ್ಯವಾಹಿನಿ ಪಕ್ಷಗಳ ಪ್ರಬಲ ರಾಜಕಾರಣದ ಎದುರಿಗೆ ಈ ನಿಮ್ಮ ಪಕ್ಷ ಉಳಿದು ಬೆಳೆಯುವ ಸಾಧ್ಯತೆಗಳು ಎಷ್ಟು? ನಿಮ್ಮ ಭರವಸೆಗಳಿಗೆ ಆಧಾರಗಳೇನು?**

ಎರಡು ವರ್ಷಗಳ ಹಿಂದೆ ಸ್ಥಾಪನೆಯಾದ KRS ಪಕ್ಷವು ಇಂದು ರಾಜ್ಯದಲ್ಲಿ ತನ್ನದೇ ಆದ ಛಾಪನ್ನು ಮೂಡಿಸುತ್ತಿದೆ. ರಾಜ್ಯದ ಯಾವುದೇ ರಾಜಕೀಯ ಪಕ್ಷ ಮಾಡದಂತಹ ಅಭಿಯಾನಗಳನ್ನು, ರಚನಾತ್ಮಕ ಕೆಲಸಗಳನ್ನು ಮತ್ತು ಚುನಾವಣಾ ಪ್ರಯೋಗಗಳನ್ನು KRS ಪಕ್ಷ ಮಾಡುತ್ತಿದೆ. ಸಮುದಾಯದ ಒಟ್ಟಾರೆ ವಿವೇಕ ಮತ್ತು ವ್ಯಕ್ತಿಗಳ ಒಳ್ಳೆಯತನವೆ ನಮ್ಮ ದೊಡ್ಡ ಭರವಸೆ. ಈಗ J.C.B.(ಜೆಡಿಎಸ್, ಕಾಂಗ್ರೆಸ್, ಬಿಜೆಪಿ) ಪಕ್ಷಗಳು ನಡೆಸುತ್ತಿರುವ ಅನೈತಿಕ, ಭ್ರಷ್ಟ, ಸ್ವಾರ್ಥಿ, ಜನವಿರೋಧಿ ರಾಜಕಾರಣವು ದೀರ್ಘ ಕಾಲದಲ್ಲಿ ಖಂಡಿತ sustainable ಅಲ್ಲ. ಅದೂ ಸಹ ನಮ್ಮ ಭರವಸೆಗಳಲ್ಲಿ ಒಂದು. ನಮ್ಮ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ನಾವು ಮುಕ್ತವಾಗಿ ಮಾಡುತ್ತಿರುವ ದೇಣಿಗೆ ಮನವಿಗೆ ಜನಸಾಮಾನ್ಯರು ಸ್ಪಂದಿಸುತ್ತಿರುವ ರೀತಿ ನಮ್ಮ ಸ್ಥೈರ್ಯವನ್ನು ದಿನೇದಿನೇ ಹೆಚ್ಚಿಸುತ್ತಿದೆ.

**೫.ನಿಮ್ಮ ಆದರ್ಶಗಳು ಏನು? ಯಾರು? ನಿಮ್ಮ ಹಣಕಾಸಿನ ಮೂಲಗಳು ಯಾವುವು?**

ಹಲವು ವಿಚಾರಗಳಿಗೆ ಹಲವರು ನನ್ನ ಆದರ್ಶಗಳು ಎಂದು ಹೇಳಬಹುದಾದರೂ ನನ್ನ ಒಟ್ಟಾರೆ ಜೀವನಕ್ಕೆ ಮಹಾತ್ಮ ಗಾಂಧೀಜಿಯೆ ಆದರ್ಶ. ದಾರ್ಶನಿಕ ಕವಿ ಕುವೆಂಪುರವರು ಹೇಳಿದಂತೆ "ಕಾಲಕ್ಕೆ ತಕ್ಕಂತೆ, ದೇಶಕ್ಕೆ ತಕ್ಕಂತೆ, ನಮ್ಮ ಹೃದಯವೆ ನಮಗೆ ಶ್ರೀ ಧರ್ಮ ಸೂತ್ರ" ಎಂಬ ತತ್ವದ ನೆಲೆಯಲ್ಲಿ ಮಹಾತ್ಮ ಗಾಂಧೀಜಿಯ ತತ್ವಗಳಲ್ಲಿ ನನಗೆ ಇಂದಿಗೆ ಸರಿ ಅನ್ನಿಸಿದ್ದಷ್ಟನ್ನು ಆಡುತ್ತಾ, ಮಾಡುತ್ತಾ, ಅಳವಡಿಸಿಕೊಳ್ಳುತ್ತಾ ಸಾಗಿದ್ದೇನೆ.

ಸಾಮಾಜಿಕ ವ್ಯವಸ್ಥೆಗೆ ಬಂದರೆ, ಪ್ರಜಾಪ್ರಭುತ್ವ ಆಡಳಿತ ವ್ಯವಸ್ಥೆ ನನ್ನ ಆದರ್ಶ. ಭಾರತದ ರಾಜಕೀಯ ಪಕ್ಷಗಳಲ್ಲಿ ಆಂತರಿಕ ಪ್ರಜಾಪ್ರಭುತ್ವ ಮತ್ತು ಅವಧಿಮಿತಿ ಇರುವ, ಚುನಾವಣಾ ಅಕ್ರಮಗಳಿಗೆ ಆಸ್ಪದ ಇಲ್ಲದ ವ್ಯವಸ್ಥೆ ಎಷ್ಟು ಬೇಗ ಸಾಧ್ಯವಾಗುತ್ತದೆಯೋ ಅಷ್ಟು ಬೇಗ ಭಾರತೀಯ ಸಮಾಜವು ನಮ್ಮ ಮುಂದಿನ ತಲೆಮಾರುಗಳು ಹೆಮ್ಮೆ ಪಡಬಹುದಾದ ರೀತಿಯಲ್ಲಿ ಬದಲಾಗುತ್ತದೆ ಎನ್ನುವ ವಿಶ್ವಾಸ ನನ್ನದು. ನಮ್ಮ ಇಂದಿನ ಬಹುತೇಕ ಸಂಕಟ ಮತ್ತು ಸಮಸ್ಯೆಗಳಿಗೆ ಭ್ರಷ್ಟ, ನೀತಿರಹಿತ, ಅಯೋಗ್ಯ ಜನಪ್ರತಿನಿಧಿಗಳ ಆಯ್ಕೆಗೆ ಅವಕಾಶ ಇರುವ ರಾಜಕೀಯ ವ್ಯವಸ್ಥೆಯೇ ಏಕೈಕ ಕಾರಣ. ಹಾಗಾಗಿ ಸಾರ್ವತ್ರಿಕ ಮೌಲ್ಯಗಳ ಆಧಾರದ ಮೇಲೆ ರೂಪುಗೊಂಡಿರುವ ಸಂವಿಧಾನದ ಆಡಿಪಾಯದ ಮೇಲೆ

(೧೪ನೇ ಪುಟಕ್ಕೆ

# ೭೫ನೇ ಸ್ವಾತಂತ್ರ್ಯೋತ್ಸವ: ಹೊರಗುತ್ತಿಗೆಯಾಗುತ್ತಿರುವ ಪ್ರಜಾಪ್ರಭುತ್ವ

ಒಂದು ಹಿನ್ನೋಟ

–ಡಿ.ಎಸ್. ನಾಗಭೂಷಣ



'ಸಂಸದೀಯ ಪ್ರಜಾಸತ್ತೆಯ ದಮನ' ಎಂಬ ಶೀರ್ಷಿಕೆಯ ನಿಮ್ಮ ಸಂಪಾದಕೀಯ ಮತ್ತು 'ನಿಜ ಸ್ವಾತಂತ್ರ್ಯಕ್ಕಾಗಿ ಹೊಸ ರಾಜಕಾರಣ' ಎಂಬ ಎ. ನಾರಾಯಣ ಅವರ ಬರಹ(ಪ್ರವಾ: ೧೪.೮.) ಇದೀಗ ತಾನೇ ದೇಶ ಸಂಭ್ರಮ್ರದಿಂದ ಆಚರಿಸಿದ ೭೫ನೇ ಸ್ವಾತಂತ್ರ್ಯೋತ್ಸವದ ಹಿನ್ನೆಲೆಯಲ್ಲಿ ಗಮನ ಸೆಳೆಯುವಂತಿವೆ. ಇವು ಕಳೆದ ೭೪ ವರ್ಷಗಳಲ್ಲಿ ನಮ್ಮ ಸ್ವಾತಂತ್ರ್ಯದ ಮೌಲಿಕತೆ ಕುಸಿದು ಬೀಳುತ್ತಿರುವ ಚಿತ್ರವನ್ನು ನಮ್ಮ ಮುಂದೆ ಇಟ್ಟಿವೆ. ಗಳಿಸಿದ ಸ್ವಾತಂತ್ರ್ಯವನ್ನು ಸಾಕಾರಗೊಳಿಸಿಕೊಳ್ಳಲು ತಾನು ಆಧಾರ ಮಾಡಿಕೊಂಡ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯೇ ಆ ಪ್ರಜಾಪ್ರಭುತ್ವದ ನಿಯಮಗಳ ಹೆಸರಿನಲ್ಲೇ–ಬಹುಮತದ ಪಕ್ಷ ಆಡಳಿತ ನಡೆಸುವ–ದಮನಗೊಳ್ಳುತ್ತಿರುವ ಚಿತ್ರವನ್ನು ಸಂಪಾದಕೀಯ ಬರಹ ನೀಡಿದರೆ, ಈ ಆಧಾರದ ಬೆನ್ನೆಲುಬಿನಂತಿರುವ ಪಕ್ಷ ವ್ಯವಸ್ಥೆ ತಿರುಳಲ್ಲೇ ಹೇಗೆ ಭ್ರಷ್ಟಗೊಂಡಿದೆ ಎಂಬುದನ್ನು ನಾರಾಯಣ ಅವರ ಬರಹ ವಿವರಿಸುತ್ತದೆ. ಈ ಬರಹ ಮುಂದುವರೆದು ಈ ರಾಜಕಾರಣಕ್ಕೆ ಪರ್ಯಾವಾದ ಹೊಸ ರಾಜಕಾರಣವನ್ನು ಪ್ರತಿಪಾದಿಸುತ್ತದೆ. ಪ್ರತಿಪಾದಿಸುತ್ತದೆ ಮಾತ್ರವಲ್ಲ; ಇದು ಸಾಧ್ಯವಿದೆ, ಸಾಧ್ಯವಾಗಬೇಕು ಎಂದೂ ಹೇಳುತ್ತದೆ.

ಸದುದ್ದೇಶಗಳೇ ಕಾರ್ಯಾಚರಣೆಗಳೂ ಆಗಿರುವಂತಿದ್ದರೆ ಎಷ್ಟು ಚೆನ್ನಿತ್ತು! ಏಕೆಂದರೆ ನಾರಾಯಣ ಅವರು ಬಣ್ಣಿಸುವ ರಾಜಕೀಯ ಅವನತಿ ಆರಂಭವಾಗಿ ದಶಕಗಳೇ ಆಗಿರುವಾಗ ಮತ್ತು ಅವರು ಹೇಳುವ ಹೊಸ ರಾಜಕಾರಣದ ಪ್ರಯತ್ನಗಳು ಈಗಾಗಲೇ ಹಲವು ನಡೆದಿವೆಯಾದರೂ ಅವೆಲ್ಲ ದೇಶದಲ್ಲಿ 'ಹೊಸ ರಾಜಕಾರಣ'ವನ್ನು ಸ್ಥಾಪಿಸಲು ವಿಫಲವಾಗಿವೆ ಏಕೆ? ಎಂಬ ಪ್ರಶ್ನೆ ಏಳುತ್ತದೆ. ಈ ದೃಷ್ಟಿಯಿಂದ ನಾರಾಯಣ ಅವರು ಮುಂದೆ ಹೇಳುವ ಎರಡು ಮಾತುಗಳು ಮುಖ್ಯವೆನಿಸುತ್ತವೆ. ಅವೆಂದರೆ, ಸ್ವಾತಂತ್ರ್ಯಾನಂತರದ ಕೆಲವು ದಶಕಗಳ ನಮ್ಮ ರಾಜಕೀಯ ವ್ಯವಸ್ಥೆ ಚೆನ್ನಾಗಿಯೇ ಇತ್ತು ಮತ್ತು ಇಂದು ಹೊಸ ರಾಜಕಾರಣಕ್ಕಾಗಿ ಹೊಸದೊಂದು ಸ್ವಾತಂತ್ರ್ಯ ಹೋರಾಟವನ್ನು ಆರಂಭಿಸಬೇಕಾಗಿದೆ ಎಂಬುವುವು. ಅಂದರೆ ಸ್ವಾತಂತ್ರ್ಯ ಹೋರಾಟದ ಮೌಲ್ಯಗಳಿಂದ ನಾವು ದೂರ ಸರಿದಿದ್ದೇ ನಮ್ಮ ರಾಜಕೀಯ ವ್ಯವಸ್ಥೆಯ ಅವನತಿಗೆ ಕಾರಣವಾಗಿದೆ ಎಂದು ಅವರು ಹೇಳುತ್ತಿದ್ದಾರೆ ಎನ್ನಬಹುದು. ಆದರೆ ಈ ಸ್ವಾತಂತ್ರ್ಯ ಹೋರಾಟದ ಮೌಲ್ಯಗಳೆಂದರೆ ಯಾವುವು ಎಂಬುದರ ಬಗ್ಗೆ ಸ್ಪಷ್ಟತೆ ಇಲ್ಲದಿದ್ದರೆ ಇಂತಹ ಮಾತುಗಳೂ ಅಸ್ಪಷ್ಟವೆನಿಸಿ ಮುಂದೆ ದಾರಿ ಕಾಣದಾಗುತ್ತದೆ. ಈಗ ಆ ಸ್ವಾತಂತ್ರ್ಯ ಹೋರಾಟದ ಮೌಲ್ಯಗಳನ್ನು ಒಪ್ಪದವರೇ ಜನಮತ ಪಡೆದು ಅಧಿಕಾರಕ್ಕೆ ಬಂದಿದ್ದಾರೆ ಎಂಬುದನ್ನೂ ಈ ಸಂದರ್ಭದಲ್ಲಿ ಮರೆಯಲಾಗದು. ಹೀಗಾಗಿ ಹೊಸ ಸ್ವಾತಂತ್ರ್ಯ ಹೋರಾಟದ ಎಂಟೆದೆಯ ಮಾತಾಡುವ ಮುನ್ನ ನಮಗೆ ೧೯೪೭ರಲ್ಲಿ ಸ್ವಾತಂತ್ರ್ಯ ತಂದುಕೊಟ್ಟ ಹೋರಾಟ ಈಗ ತನ್ನ ಮೌಲ್ಯಗಳನ್ನು ಕಳೆದುಕೊಂಡಿರಲು ಏನು ಕಾರಣ ಎಂದು ಯೋಚಿಸಬೇಕಿದೆ. ಇದಕ್ಕಾಗಿ ಆ ಹೋರಾಟದ ಕೇಂದ್ರ ತತ್ವವನ್ನು ದಿಟ್ಟಿಸಿ ನೋಡಿ ಅದನ್ನು ಪುನರ್‌ಸಂಘಟಿಸಿಕೊಳ್ಳಬೇಕಿದೆ.

ನಮ್ಮ ಸ್ವಾತಂತ್ರ್ಯ ಹೋರಾಟವನ್ನು ನಿಜವಾದ ಜನಹೋರಾಟವನ್ನಾಗಿ ಮಾರ್ಪಡಿಸಿ ಅದನ್ನು ಹಲವು ಏಳುಬೀಳುಗಳೊಂದಿಗೆ ಮುನ್ನಡೆಸಿದವರು ಮಹಾತ್ಮ ಗಾಂಧಿ ಎಂದು ನಿಸ್ಸಂಶಯವಾಗಿ ಹೇಳಬಹುದು. ಕೊನೆಕೊನೆಯಲ್ಲಿ ಈ ಹೋರಾಟ ಹೆಚ್ಚು ಸಂಕೀರ್ಣವಾಗುತ್ತಾ ಅವರ ಕೈ ತಪ್ಪಿ ಹೋದಂತಾಗಿ ಅದಕ್ಕೆ ರಾಷ್ಟ್ರ ವಿಭಜನೆಯ ಕಳಂಕ ಅಂಟಿಕೊಂಡಿತಾದರೂ, ನಾವು ಯಾವ ಕಾರಣಗಳಿಗಾಗಿ ಸ್ವಾತಂತ್ರ್ಯ ಕಳೆದುಕೊಂಡಿದ್ದೆವು ಎಂಬುದರ ಬಗ್ಗೆ ಅವರು ನಡೆಸಿದ್ದ ಬಹು ವಿವೇಕಪೂರ್ಣ ಚಿಂತನೆಯನ್ನೇ ಆಧರಿಸಿ ಈ ಹೋರಾಟದ ಗುರಿ ಮತ್ತು ಮಾರ್ಗ–ಮುಖ್ಯವಾಗಿ ಸತ್ಯಾಗ್ರಹ–ರೂಪುಗೊಂಡಿತ್ತು ಎನ್ನಬಹುದು. ಇದು ಅವರ ಆದಿ ಗ್ರಂಥ 'ಹಿಂದ್ ಸ್ವರಾಜ್'ನಲ್ಲಿ ಬಹು ವಿವರವಾಗಿ ನಿರೂಪಿತಗೊಂಡಿದೆ. ಇದರ ಪ್ರಕಾರ ಭಾರತ ಎನ್ನುವುದು ಒಂದು 'ಜನಸಮುದಾಯ'ವಾಗಿ ತನ್ನ ಅಸ್ತಿತ್ವದ ಲಂಗರುಗಳನ್ನು ಕಳೆದುಕೊಂಡು ಬ್ರಿಟಿಷರ ಅಡಿಯಲ್ಲಿ ಒಂದು (ವಸಾಹತು) 'ದೇಶ'ವಾಗಿ ಮರುಸಂಘಟಿತಗೊಂಡದ್ದು ನಾವು ಪಶ್ವಿಮದ ಜೀವನದೃಷ್ಟಿ ಮತ್ತು ಜೀವನ ಕ್ರಮಗಳಿಗೆ ಮಾರುಹೋದದ್ದರಿಂದಾಗಿ. ಇದರ ಅಂತಿಮ ಪರಿಣಾಮವೇ ೧೮–೧೯ನೇ ಶತಮಾನದ ಐರೋಪ್ಯ 'ಜ್ಞಾನಯುಗ'(ರೆನೈಸ್ಸಾನ್ಸ್) ತನ್ನ ತಾರ್ಕಿಕ ಅಂತ್ಯ ಕಂಡುಕೊಂಡ ೨ನೆಯ ವಿಶ್ವಯುದ್ಧದ ಪಾಳುಗಳ ಮಧ್ಯೆ ಹುಟ್ಟಿಕೊಂಡ 'ರಾಷ್ಟ್ರ ಪ್ರಭುತ್ವ' (ನೇಷನ್ ಸ್ಟೇಟ್) ಮತ್ತು ಅದನ್ನು ನಿರ್ವಹಿಸಲು ಪಶ್ಚಿಮವು ರೂಪಿಸಿಕೊಂಡಿದ್ದ ಪ್ರಾತಿನಿಧಿಕ ಸಂಸದೀಯ ಪ್ರಜಾಪ್ರಭುತ್ವಗಳಿಗೆ ನಮ್ಮ ಮಾನ್ಯತೆ. ಆದರೆ ಗಾಂಧಿ ಬಯಸಿದ್ದುದು ಭಾರತವನ್ನು ಒಂದು 'ರಾಷ್ಟ ಪ್ರಭುತ್ವ'ವಾಗಿ ಅಲ್ಲ; ಒಂದು ಜನಸಮುದಾಯವಾಗಿ ಅದರ ಆತ್ಮವಿದ್ದ–ಮೂಲ ಅಸ್ಮಿತೆ ಮತ್ತು ಶಕ್ತಿಗಳಿದ್ದ– ಗ್ರಾಮಗಳ ಒಕ್ಕೂಟ ವ್ಯವಸ್ಥೆಯಾಗಿ; ನೇರ ಪ್ರಜಾಪ್ರಭುತ್ವ ಮಾದರಿಯ 'ಗ್ರಾಮ ಸ್–ವರಾಜ್ಯ'ವಾಗಿ. ಇಲ್ಲಿಯೇ ಒಂದು ಮಾತು ಸ್ಪಷ್ಟಪಡಿಸಿಬಿಡಬೇಕು. ಗಾಂಧಿ 'ಗ್ರಾಮ ಸ್ವರಾಜ್ಯ'ದ ಮಾತಾಡಿದಾಗ ಅವರ ಮನಸ್ಸಿನಲ್ಲಿದ್ದುದು ಅಂದಿನ ಗ್ರಾಮಗಳ ಚಿತ್ರವಲ್ಲ; ಬದಲಿಗೆ ಹೊಸದಾಗಿ ಪುನಾರಚಿಸಬೇಕಿದ್ದ ಮಾದರಿ ಗ್ರಾಮ.

ಆದರೆ ಸ್ವಾತಂತ್ರ್ಯ ಘೋಷಣೆಯ ಹೊತ್ತಿಗೆ ತಮ್ಮ ಶಿಷ್ಯ ಸಮುದಾಯದಿಂದಲೇ ಕೈ ಕಟ್ಟಿಸಿಕೊಳ್ಳುವ ಅಸಹಾಯಕತೆಗೆ ಈಡಾಗಿದ್ದ ಗಾಂಧಿ ಅನಿವಾರ್ಯವಾಗಿ ಸಂಸದೀಯ ಪ್ರಜಾಪ್ರಭುತ್ವವನ್ನು ಒಪ್ಪಿಕೊಂಡರಾದರೂ ಈ ಕಾರಣಗಳೊಂದಿಗೆ: ನಮ್ಮ ಜನ ಗ್ರಾಮ ಸ್ವರಾಜ್ಯಕ್ಕೆ ಅರ್ಹರಾಗಲು ಇನ್ನೂ ಹಲವು ತ್ಯಾಗಗಳಿಗೆ ಸಿದ್ಧರಾಗಬೇಕಿದೆ. (ಅವರು ಬದುಕಿದ್ದಾಗ ಹೊರಬಂದ 'ಹಿಂದ್ ಸ್ವರಾಜ್'ನ ಕೊನೆಯ ಆವೃತ್ತಿಯಾದ ಮೂರನೆಯ ಆವೃತ್ತಿಗೆ ಬರೆದ ಮುನ್ನುಡಿಯಲ್ಲಿ) ಅಂದರೆ ಗಾಂಧಿಯವರ ನಿಜವಾದ ಅರ್ಥದ ಸ್ವತಂತ್ರ ಭಾರತ ೧೯೪೭ರ ಆಗಸ್ಟ್ ೧೫ರ ಮಧ್ಯರಾತ್ರಿ ಉದಿಸಿ ೧೯೫೦ರ ಜನವರಿ ೨೬ರಂದು ರೂಪು ತಳೆದ ಪ್ರಾತಿನಿಧಿಕ ಸಂಸದೀಯ ಪ್ರಜಾಪ್ರಭುತ್ವದ ರಾಷ್ಟ್ರ ಪ್ರಭುತ್ವವಾಗಿರಲಿಲ್ಲ. ಏಕೆಂದರೆ ಅದು ಪ್ರಜೆ ಪ್ರಜಾಪ್ರಭುತ್ವದ ತಿರುಳಿನಂತೆ ತನ್ನನ್ನು ತಾನು ಆಳಿಕೊಳ್ಳುವ ಅಧಿಕಾರವನ್ನು ತನ್ನ ಪ್ರತಿನಿಧಿಗೆ ವಹಿಸಿ ತಾನು ಮತದಾನ ಮಾಡುವುದರ ಹೊರತಾಗಿ ಪ್ರಜಾಧಿಕಾರ ಮತ್ತು ಕರ್ತವ್ಯಗಳಿಂದ ವಿಮುಖನನ್ನಾಗಿ ಮಾಡಿತ್ತು. ಇದೇ ಇಂದಿನ ಪ್ರಜಾಪ್ರಭುತ್ವದ ಅವನತಿಗೆ ಮೂಲ ಕಾರಣವೆನ್ನಬಹುದು. ಇದೊಂದು ರೀತಿಯಲ್ಲಿ ಪ್ರಜಾಪ್ರಭುತ್ವದ ಜವಾಬ್ದಾರಿಗಳ ಹೊರಗುತ್ತಿಗೆ ಎನ್ನಬಹುದು! ಹಾಗಾದರೆ ಸ್ವಾತಂತ್ರ್ಯ ಹೋರಾಟದ ಮೂಲಕ ಗಾಂಧಿ ಸಾಧಿಸಬೇಕೆಂದಿದ್ದ 'ಗ್ರಾಮ ಸ್ವರಾಜ್ಯ'ದಿಂದ ನಮ್ಮನ್ನು ವಿಮುಖಗೊಳಿಸಿ ಈ ಪ್ರಜಾಪ್ರಭುತ್ವದ ಹೊರಗುತ್ತಿಗೆ ಪದ್ಧತಿಗೆ ದೂಡಿದ, ಅಂದರೆ ನಾವು ಗಾಂಧಿ ಪ್ರಕಾರ ಮಾಡಲು ಆಗ (ಮತ್ತು ಈಗಲೂ) ಇನ್ನೂ ಸಿದ್ಧರಾಗಿರದ ತ್ಯಾಗಗಳು ಯಾವುವು? ಅವೆಂದರೆ ಅವರ ಅನುಯಾಯಿಗಳು ಮತ್ತು ಅವರ ವಿರೋಧಿಗಳು ಇಬ್ಬರೂ ಮರುಳಾಗಿದ್ದ 'ರಾಷ್ಟ್ರಪ್ರಭುತ್ವ'ವು ತನ್ನ ಹುಟ್ಟಿನಿಂದಲೇ ಒತ್ತಾಯಿಸುವ ಬಲಿಷ್ಠತೆ ಬೇಡುವ ನಿರಂತರ 'ಅಭಿವೃದ್ಧಿ'ಯ; ಕೊನೆಯಿಲ್ಲದ ತಹತಹಗಳು. ಯೋಚಿಸಿ ನೋಡಿ, ಇವೇ ಅಲ್ಲವೇ ನಮ್ಮ ಪ್ರತಿನಿಧಿಗಳನ್ನೂ, ಆ ಮೂಲಕ ನಮ್ಮ ಈ ಪ್ರಾತಿನಿಧಿಕ ಪ್ರಜಾಪ್ರಭುತ್ವವನ್ನೂ ರಿಪೇರಿ ಮಾಡಲು ಸಾಧ್ಯವಾಗದಷ್ಟು ಭ್ರಷ್ಟತೆಗೆ, ಅವನತಿಗೆ ತಳ್ಳಿರುವುದು? ಇಂದು ಕೋವಿಡ್‌ಗೆ ಕಾರಣವಾಗಿರುವ 'ಅಭಿವೃದ್ಧಿ' ಪರಿಯೂ ಇದೇ ಅಲ್ಲವೆ? ಎಲ್ಲಕ್ಕಿಂತ ಮುಖ್ಯವಾಗಿ ಮೊನ್ನೆ ತಾನೇ ಭೂಮಿಯ ಮೇಲಿನ ಬದುಕಿನ ಅಂತ್ಯದ ಆರಂಭದ ಎಚ್ಚರಿಕೆ ನೀಡಿರುವ ವಿಶ್ವಸಂಸ್ಥೆಯ ಪರಿಸರ ವರದಿಯೂ ಬೊಟ್ಟು ಮಾಡುವುದೂ ಮನುಷ್ಯನ ಈ ಸ್ವಯಂ ವಿನಾಶಕ ತಹತಹಗಳನ್ನೇ ಅಲ್ಲವೇ?

ಹಾಗಾಗಿ ನಾವು ನಮ್ಮ ಸಂವಿಧಾನ ಸಭೆಯ ಮೂಲಕ ಪರಿಕಲ್ಪಿಸಿಕೊಂಡ ಈ ರಾಷ್ಟ್ರ ವ್ಯವಸ್ಥೆ ಮತ್ತು ಅದರ ಸಂಚಾಲನಾ ತಂತ್ರದಲ್ಲೇ ಏನೋ ದೋಷವಿದೆ ಎನ್ನಿಸದಿರದು. ಈ ಕಾರಣದಿಂದಲೇ ಇಲ್ಲಿ ಯಾರು ಏನೇ ಆದರ್ಶ ಹೇಳಿಕೊಂಡು ಅಧಿಕಾರಕ್ಕೆ ಬಂದರೂ ಸ್ವಾತಂತ್ರ್ಯದ ರುಚಿ ಬದಲಾಗುತ್ತಿಲ್ಲ. ನಮ್ಮ ಮನಸ್ಸು ಮತ್ತು ದೇಹಗಳ ಸುತ್ತ ಬಂಧನಗಳ ಹಗ್ಗಗಳು ಬಿಗಿಯಾಗುತ್ತಲೇ ಇವೆ, ನಾವು ಸೃಷ್ಟಿಯ ನಿರಾಳ ಮಕ್ಕಳಾಗುವ ಬದಲು ಸದಾ ಹೊಸ ಹೊಸ ಆಸೆಗಳು ಹುಟ್ಟಿಸುವ ಹಿಸ ಹಿಸಕಾನೂನುಗಳ ಅಡಿಗೆ ಸಿಕ್ಕಿಹಾಕಿಕೊಳ್ಳುತ್ತಾ ಹೋಗುವ ಸರ್ಕಾರದ ಮಕ್ಕಳಾಗುತ್ತಿದ್ದೇವೆ. ಆದುದರಿಂದ ಹೊಸ ರಾಜಕಾರಣಕ್ಕಾಗಿ ಹೊಸ ಸ್ವಾತಂತ್ರ್ಯ ಹೋರಾಟವನ್ನು ಬಯಸುವವರು ನಿಜವಾಗಿ ಹೊಸದಾಗಿ ಯೋಚಿಸಬೇಕಿದೆ: ಬೇಕಿರುವುದು ಹೊರ ಹೋರಾಟವೋ? ಅಥವಾ ಒಳಗಿನ ತಹತಹಗಳನ್ನು ಪಳಗಿಸುವ ನೈತಿಕ ತರಬೇತಿಯೋ?

**(ಪ್ರಜಾವಾಣಿ' ಪತ್ರಿಕೆಯು ಪ್ರಕಟಿಸಲಾಗುತ್ತಿಲ್ಲ ಎಂದು ತಿಳಿಸಿದ ಲೇಖನ)**

ಹೊಸ ಕಾದಂಬರಿ

# ಒದೋ ರಂಗ

**ತುಂಬಾಡಿ ರಾಮಯ್ಯ**

ಅವರ ಅಪ್ರಕಟಿತ ಕಾದಂಬರಿಯ
ಆಯ್ದ ಮೂರು ಅಧ್ಯಾಯಗಳು

**ಬೇಟೆಗೆ ಗುರಿಯಾದ ಪ್ರಾಣಿ, ಪಕ್ಷಿ ವೇಷ ದರಿಸುವುದು ಅವುಗಳ ಬಾಷೆಯಲ್ಲಿ ಮಾತಾಡುವ ವಿದ್ಯೆ ಸಂಕಯ್ಯನ ವಂಶಕ್ಕೆ ಸಿದ್ಧಿಸಿದೆ. ಇಂದು ಸಂಕಯ್ಯನ ಬೇಟೆ ಕಪ್ಪಲನರಿ ಎಂದು ಅವನ ಕಂಕುಳಲ್ಲಿರುವ ತೊಗಲೇ ಹೇಳುತ್ತಿದೆ. ಸಂಕಯ್ಯ ತೊಗಲ ಹೊದ್ದು ನರಿಯಂತಾಗಿ; ನರಿ ಮೀರಿಸಿದ ನಟನೆ ಮಾಡಿದ. ಹಸು ಸಂಕಯ್ಯನ ಸೂಚನೆ ಪಾಲಿಸಿ ಜೀವಂತ ಶವವಾಯಿತು. ವೇಷದಾರಿ ಸಂಕಯ್ಯ ದನಿ ಬದಲಿಸಿ, ಬಳಗ ಮಾಂಸದೂಟಕ್ಕೆ ಕೂಗಿ ಕರೆದ, ರಾತ್ರಿ ಸಂಚಾರಕ್ಕೆ ಸಕಲ ಸಿದ್ದತೆ ಮಾಡಿಕೊಳ್ಳುತ್ತಿದ್ದ ನರಿ ಬಳಗಕ್ಕೆ ಸಂಕಯ್ಯನ ಕರೆ ಕೇಳಿ ಕಿವಿ ನಿಮಿರಿತು. ಚುರುಕು ಬುದ್ಧಿಯ ಬಳಗ ಯಾರ ದನಿಯೆಂದು ಕಿವಿಯಾನಿಸಿ ಮತ್ತೊಮ್ಮೆ ಆಲಿಸಿತು. ಅನುಮಾನಕ್ಕೆ ಆಸ್ಪದವಿಲ್ಲ ಬಂಧುವೊಬ್ಬನ ಬೋಜನದ ಕರೆ. ನರಿ ಬಳಗ ಕರೆ ಬಂದ ದಿಕ್ಕಿಡಿದು ಓಡತೊಡಗಿತು.**

## ಹೆಣ್ಣು ಮುನಿ


ಚಿತ್ರ: ಗುಜ್ಜಾರ್

ಬೇಸಿಗೆ, ಮದ್ಯಾಹ್ನ ಹೊತ್ತು ನೆತ್ತಿಗೇರುತ್ತ ಬೆಂಕಿಯುಂಡೆಯಾಗಿದೆ. ಸುಡು ಬಿಸಿಲಿಗೆ ಕಾಯಕ ಜೀವಿ ಮುಕುಡಪ್ಪ ಮೈಯೊಡ್ಡಿ ಹಟ್ಟಿ ಮುಂದೆ ಕುಂತು; ತಂಗಡಿ ಸೆಕ್ಕೆ ಎಬ್ಬುತ್ತಿರುವನು. ಹೆಂಡತಿ ಹರಿದ ಸೀರೆ ತುಂಡು ತಲೆ ಮೇಲೆ ಕುಂತು ನೆತ್ತಿಗೆ ನೆರಳಾಗಿದೆ. ಎಳೆ ಜೋಳದ ಪೈರು ತಿಂದು ಸಕ್ಕತ್ತಿ ಸತ್ತ ಗೌಡರ ದೊಡ್ಡೆಮ್ಮ ತೊಗಲು 'ಹಟ್ಟಿಮಾರಿ' ಗುಡಿ ಮುಂದೆ ಚಾಪೆಯಾಗಿ ಉಪ್ಪು ಚಪ್ಪರಿಸುತ್ತಿದೆ. ಆರ್ಬಳಿಸಿದ ಎಮ್ಮೆ ಬಾಡು ತೋರಣವಾಗಿ ಹಟ್ಟಿ ಎಲ್ಲರ ಮನೆ ಗೋಡೆ ಅಲಂಕರಿಸಿದೆ. ನೊಣದ ದಂಡು ಹಟ್ಟಿಗೆ ಬರುವರ 'ಜೋಯೆಂದು' ಸ್ವಾಗತಿಸುತ್ತಿದೆ. ತೊಗಲು, ಬಾಡಿನ ಚುಂಗು ವಾಸನೆಗೆ ಹಟ್ಟಿ ಗಮಗುಟ್ಟುತ್ತಿದೆ. ಮುಕುಡಪ್ಪನ ಮನೆ ಹಿಂದೆ ಕರೆಬಾನಿಯಿದೆ; ಸುಣ್ಣಕಲ್ಲು, ತಂಗ್ಡಿ ಸೆಕ್ಕೆ, ಕರೆಬಾನಿಯಲ್ಲಿ ತೊಗಲಿಗೆ ಕೂಡಿಸಿ ಹದ ಮಾಡುವುದು ಮಣೆಗಾರರ ಮೂಲ ಕಸುಬು. ಹದ ಮಾಡಿದ ತೊಗಲು ಕುಳುವಾಡಿಗಳ ಕಾಲಿಗೆ ಮೆಟ್ಟಾಗುತ್ತದೆ. ತೊಗಲು ಹದ ಮಾಡಲು ತಂಗಡಿ ಸೆಕ್ಕೆ ಎಬ್ಬುತ್ತಿರುವ; ಮುಕುಡಪ್ಪನ ನೆತ್ತಿ ಮೇಲಿರುವ ಗುಡ್ಡಟ್ಟೆ ಬೇದಿಸಿದ ಬಿಸಿಲು ತರಗುಟ್ಟಿಸಿದೆ. ಬಿಸಿಲಿಗೆ ಬೆದರಿ ನೆತ್ತಿಯಲ್ಲಿ ಒರತೆಯಾದ ಜೀವಜಲ; ಶಿವನ ತಲೆ ಮೇಲಿಂದ ಧರೆಗಿಳಿವ ಗಂಗೆಯಂತೆ; ನಿಧಾನವಾಗಿ ಎಡ ಬಲ ಕೆನ್ನೆ ದಾಟಿ; ಕೊರಳಲ್ಲಿ ಸರ್ಪದಂತಾಡಿ ಎದೆಯಲ್ಲಿ ಸಣ್ಣ ಗೋಕಟ್ಟೆಯಾಗಿ; ಗೋಕಟ್ಟೆ ತುಂಬಿ ಅಲ್ಲಿಂದ ಹೊರಟು ಕಿರು ನದಿಗಳಾಗಿ ಬೇರ್ಪಟ್ಟು; ಹಸಿದೊಟ್ಟೆ ಸುಕ್ಕುಗಳಲ್ಲಿ ಹರಿದು; ಸೊಂಟದಲ್ಲಿ ಸುತ್ತಾಡಿ ಹೊಕ್ಕುಳಿಂದ ಹೊರಟು; ಪುಟಗೋಸಿಯಲ್ಲಿ ಮರೆಯಾಗಿರುವ ಕುರುಚಲು ಕಾಡಿಗೆ ತನಿ(ತಂಪು)ಯಾಗಿದೆ. ಬೆವರ ವಾಸನೆಗೆ ಗಮಗುಟ್ಟುವ ಮುಕುಡಪ್ಪನ ಅವತಾರ ಘೋರ ತಪಸ್ಸಿಗೆ ಕುಂತ ಶಿವನ ಸಾಕ್ಷಾತ್ಕಾರದಂತಿದೆ. ಪುಟಗೋಸಿ ಬಿಚ್ಚಿದರೆ ಸುಡು ಬಿಸಿಲಿಗೆ ಬೆನ್ನೊಡ್ಡಿ ನಿಂತ ಗೊಮ್ಮಟೇಶ್ವರ; ಸಾಕಾಗಿ ಕಾಲಿಗೆ ಬಿಡುವು ನೀಡಲು ಕುಂತ ಭಂಗಿಯಂತಿದೆ. ತಂಗಡಿ ಕಡ್ಡಿಗೆ ಅವನಾಕಿದ ಕೊಡತಿಯೇಟಿಗೆ ಅಡಿಗಲ್ಲು ಢಮಗುಟ್ಟುತ್ತಿದೆ.

ಹಸಿರು ಸೀರೆ, ಮೈ ತುಂಬ ಬಂಗಾರ, ಕಾಲಿಗೆ ಬೆಳ್ಳಿಗೆಜ್ಜೆ ಕಟ್ಟಿರುವ ಹೆಣ್ಣೊಂದು; ಮುಕುಡಪ್ಪನ ಮನೆ ಮುಖ ಮಾಡಿ ಹಟ್ಟಿ ಪ್ರವೇಶಿಸಿದೆ. ಹೆಣ್ಣು ನಡೆವ ಹೆಜ್ಜೆ ಲಯಕ್ಕೆ ಗೆಜ್ಜೆ ಗಲ್ ಗಲ್ ಎನ್ನುತ್ತಿದೆ. ಚುಂಗು ವಾಸನೆ, ನೊಣದ ದಂಡು ಕೂಡ ಹೆಣ್ಣಿನ ದಾರಿಗೆ ಅಡ್ಡ ಬರದೆ; ಅಡಿಗಲ್ಲ ಅಬ್ಬರ ಗೆಜ್ಜೆ ಶಬ್ದ ಮರೆಮಾಚಿ; ಮುಕುಡಪ್ಪನ ಬಲಕ್ಕೆ ಬಿಟ್ಟು ತೊಗಲ ಎಡಕ್ಕೆ ಇಟ್ಟು ಹೆಣ್ಣು ಬಲಗಾಲಿಟ್ಟು ಎದುರುಗೋಡೆಗೆ ಕುಂತಿದೆ. ನೆದರಿಲ್ಲದ ಮುಕುಡಪ್ಪ ತನ್ನ ಪಾಡಿಗೆ ಕಾಯಕ ಮುಂದುವರೆಸಿರುವನು. ಕರೆದರೂ ಬರದ, ಬಂದರೂ ನಿಲ್ಲದ, ಸಾಕ್ಷಾತ್ ಮಾಲಕ್ಷ್ಮಿ ಮುಕುಡಪ್ಪನ ಮನೆ ಮಗಳಾಗಿರಲು ಬಂದಂತಿದೆ. ಮಾಲಕ್ಷ್ಮಿ ಮನೆ ಹೊಕ್ಕಾಗ ಬಿದ್ದ ನೆರಳು ಮಾಮೂಲಿಯೆಂದು ಮುಕುಡಪ್ಪ ಭಾವಿಸಿದ. ಮದ್ಯಾಹ್ನದ ಮುನಿ ಸಂಚರಣೆ ಇದೆಂದು ತಾತ್ಸಾರಗೊಂಡ; ಕಾದರೂ ನಿರ್ಲಕ್ಷ್ಯ ತೋರಿದ ಮುಕುಡಪ್ಪನ ಮಾಲಕ್ಷ್ಮಿ ತಾನೇ ಕರೆದಳು. ಬಿಸಿಲಿಗೆ ಕೈ ಅಡ್ಡಿಡಿದು ಬಾಗಿಲ ಕಡೆ ನೋಡಿದ ಮುಕುಡಪ್ಪ ಅಂದುಕೊಂಡದ್ದು ನಿಜವೆಂದು ಮತ್ತೆ ನಿರ್ಲಕ್ಷ್ಯ ತಾಳಿದ. ಮತ್ತೆ ಕೂಗಿದ ಮಾಲಕ್ಷ್ಮಿ ಕುಡಿಯಲು ನೀರು ಕೇಳಿದಳು. ಇದು ಜಗಮಂಡಿಯೆಂದು ಮುಕುಡಪ್ಪ ಗಡಿಗೆಯಲ್ಲಿದ್ದ ತಣ್ಣನೆ ನೀರು ಕೊಟ್ಟ. ನೀರು ಕುಡಿದ ಮಾಲಕ್ಷ್ಮಿ ಸುದಾರಿಸಿ ತನ್ನ ವೃತಾಂತ ತಿಳಿಸಲಾಗಿ; "ಈ ಉರ್ರ್ಯ ಬಿಸ್ಲಾಗ್ ಯಾರ್ ಏನ್ಮಾಡ್ತರೆ, ಎಲ್ ಓಡಾಡ್ತರೆ ಎಲ್ಲ ನಂಗೊತ್ತು; ನೀನ್ ಮುನಿ ಅನ್ನೋದು ನಂಗೊತ್ತು; ಈ ಎಬ್ಡೆಂಚೆಲ್ಲ ಬ್ಯಾಡ್ತಾಯಿ ನನ್ ಪಾಡಿಗ್ ನನ್ಬಿಡು ನೀರ್ಕುಡ್ದಲ್ಲ ನಡಿ" ಎಂದ. "ಅಲ್ಲಯ್ಯ ಲೋಕ ಲೋಕವೇ ನನಗಾಗಿ ಕಾದು ಕುಂತಿರುತ್ತದೆ; ಯಾರ ಕರೆಗೂ ಕಿಮ್ಮತ್ತು ಕೊಡದ ನಾನು; ಕರೆಯದೆ ನಿನ್ನ ಮನೆಗೆ ಬಂದರೂ ನನಗೆ ತಾವಿಲ್ಲವೆ? ಎಂದಳು. "ಅಯ್ಯೋ.. ತಾಯಿ ನೀನ್ ಮಾಲಕ್ಷ್ಮಿ ಆದ್ರೆ, ಸಂತಾನ್ಲಕ್ಷ್ಮಿ ಆದ್ರೆ! ನಂಗ್ ಬಂದ್ ಬಾಗ್ಯೇವೇನು? ಈಗಿರೊರ್ಗೆ ಹಿಟ್ಟೊಂಚ್ಕಾಗ್ತಿಲ್ಲ; ನಿನ್ ಕೈ ಮುಗತೀನ್ ಹೋಗ್ ನನ್ನಮ್ಮ" ಎಂದ. ಯಾವ ಮಾತಿಗೂ ಬೆಲೆ ಕೊಟ್ಟು ಎದ್ದೋಗದೆ ಪಟ್ಟಾಗಿ ಕುಂತ ಮಾಲಕ್ಷ್ಮಿ ಕಂಡು ಅವನ ಪಿತ್ತ ನೆತ್ತಿಗೇರಿತು. ಹಟ್ಟಿ ಮುಂದಿದ್ದ ತಂಗಡಿ ಬರೆ ಹಿಡಿದು ಮಾಲಕ್ಷ್ಮಿ ಕಡೆ ದುರುಗುಟ್ಟಿದ. ತಂಗಡಿ ಕಡ್ಡಿಯೇಟು ಬೀಳುವ ಭೀತಿಯಲ್ಲಿ ಮಾಲಕ್ಷ್ಮಿ "ನಿನ್ನಂತ ನತದೃಷ್ಟ ಜಗತ್ತಿನೊಳಗೆ ನಾನು ಕಂಡಿಲ್ಲ" ಎಂದೇಳಿ ಓಡುವಂತಾಯಿತು.

ಓಡುತ್ತ ಊರ ಮುಂದಿನ ಅರಳಿಕಟ್ಟೆ ಬಳಿ ನಿಂತು ಸುತ್ತ ನೋಡಲಾಗಿ; ಎತ್ತ ನೋಡಿದರೂ ನರಪಿಳ್ಳೆಯಿಲ್ಲ. ಮುಖ ನೇರಕ್ಕೆ ನಡೆದು ಕ್ವಾಮ್ಟಿಗರ ಮನೆ ಮುಂದೆ ನಿಂತಳು. ಅದು ಅನಂತಯ್ಯಶೆಟ್ಟರ ಅಂಗಡಿ, ವಾಸದ ಮನೆ. ಶೆಟ್ಟರೆಂಡತಿ ಬಟ್ಟೆ ಒಗೆಯಲು ಹೋಗಿದ್ದರು. ಶೆಟ್ಟರು ಒಬ್ಬಂಟಿಯಾಗಿ ಮೂಲೆಯಲ್ಲಿ ಕಳ್ಳ ಲೆಕ್ಕ ಬರೆದು; ಅಕ್ಕಿರಾಂಪುರ ಸಂತೆ ಯಾಪಾರದ ದುಡ್ಡೆಣಿಸಿದರು. ದುಡ್ಡೆಣಿಸಿ ಲೆಕ್ಕ ಬರೆಯುವುದು, ಹೆಂಡತಿ ಮಕ್ಕಳಿಗೂ ತಿಳಿಯಬಾರದು; ಇದು ಶೆಟ್ಟರ ಗುಟ್ಟಿನ ನಿಯಮ. ಗುಟ್ಟಲ್ಲಿ ಎಣಿಸಿದ ದುಡ್ಡು ಯಾರಿಗೂ ಕಾಣದಿರುವ ಪೆಟಾರಿಯಲ್ಲಿ ದಾಪಾಯಿತು. ಬೀಗದ ಕೈ ಸೊಂಟಕ್ಕೆ ಸಿಗಿಸಿ ಮತ್ತೆ ಮತ್ತೆ ಮುಟ್ಟಿ ನೊಡಿ; ಇದ್ದಲ್ಲೆ ಇರುವುದ ಖಚಿತಪಡಿಸಿ ಬಾಗಿಲಿಗೆ ಬಂದು ಕಳ್ಳ ನೋಟ ನೋಡಿದರು. ದುಡ್ಡೆಣಿಸಿದ್ದು ಯಾರೂ ಕಂಡಿಲ್ಲವೆಂದು ಸಮಾಧಾನ ತಂದುಕೊಂಡರು. ಹೆಣ್ಣು ಮನೆಯೊಳಗೋದ ನೆರಳು ಬಿತ್ತಲ್ಲ ಎಂದು ಅನುಮಾನಗೊಂಡರು. ಹೆಂಡತಿ ಬಂದಿರ ಬಹುದು ಎಂದು ಒಳ ಮನಸ್ಸೇಳಿತು. ಅನುಮಾನದ ಮನಸ್ಸಲ್ಲಿ ಮೆಲ್ಲನೆ ನಡುಮನೆಗೆ ತಿರುಗಿದರು. ಶೆಟ್ಟರು ಏಳೇಳು ಜನ್ಮದಲ್ಲೂ ಕಂಡು ಕೇಳರಿಯದ ದೃಶ್ಯ!! ನಡುಮನೆಯಲ್ಲಿ ಕುಂತಿರುವುದು ಸಾಕ್ಷಾತ್ ಮಾಲಕ್ಷ್ಮಿ. " ಲಕ್ಷ್ಮಿ ಮನೆಗೆ ಬಂದಾಗ ಪ್ರಾಣ ಹೋದರೂ ಹೊರಗೆ ಕಳಿಸಬಾರದು" ಎಂಬ ತಾತ ಹೇಳಿದ ಮಾತು ತಕ್ಷಣ ನೆನಪಿಗೆ ಬಂತು. ತಾತನ ಮಾತು ನಿಜ ಮಾಡಲು ಶೆಟ್ಟರು ಕಾರ್ಯ ಪ್ರವೃತ್ತರಾಗಿ, ನಡುಬಗ್ಗಿ ವಿನೀತರಾಗಿ ನೆಲ ಮುಟ್ಟಿದರು. ಅವರ ನಡವಳಿಕೆಗೆ ಮಾಲಕ್ಷ್ಮಿ ಮುಸಿನಕ್ಕು ಕೈಸನ್ನೆಯಲ್ಲಿ ಹಸಿವೆಂದಳು. ಅಡಿಗೆ ಮನೆ ಮುಖ ಮಾಡಿದ ಶೆಟ್ಟರು ಮರೆತಂತೆ ನಟಿಸಿ "ಅಮ್ಮ ಎಂತ ಕೆಲಸವಾಯಿತು; ನಮ್ಮ ಕುಲಾ–ಚಾರ ಗಂಡಸರಿಗೆ ಅಡಿಗೆ ಮನೆ ನಿಷೇದ; ನಮ್ಮಾಕೆ ಬಟ್ಟೆ ಒಗೆಯಲು ಮಜ್ಜನ ಬಾವಿಗೆ ಹೋಗಿರುವಳು; ಅರೆ ಘಳಿಗೆಯಲ್ಲಿ ಕರೆ ತರುವೆ" ಎಂದು ಹೊಸಿಲು ದಾಟಿ; ಮತ್ತೆ ಒಳ ಬಂದು "ತಲ್ಲಿ ಬಂದ ಅತಿಥಿಗೆ ಉಣಲಿಕ್ಕದೆ ಕಳಿಸಿದರೆ ಏಳು ಜನ್ಮದ ಪಾಪ ಬರುತ್ತದೆ. ನಾನು ವಾಪಸ್ ಬರುವರೆಗೆ ಇಲ್ಲಿಂದ ಕದಲದ ವಾಗ್ದಾನ ನೀಡು" ಎಂದು ಆಕಾಶ ನೋಡುವ ಬಲಗೈ ಮುಂದೆ ಚಾಚಿದರು. ಶೆಟ್ಟರ ಬಲಗೈ ಮೇಲೆ ಮಾಲಕ್ಷ್ಮಿ ಎಡಗೈ ನೆಲ ನೋಡಿ ಬರವಸೆ ನೀಡಿತು. ಶೆಟ್ಟರು ಜನ್ಮ ಸಾರ್ಥಕವಾಯಿತೆಂದು ಮಜ್ಜನ ಬಾವಿ ಮುಖ ಮಾಡಿ ಓಡಿದರು; ಎದುರು ಬಂದ ಹೆಂಡತಿಗೂ ಹೇಳದೆ ಬಾವಿಗೆ ಬಿದ್ದು ಪ್ರಾಣ ಬಿಟ್ಟರು. ಪ್ರಾಣ ಬಿಟ್ಟ ಶೆಟ್ಟರು ಮತ್ತೆ ಮನೆಗೆ ವಾಪಸ್ಸಾಗಲಿಲ್ಲ; ಮಾಲಕ್ಷ್ಮಿ ತಾನು ಕೊಟ್ಟ ವಾಗ್ದಾನದಂತೆ ಶೆಟ್ಟರ ಮನೆ ಬಿಟ್ಟು ಕದಲುವಂತಿಲ್ಲ. ಮಾಡಿದ ಉಪಕಾರಕ್ಕೆ ಶೆಟ್ಟರ ವಂಶ ಅಂದಿನಿಂದ ಮಣೆಗಾರರಿಗೆ ಋಣಿಯಾಗಿ; ಕುಲದ ಮದುವೆ ಕಾರ್ಯಕ್ಕೆ ಕರೆಬಾನಿ ನೀರು ತಂದು; ಮನೆ ತುಂಬಿಸಿ ಋಣ ತೀರಿಸಿದರು. ಮನೆಗೆ ಬಂದ ಬಾಗ್ಯಲಕ್ಷ್ಮಿ ಬಾಗಿಲಾಚೆ ತಳ್ಳಿದ ಮಣೆಗಾರರಿಗೆ ಧರಿದ್ರಲಕ್ಷ್ಮಿ ಅಟಕಾಯಿಸಿದ ಕಥೆಯಾದಳು.

## ನಟಸಾಮ್ರಾಟ ನರಿಯಣ್ಣ

ಬುದ್ದಿವಂತ ಪ್ರಾಣಿ ಯಾವುದು? ನಡವಳಿಕೆಯಿಂದ "ನರಿಬುದ್ದಿ"ಯವರು ಎಂಬ ಬಿರುದು ಮನುಷ್ಯನಿಗೂ ಕರುಣಿಸಿದ ಕಪ್ಪಲನರಿ! ನಯವಂಚಕ ಎಂದು ಕರೆಸಿಕೊಂಡ ಕಾರಣವೇನು? ಕಷ್ಟಪಟ್ಟು ಆಹಾರ ತಂದು ಉಣ್ಣಲು ಮರದ ಮೇಲೆ ಕುಂತ ಕಾಗೆಯನ್ನು ಹೊಗಳಿ ವಂಚಿಸಿದ್ದು ಇದೇ ನರಿಯಣ್ಣ; ಇದೇ ನರಿಯಣ್ಣ ಕಾಡಿನ ರಾಜನ್ನ ಹೊಗಳಿ ಅಟ್ಟಕ್ಕೇರಿಸಿ; ದಿನದ ಮಟ್ಟಿಗೆ ಅಧಿಕಾರ ಪಡೆದು ಯಾಮಾರಿಸಿದ್ದು ಬೇರೆ ಕಥೆ. ಎಟುಕದ ದ್ರಾಕ್ಷಿ ಹುಳಿಯೆಂದು ತನ್ನ ಕುಳ್ಳತನ ಮರೆ ಮಾಚಿದ್ದು ಇದೇ ನರಿಯಣ್ಣ; ತನ್ನ ಕೊರಳಲ್ಲಿದ್ದ ಲಿಂಗ ತಂಗಡಿ ಗಿಡಕ್ಕೆ ಕಟ್ಟಿ ಏಡಿ ತಿಂದು ವ್ರತ ಕೆಡಿಸಿಕೊಂಡದ್ದು ಇದೇ ನರಿಯಣ್ಣ. ಒಂದೇ ಎರಡೇ!!! ಈ ನರಿ ಕಥೆ ಇಷ್ಟಕ್ಕೆ ಮುಗಿಯಲ್ಲ; ಸ್ವಾರಸ್ಯ ಕೇಳೆಂದು ಸಿರಿಯಮ್ಮ ಕಥೆ ಮುಂದುವರಿಸಿದರು.

ಮಳೆಗಾಲ ಅಲಸಂದೆ, ಅವರೆ, ತೊಗರಿ ಬೆಳೆ ವಿಶೇಷಣಗಳಿಗೆ ಬಯಲುಸೀಮೆ ಪ್ರಸಿದ್ದಿ.


ಚಿತ್ರ: ಗುಜ್ಜಾರ್

ಹಸಿ ತೊಗರಿಕಾಳು ಏಡಿಕಾಯಿ ಜೊತೆ ಸೇರಿ ಸಾರಾದರೆ! ಅಮೃತಕ್ಕಿಂತ ಒಂದು ಕೈ ಮೇಲು; ಹಲವು ಕಾಯಿಲೆಗೆ ರಾಮ ಬಾಣವಿದ್ದಂತೆ. ವರ್ಷ ಪೂರ್ತಿ ಮನಸಾರೆ ಮಳೆ ಬಿದ್ದು ಬಯಲೆಲ್ಲ ಹಸಿರಾಗಿದೆ. ಮಾಗಿಕಾಲ ಬಂದು ತೊಗರಿ ಗಿಡದಲ್ಲಿ ಎಲೆಗೊಂದು ಕಾಯಿ ಬಿಟ್ಟಿದೆ. ತುಂಬಿದ ಹಳೆ ಕೆರೆಯಲ್ಲಿ ಏಡಿಗಳ ಸಂತತಿ ಹೆಚ್ಚಿ; ನರಿ ಬುದ್ದಿ ಚಿಗುರಿ ಚುರುಕಾಗುವ ಕಾಲವಿದು. ಬೈಗಾಗಿ ಈರಕ್ಯಾತರಾಯನ ಬೆಟ್ಟದ ಮರೆಗೆ ಹೊತ್ತಿಳಿಯುತ್ತಿತ್ತು. ತಿಳಿಯಾದ ಹಳೆ ಕೆರೆ ನೀರು ಬೀಸೋ ಗಾಳಿಗೆ ಅಲೆಯಾಗಿ ಹೊರಟು ದಡಕ್ಕೆ ಮುತ್ತಿಡುತ್ತಿತ್ತು. ಮುತ್ತಿಡುವ ದಡದಲ್ಲಿ ಸಾಲಾಗಿ ಏಡಿ; ಬಿಲ ಮಾಡಿ ನೆಮ್ಮದಿಯಾಗಿತ್ತು. ಬೆಳಗಿನೊತ್ತು ಬೇಟೆಗಾರರ ಕಾಟ; ಸಂಜೆಗತ್ತಲೆಗೆ ಮಾತ್ರ ಮನೆಯಿಂದ ಹೊರ ಬರುವುದು ಏಡಿ ಸಂತತಿ ರಕ್ಷಣಾ ತಂತ್ರ; ಈ ಒಳಗುಟ್ಟು ಕಾಲಜ್ಞಾನಿ ನರಿಯಣ್ಣಗೆ ತಿಳಿದ ವಿಚಾರ. ನರಿಯಣ್ಣ ತಂತ್ರಕ್ಕೆ ಪ್ರತಿತಂತ್ರ ಹೂಡುವುದರಲ್ಲಿ ಚಾಣಾಕ್ಷ. ಏಡಿ ವಂಶ ವಾಸವಿರುವ ದಡದಲ್ಲಿ ತಾನಿರುವ ಸುಳಿವು ನೀರಲ್ಲಿ ಬೀಳದಂತೆ ಮರೆ ಮಾಡಿ ಕುಂತಿರುವನು. ನಿರಾಯುಧನಾಗಿ ಬೇಟೆಯಾಡುವುದು ನರಿಯಣ್ಣನ ಜಾಯಮಾನ. ಕಮಕ್ ಕಿಮಕ್ ಎನ್ನದೆ ಕುಂತು; ಬಾಲ ಕಡ್ಡಿಯಂತೆ ಸೆಟೆದು ಏಡಿ ಬಿಲದ ಬಳಿ ತೇಲಾಡಿತು. ಹೊಂಚು ಸಂಚುಗಳ ಕಪಟವರಿಯದ ಏಡಿ ಬಾಲಕ್ಕೆ ಬಾಯಾಕಿತು. ಕಣ್ಮುಚ್ಚಿ ತೆರೆವಷ್ಟರಲ್ಲಿ ಬಾಲ ಏಡಿಯೊಂದಿಗೆ ನೆಲಕ್ಕೆ ಅಪ್ಪಳಿಸಿತು. ಏನಾಯಿತೆಂದು ಯೋಚಿಸುವಷ್ಟರಲ್ಲಿ ಏಡಿ ನರಿ ಕೈಗೆ ಸಿಕ್ಕಿ ಹತನಾಯಿತು. ಕೊಬ್ಬಿದೇಡಿ ತಿಂದ ನರಿಯಣ್ಣ ಹಬ್ಬ ಆಚರಿಸಿದ.


ಇಂತ ಕಪಟತನದ ನರಿಯಣ್ಣ ತಾನೇ ನರಮಾನ್ನವನ ಕಪಟಕ್ಕೆ ಬಲಿಯಾದರೆ! ಅಂತ ಕಥೆ ಕೇಳೆಂದು ಸಿರಿಯಮ್ಮ ಮುಸಿನಕ್ಕರು.

ಬೆಳೆ ಕಟಾವಾಗಿ ಸುಗ್ಗಿ ಮುಗಿಯಿತು. ಕಾಳು ಕಡ್ಡಿ ಮನೆ ಸೇರಿ ಮೇವು ಬಣವೆ ಸೇರಿತು. ನಿತ್ಯ ಕಾರ್ಯ ಮುಗಿಸಿ ಪಡುವಣಕ್ಕೆ ಹೊತ್ತಿಳಿಯುತ್ತಿದೆ. ತಲೆ ಮೇಲೆ ಸೌದೆ ಸೊಪ್ಪು, ಕಂಕುಳಲ್ಲಿ ಕುಡಿಗಳು, ಸೀರೆ ಮಡಿಲಿಗೆ ಅಳಿದುಳಿದ ಕಾಯಿ ಸೊಪ್ಪು; ಕೈಯಲ್ಲಿ ದನ ಕರು ಹಿಡಿದು ಹಳ್ಳಿ ಹೆಂಗಸರು ಅವಸರದಿಂದ ಮನೆ ಮುಖ ಮಾಡಿದರು. ಹೆತ್ತ ಕಂದಮ್ಮಗಳಿಗೆ ಗುಟುಕೊತ್ತು ಹಕ್ಕಿ ಪಕ್ಷಿ ಗುಂಪು; ಗೂಡು ಸೇರಲು ಆತುರವಾಗಿ ಹೊರಟಿತ್ತು "ಊರಿಗೊಂದು ದಾರಿ ಹಕ್ಕಿ ಪಿಕ್ಕರ ಸಂಕಯ್ಯಗೆ ಮತ್ತೊಂದು ದಾರಿ" ಎಂಬಂತೆ ಹೊಲಮಾಳದ ಕಡೆ ಹೊರಟಿರುವನು. ಸಂಜೆ ವೇಳೆ ಸಂಕಯ್ಯ ಹೊಲಮಾಲದ ಕಡೆ ಹೊರಟನೆಂದರೆ! ಊರ ಮುಂದೆ ಕಲ್ಲು ಮಂಟಪದ ಪಕ್ಕ ಅವನಿರುವ ಗುಡಾರದಲ್ಲಿ ಮೂರು ದಿನಕ್ಕೆ ಮಸಾಲೆ ಗ್ಯಾರಂಟಿ; ಈಗ ಹೊಲಮಾಳದ ಕಡೆ ಹೊರಟಿರುವ ಅವನ ಮುಖದಲ್ಲಿ ಹಸಿ ಮಸಾಲೆ ಗಮಲು ಎದ್ದು ಕಂಡಿತ್ತು. ಹೆಗಲ ಮೇಲೆ ಬಲೆ ಪೆಂಡಿ, ಕಂಕುಳಲ್ಲಿ ನರಿ ಒಣ ತೊಗಲಿದೆ. ಹಗ್ಗ ಮೂಗುದಾರವಿಲ್ಲದ ಬಡಕಲು ಹಸುವೊಂದು ಅವನ ಹಿಂಬಾಲಿಸುತ್ತಿದೆ. ಹೆಜ್ಜೆ ಮೇಲೆ ಹೆಜ್ಜೆ ಇಟ್ಟು ನಡೆಯಲೋ ಬೇಡವೋ ಎಂಬಂತಿರುವ ಹಸು ಹುಲ್ಲು ತಿಂದು ವರ್ಷವಾದಂತಿದೆ; ಅದರೊಟ್ಟೆ ಮೂಳೆ ಸಂದಿಯಲ್ಲಿ ಅಡಗಿ ಕುಂತಿದೆ. ಕಿಬ್ಬೊಟ್ಟೆ ತೊಗಲು ಮೇಲೆ, ಕೆಳಗಾಡಿ ಹಸು ಜೀವಂತ ಇರುವೆನೆಂದು ಖಾತ್ರಿಗೊಳಿಸುವಂತಿದೆ. ಯಾವ ಜನ್ಮದಲ್ಲಿ ಯಾರಿಗೇನು ಅನ್ಯಾಯ ಮಾಡಿತ್ತೋ! ಈ ಜನ್ಮದಲ್ಲಿ ಸಂಕಯ್ಯನ ಕೈಗೆ ಸಿಕ್ಕಿ ನರಕ ಅನುಭವಿಸುತ್ತಿದೆ. ಸಂಕಯ್ಯನ ತಾಳಕ್ಕೆ ಹೆಜ್ಜೆ ಹಾಕುತ್ತ ಕೊಟ್ಟ ಹಿಡಿ ಹುಲ್ಲ ನಡೆಯುತ್ತಲೇ ನಲುಮುತ್ತಿದೆ. ಬೆಕ್ಕಿನಕಲ್ಲು ಗುಟ್ಟೆ, ಗಂಡುಗಾರೆ ಪೊದೆ, ಸಂಕಯ್ಯನ ಬೇಟೆಗೆ ಹೇಳಿ ಮಾಡಿಸಿದಂತಿದ್ದು, ಎಲ್ಲ ಕಾಲಕ್ಕೂ ಬೇಟೆ ಸಿದ್ದಿಸುವ ಜಾಗವೆಂದು ಅವನ ನಂಬಿಕೆ. ಅವನ ಅನುಕೂಲಕ್ಕೆ ತಕ್ಕಂತೆ ಒಂದು ದಿಕ್ಕಿಗೆ ಕಾರೆಗಿಡದ ಪೊದೆ. ಮತ್ತೊಂದು ದಿಕ್ಕಿಗೆ ಬೆಕ್ಕಿನಗುಂಡು, ಮಗದೊಂದು ದಿಕ್ಕಿಗೆ ಸಂಕಯ್ಯನ ಕಂಕುಳಲ್ಲಿದ್ದ ಬಲೆ ಹಾಸಿ; ಉಳಿದ ದಿಕ್ಕು ಬೇಟೆ ಪ್ರವೇಶಕ್ಕೆ ಮೀಸಲಾಯಿತು. ಬೇಟೆಗೆ ಗುರಿಯಾದ ಪ್ರಾಣಿ, ಪಕ್ಷಿ ವೇಷ ದರಿಸುವುದು ಅವುಗಳ ಬಾಷೆಯಲ್ಲಿ ಮಾತಾಡುವ ವಿದ್ಯೆ ಸಂಕಯ್ಯನ ವಂಶಕ್ಕೆ ಸಿದ್ದಿಸಿದೆ. ಇಂದು ಸಂಕಯ್ಯನ ಬೇಟೆ ಕಪ್ಪಲನರಿ ಎಂದು ಅವನ ಕಂಕುಳಲ್ಲಿರುವ ತೊಗಲೇ ಹೇಳುತ್ತಿದೆ. ಸಂಕಯ್ಯ ತೊಗಲ ಹೊದ್ದು ನರಿಯಂತಾಗಿ; ನರಿ ಮೀರಿಸಿದ ನಟನೆ ಮಾಡಿದ. ಹಸು ಸಂಕಯ್ಯನ ಸೂಚನೆ ಪಾಲಿಸಿ ಜೀವಂತ ಶವವಾಯಿತು. ವೇಷದಾರಿ ಸಂಕಯ್ಯ ದನಿ ಬದಲಿಸಿ, ಬಳಗ ಮಾಂಸದೂಟಕ್ಕೆ ಕೂಗಿ ಕರೆದ, ರಾತ್ರಿ ಸಂಚಾರಕ್ಕೆ ಸಕಲ ಸಿದ್ದತೆ ಮಾಡಿಕೊಳ್ಳುತ್ತಿದ್ದ ನರಿ ಬಳಗಕ್ಕೆ ಸಂಕಯ್ಯನ ಕರೆ ಕೇಳಿ ಕಿವಿ ನಿಮಿರಿತು. ಚುರುಕು ಬುದ್ದಿಯ ಬಳಗ ಯಾರ ದನಿಯೆಂದು ಕಿವಿಯಾನಿಸಿ ಮತ್ತೊಮ್ಮೆ ಆಲಿಸಿತು. ಅನುಮಾನಕ್ಕೆ ಆಸ್ಪದವಿಲ್ಲ ಬಂಧುವೊಬ್ಬನ ಬೋಜನದ ಕರೆ. ನರಿ ಬಳಗ ಕರೆ ಬಂದ ದಿಕ್ಕಿಡಿದು ಓಡತೊಡಗಿತು. ಓಡುತ್ತಿರುವ ಮುದಿ ತಾಯಿನರಿ ಗಂಡನ ಕಡೆ ನೋಡುತ್ತ "ಈ ಮಾರಾಯ್ನ್ ಕಟ್ಕಂಡಾಗ್ಲಿಂದ ಇಂತ ಸೊಂಪಾದ್ ಊಟ್ವೆ ಮಾಡ್ಸ್ದ" ಎಂದು ಮನಸಾರೆ ಹೊಗಳುತ್ತ ಎಲ್ಲರ ಹಿಂದಿಕ್ಕಿ ಓಡಿತು. ಹಸು ಜೀವಂತ ಸತ್ತು ಮಾಂಸ ಬೆಟ್ಟದಂತೆ ಬಿದ್ದಿದೆ; ಬಂಧುವೊಬ್ಬನೆ ಬಾರಾಡಿ ರಾಶಿ ಮಾಂಸ ಉಂಬುದ ಕಂಡ ಬಳಗದ ಒಡಲುರಿಯಿತು. ಔತಣಕ್ಕೆ ಕೂಗಿ ಕರೆದ ಬಂಧುವ ಮನದಲ್ಲೇ ಮೆಚ್ಚಿತು. ಆಗತಾನೇ ಸೋಭನ ಮುಗಿಸಿ ಹರೆಯದ ಉಮೇದಿನ ನರಿಜೋಡಿಯೊಂದು ಆತುರ ಪಟ್ಟು ಮುನ್ನುಗ್ಗಿತು. ಸಂಕಯ್ಯನ ಬಲೆಗೆ ಸಿಕ್ಕಿ ಸೆರೆಯಾಯಿತು. ಸಂಕಯ್ಯನ ಕಪಟ ನಾಟಕ ಬಟಾ ಬಯಲಾಯಿತು. ಅಪಾಯವರಿತ ನರಿ ಬಳಗ ಹಿಂತಿರುಗಿ ಕುಕ್ಕುಲೋಟವಾಯಿತು. ಓಡೋಡಿ ಕಾಲು ಸೋತ ಮುದಿನರಿ "ಈ ಮೂಳ್ನ ಕಟ್ಕಂಡಾಗ್ಲಿಂದ ಇಂತ ಕುಕ್ಲೋಟ ಓಡಿ ಸಾಕಾತು" ಎಂದು ಗಂಡನ ಜನ್ಮ ಜಾಲಾಡಿತು. ಬಲೆಗೆ ಬಿದ್ದ ಯುವ ಜೋಡಿ ಕ್ಷಣದಲ್ಲಿ ಉಸಿರು ಕಟ್ಟಿ ಶವವಾಯಿತು. ಭೂರಿ ಭೋಜನಕ್ಕೆ ಬಂದ ನರಿಜೋಡಿ ತಾನೇ ಭೋಜನದ ಸರಕಾಗಿ ಕಾಲು ಚಾಚಿ ಮಲಗಿತು. ತೊಗಲ ಬಿಡಿಸಿ ಸಂಕಯ್ಯನ ಬಂಧು ಬಳಗಕ್ಕೆ ನಾಲಿಗೆ ಮರಗಟ್ಟಿ ತಿಂಬಷ್ಟು ಬಾಡಾಯಿತು. ತೊಗಲೊಣಗಿ ಅದರೊಳಗೆ ನೆಲುಲ್ಲು ತುಂಬಿ ಆಕಾರಕೊಟ್ಟು ಉಸಿರಿಲ್ಲದ ನರಿಜೋಡಿಯಾಗಿ; ಉಳ್ಳವರ ಮನೆಯಲ್ಲಿ ಹಲ್ಕಿರಿದು ನಿಂತು; 'ನರಿ ಮುಖ ನೋಡಿದರೆ ಬುಸಿದ ಕೆಲಸವಾಗುತ್ತದೆ' ಎಂಬ ಗಾದೆ ಮಾತಾಯಿತು.

ಅಂತದೇ ಮುಟ್ಮೂರ್ಸಂಜೆ, ಅದೇ ಸಂಕಯ್ಯ, ಅದೇ ಹಸು, ಹೊರಟಿರುವುದು ಹುಂಜಿನಳ್ಳದ ಕಡೆ. ಹುಂಜಿನಳ್ಳದಲ್ಲಿ ದೊಡ್ಡ ವಡ್ಡೊಂದಿದೆ. ಅದರ ಸುತ್ತ ಬೆಟ್ಟದಂತ ಮರಳರಾಶಿ. ಮರಳರಾಶಿಯೇ ಈ ದಿನದ ಸಂಕಯ್ಯನ ಬೇಟೆ ಸ್ಥಳ. ಇಂದು ಅವನು ಗುರಿಯಿಟ್ಟಿರುವುದು ಅಪಶಕುನದ ಕಾಕರಾಜನ ವಂಶ. ಎಲ್ಲರಿಂದ ಕಡೆಗಣಿಸಲ್ಪಟ್ಟರೂ ಯಾರಿಗೂ ಎಂದೂ ಕೇಡು ಬಯಸದೆ; ಗುಂಪಾಗಿ ಬದುಕುವ ಅಪರೂಪದ ಜೀವಿ ಕಾಕರಾಜನ ವಂಶ. ಅಗಳು ಕಂಡಲ್ಲಿ ಬಳಗವನ್ನೆಲ್ಲ ಕೂಗಿ, ಹಂಚಿ ಉಣ್ಣುವುದು ವಂಶದ ಮತ್ತೊಂದು ದೊಡ್ಡಗುಣ. ಸಂಕಯ್ಯನ ಮಸಾಲೆ ರುಚಿಗೆ ಶಕುನ ಅಪಶಕುನದ ಬೇದ ಭಾವ ಇರುವುದಿಲ್ಲ. ಎಲ್ಲದರಲ್ಲೂ, ಎಲ್ಲರೊಳಗೂ ಒಳ್ಳೆಯ ರುಚಿ ಬಯಸುವುದು ಸಂಕಯ್ಯನ ನಾಲಿಗೆ ಗುಣ. ಇತ್ತಿತ್ತಲಾಗಿ ಕಾಕರಾಜನ ವಂಶಕ್ಕೆ ಹೊಟ್ಟೆ ತುಂಬಿಕೊಳ್ಳಲು ತಡಕಾಟವಾಗಿದೆ. ಇಂದು ಸಹ ದೇಶವೆಲ್ಲ ಸುತ್ತಿ ಹೊಟ್ಟೆ ತುಂಬದೆ ಬೇಸರಗೊಂಡು ಗೂಡು ಸೇರಲು ಒಟ್ಟಾಗಿ ಹಿಂತಿರುಗುತ್ತಿದೆ. ಮರಳದಿನ್ನೆ ಮೇಲೆ ಬಲೆ ಹಾಸಿ ಸಂಕಯ್ಯ ವೇಷ ಬದಲಿಸಿ ಕಾಗೆಯಂತಾದ. ಎಂದಿನಂತೆ ಹಸು ಬಲೆ ಮೇಲೆ ಮಾಂಸದ ರಾಶಿಯಾಗಿ ಮಲಗಿತು. ಮನೆಗೆ ಹೊರಟಿದ್ದ ಬಳಗವನ್ನು ಕಾಗೆ ದನಿಯಲ್ಲಿ ಸಂಕಯ್ಯ ಭೋಜನಕ್ಕೆ ಕರೆದ. ಬಳಲಿ ಗೂಡಿಗೊರಟ ಬಳಗ ಭೋಜನದ ಕರೆ ಕೇಳಿ ನೆಲ ನೋಡಿತು. ಆಸೆಗಣ್ಣಲ್ಲಿ ಮಾಂಸದ ರಾಶಿ ಕಂಡು ಕೆಳಗಿಳಿಯಿತು. ಅಪರೂಪಕ್ಕೆ ಹೊಟ್ಟೆ ತುಂಬಿಸಿಕೊಳ್ಳುವ ಆತುರದಲ್ಲಿ ಬಳಗ ಕುಂತದ್ದು ಸಂಕಯ್ಯನ ಬಲೆ ಮೇಲೆ; ಬಲೆಗೆ ಬಿದ್ದ ಇಡೀ ಕಾಗೆ ಗುಂಪ ಕ್ಷಣಾರ್ಧದಲ್ಲಿ ಕತ್ತಿಸುಕಿ ಶವ ಮಾಡಿ; ಗೋಣಿ ಚೀಲದಲ್ಲಿ ಹೆಗಲ ಮೇಲೊತ್ತು ಡೇರೆ ಸೇರಿ ಸಂಕಯ್ಯ ಹಬ್ಬ ಆಚರಿಸಿದ.

## ಕೋಲ್ಬೇಟೆ

ಸುಗ್ಗಿ ಕಾಲ ಮುಗಿದು ಹಬ್ಬಗಳ ಸಾಲು ಬಂದು ಹಳ್ಳಿ ಹೆಬ್ಬಾಗಿಲಿಗೆ ಆತು ನಿಂತಿದೆ. ಊರ ಮುಂದಿನ ಉಪ್ನೀರ ಬಾವಿ ಮುಂದೆ ಕಿರು ಜಾತ್ರೆ ಸೇರಿದೆ. ಊರ ಗಂಡಾಳುಗಳು ಕೊಡ್ಲಿ ರುಡ್ಗಟ್ಗೆ ಹೆಗಲೇರಿಸಿ ಕೋಲ್ಬೇಟೆಗೆ ಹೊರಟಿರುವರು. ಮುಕುಡಪ್ಪ, ಕೆಂಡಪ್ಪ ಹಾಕುತ್ತಿರುವ(ತಮಟೆ) ಬೇಟೆ ಗಸ್ತಿ; ಕಣಿ ಕಣಿರೆಂದು ಬೇಟೆಗಾರರ ನೇತೃತ್ವ ವಹಿಸಿದೆ. ಬೇಟೆಗಾರರ ಸಾಗಾಕಲು ಹಳ್ಳಿಗೆ ಹಳ್ಳಿಯೇ ಉಪ್ನೀರ ಬಾವಿ ಮುಂದೆ ಸೇರಿದೆ. ಮೈತುಂಬ ಸೆರಗೊದ್ದ ಹೆಂಡಂದಿರು ಗಂಡಂದಿರ ಪೌರುಷ ಕೊಂಡಾಡಿದರೆ; ಪೋರ ಪ್ರೇಯಸಿಯರ ಎದೆ ಪ್ರಿಯತಮನ ಕೋಲ್ಬೇಟೆ ಹೆಜ್ಜೆಗೆ ನಿಂತಲ್ಲೆ ಕುಣಿಯುತ್ತಿದೆ. ದಂಡಿಗೊರಟ ಯೋಧರಂತೆ ಬೇಟೆಗಾರರು ಕುಣಿಯುತ್ತ ಚಿಲ್ಲಳ್ಳಿ ಬೆಟ್ಟಕ್ಕೆ ಮುಖ ಮಾಡಿದರು. ಚಿಲ್ಲಳ್ಳಿ ಬೆಟ್ಟದ ಕುಂದ್ಲಿ(ಮೊಲ) ಸುಗ್ಗಿಕಾಲಕ್ಕೆ ಕೊಬ್ಬೊಂದು ಖಂಡವಾಗಿದೆ. ವರ್ಷಕ್ಕೊಂದು ಏಳೂರು ಬೇಟೆಗಾರರಿಗೆ ಚಿಲ್ಲಳ್ಳಿ ಬೆಟ್ಟ ಕುಂದ್ಲಿ ಬೇಟಗೆ ರಂಗಸ್ಥಳವಾಗುತ್ತದೆ. ಎಂಟು ದಿಕ್ಕಿಂದ ಬೇಟೆಗಾರರು ಕೇಕೆಯಾಕಿ ಬೆಟ್ಟ ಹತ್ತಿದರು. ತಮಟೆ ಗಸ್ತಿ, ಬೇಟೆಗಾರರ ಕೇಕೆಗೆ ಬೆಟ್ಟದಲ್ಲಿ ಕುಂದ್ಲಿ ವಂಶ ಬೆದರಿ ನಿಂತಿದೆ. ಗಂಡುಗಾರೆ ಪೊದೆಯಲ್ಲಿ ರಂಗಿನಾಟ ಆಡುತ್ತಿದ್ದ ಕುಂದ್ಲಿಜೋಡಿ ಬೆದರಿ ಕುಂತು ಕಣ್ ಕಣ್ ಬಿಟ್ಟಿದೆ. ಏಳೂರು ಬೇಟೆಗಾರರು ಗಂಡ್ಗಾರೆ ಪೊದೆ ಸುತ್ತುವರಿದರು. ಚಕ್ರವ್ಯೂಹ ಬೇದಿಸಿದ ಕುಂದ್ಲಿಜೋಡಿ ಆಕಾಸ ಭೂಮಿ ಒಂದು ಮಾಡಿ ಓಡಿತು. ಕುಂದ್ಲಿಜೋಡಿ ಓಟದ ಲಯವರಿತ ಕೂಡ್ಳಳ್ಳಿ ಬೇಟೆಗಾರರ ರುಡ್ಗಟ್ಗೆ ಗಾಳಿಯಲ್ಲಿ ತೇಲಿ ಬಂದು ಕುಂದ್ಲಿಜೋಡಿ ಹಟ್ಟಡಗಿಸಿತು. ಕುಂದ್ಲಿಜೋಡಿ ಮೇಲೆ ಏಳೂರ ಬೇಟೆಗಾರರ ರುಡ್ಗಟಿಗೆ ರಾಶಿಯಾಯಿತು. ಕುಂದ್ಲಿ ಹುಟ್ಟಡಗಿಸಿದ ವೀರರು ತಾವೆಂದು; ಚಿಲ್ಲಳ್ಳಿ ಕೂಡ್ಳಳ್ಳಿ ಬೇಟೆಗಾರರ ಮದ್ಯೆ ವಾಗ್ವಾದ ಏರ್ಪಟ್ಟಿತು. ಮಾತಿಗೆ ಮಾತು ಮತಿಸಿ ಬೇಟೆಗಾರರ ಕೈಗೆ ರುಡ್ಗಟ್ಗೆ ಬಂದು ಕದನವಾಗಿ ಚಿಲ್ಲಳ್ಳಿ ಬೆಟ್ಟ ರಣರಂಗವಾಯಿತು. ಬೇಟೆಗಾರರ ಮುಖದಲ್ಲಿ ರಕ್ತ ಹರಿದು ಕೋಬಲಿಗಾಗಿ ಕಾತರಿಸಿತು. ಯಾದ್ಗೆರೆ ರಾಮಪ್ಪ ಮದ್ಯಸ್ಥಿಕೆಯಿಂದ ಸಂದಾನವಾಗಿ; ಕೂಡ್ಳಳ್ಳಿ ಬೇಟೆಗಾರರ ರುಡ್ಗಟ್ಗೆ ಮೇಲೆ ಮೊಲದ ಶವವೇರಿ ಮೆರವಣಿಗೆ ಹೊರಟಿತು. ಚಿಲ್ಲಳ್ಳಿ ಬೇಟೆಗಾರರ ಎದೆಯಲ್ಲಿ ಸೇಡಿನ ಹೊಗೆಯಾಡಿತು.



**ಈಗಾಗಲೇ ತಮ್ಮ 'ಮಣೆಗಾರ' ಮತ್ತು 'ಮುತ್ತಿನಜೋಳ' ಎಂಬ ಅತ್ಮಚರಿತ್ರಾತ್ಮಕ ಕೃತಿಗಳಿಂದ ಪರಿಚಿತರಾಗಿರುವ ಲೇಖಕರು ನಿವೃತ್ತ ಕಾರ್ಮಿಕ ಅಧಿಕಾರಿ**

# ನವಿಲುಗರಿ

## ಮರವಾಗುವ ಬಯಕೆ



ನನಗೂ ಇದೆ
ಮರವಾಗಿ ಬೆಳೆಯುವ ಬಯಕೆ
ಬೆಳೆದು ನಿಲ್ಲಲಿಕ್ಕಲ್ಲ ನೂರು ಕಾಲ
ಬದುಕುತ್ತೇನೆ ನೆರಳಾಗಿ ಮೂರು ಕಾಲ

ಜೀವನವೆಲ್ಲ ಪಡೆದದ್ದಾಯಿತು
ನೀಡುವ ಮಾತು ದೂರವೆ ಉಳಿಯಿತು
ಪ್ರೀತಿಸಲಿಲ್ಲ ಜಗದ ಪ್ರಕೃತಿ
ಪಡೆಯಲಿಚ್ಛಿಸುವೆ ಜನರ ಸಂಪ್ರೀತಿ


ಚಿಗುರೊಡೆಯುತ್ತೇನೆ
ಹಳೆಕೊಳೆಯ ತೊಳೆದು
ಹೂವಂತೆ ಅರಳುವೆನು
ಹೊಸ ಚೆಲುವ ಪಡೆದು

ಸೂಸುತ್ತಾ ನಸುಗೆಂಪು
ನೀಡುತ್ತಾ ತುಸುತಂಪು

ಸಂಭ್ರಮಿಸುತ್ತೇನೆ
ನಿಮ್ಮ ಸಂತಸದ ಕೂಗಿಗೆ
ಸಾರ್ಥಕವ ಪಡೆದೇನು
ನಾನು ಮರವಾದ ಬಾಳಿಗೆ

**–ಶಿವಶಂಕರ ಸೀಗೆಹಟ್ಟಿ**

ಇವರ ಇತ್ತೀಚಿನ 'ಕರುಳಬಳ್ಳಿ ಮತ್ತು ಜೀವ ಕಾರುಣ್ಯ' ಕವನ ಸಂಕಲನದಿಂದ ಆಯ್ದ ಪದ್ಯ)



ಚಿತ್ರ: **ವಿಜಯಶ್ರೀ ಹಾಲಾಡಿ**

## ಹಟ ಹಿಡಿಯಬೇಡ ಕಣೇ



ಇಂದೇ ಹೋಗಬೇಕೆಂದು ಹಟ ಹಿಡಿಯಬೇಡ
ಮಳೆ ಬಂದಿದೆ ಹೊರಗೆ ನೆರೆ ಬಂದಿದೆ ಹೊಳೆಗೆ

ಮುನಿಸು ಬೇಡ ನನಗೆ ಹೊರಗೆ ಗುಡುಗು ಮಿಂಚು
ಸೆರಗು ಸಿಕ್ಕಿದೆ ಕಾಲಿಗೆ ಹರಿದಿದೆ ಅದರ ಅಂಚು
ಸೊಂಟಕ್ಕೆ ಸಿಕ್ಕಿಸಿದ ಕರ್ಚೀಫು ಆಗಿದೆ ಒದ್ದೆ
ಮುನಿಸು ಏಕೆ ಹೀಗೆ ಕನಸು ತಾರದೇ ನಿದ್ದೆ?

ನೀನೆ ನೆಟ್ಟ ಗಿಡಗಳಿಗೆ ಹೂವು ಬಿಟ್ಟಿವೆ ನೋಡು
ನಿನ್ನ ಮುಡಿಗೆ ಸಲ್ಲದೇಕೆ ಮುನಿಸು ಬೇರೆ ಕಾಡು
ಮುಗುಳುನಗೆಯಲ್ಲಿ ನಡೆ, ನೀ ಹೂವಿನ ತೇರು
ನಾ ಬರೆದ ಪದ್ಯದ ಪಲ್ಲವಿ ನೀನದರ ಬೇರು

ಶಬ್ದಗಳಲ್ಲಿ ಹಿಡಿಯಲಾರದು ನಮ್ಮ ನಿಜದ ಪ್ರೀತಿ
ಮೊಗ್ಗು ಅರಳಿ ಹೂವಾಗಬೇಕು ಅದು ಜೀವ ರೀತಿ
ಮುನಿಸು ಬಿಡು ಮನೆ ಕಾದಿದೆ ನಿನ್ನ ನೆರಳ ಬೆಳೆದು
ಎಷ್ಟು ಕಾಯಲಿ ನೀನಿಲ್ಲದೇ ನಿನ್ನ ಹೆಸರು ಕರೆದು

ಇಂದು ಹೋಗಬೇಕೆಂದು ಹಿಡಿಯಬೇಡ ಹಟ
ನೋಡಲ್ಲಿ ಕ್ಷಣಗಳ ನಿಲ್ಲಿಸಿ ನಕ್ಕ ನಮ್ಮಿಬ್ಬರ ಪಟ

**– ವಿ.ಎಸ್. ಶಾನಭಾಗ್**

(ಇದೇ ಕವಿಯ 'ಬೋಳುಮರ ಹಕ್ಕಿ ಮತ್ತು ನಾನು' ಎಂಬ ಇತ್ತೀಚಿನ ಸಂಕಲನದಿಂದ ಆಯ ಕವನ)



---

**೯ನೇ ಪುಟದಿಂದ)**

ದಲಿತ ಅಥವಾ ಹಿಂದುಳಿದ ಅಸ್ಮಿತೆಗಳು ಸಾಮಾಜಿಕವಾಗಿ ಅಪ್ರಸ್ತುತವಾಗುತ್ತವೆ. ಅಲ್ಲದೆ 'ಇಂಥ ಅಸ್ಮಿತೆಗಳು ಸುಲಭವಾಗಿ ಪ್ರಜಾಪ್ರಭುತ್ವ ವಿರೋಧಿ ಸಿದ್ಧಾಂತಗಳಿಗೆ ದಾರಿಮಾಡಿಕೊಡುತ್ತವೆ.

ಪ್ರಜಾಪ್ರಭುತ್ವದ ಜೀವಾಳವೆಂದರೆ ನಾಗರೀಕ ಸಮುದಾಯ ಮತ್ತು ಸಾರ್ವಜನಿಕ ವಲಯ (Public sphere), ಪ್ರಜಾಪ್ರಭುತ್ವದ ದೌರ್ಬಲ್ಯವೆಂದರೆ ಚುನಾವಣೆಗಳನ್ನು ಆಧರಿಸಿದ ಪ್ರತಿನಿಧಿತ್ವವು ನೈಜ ಪ್ರತಿನಿಧಿತ್ವವಾಗಿಲ್ಲದೆ ಇರಬಹುದು. ಈ ಲೇಖನ ಬರೆಯುತ್ತಿರುವಾಗ ದೇಶದ ಸರ್ವೋಚ್ಚ ನ್ಯಾಯಾಲಯವು ಎಲ್ಲಾ ರಾಜಕೀಯ ಪಕ್ಷಗಳಿಗೆ ಅವುಗಳ ಅಭ್ಯರ್ಥಿಗಳ ಅಪರಾಧಿ ಹಿನ್ನೆಲೆಯನ್ನು ಸಾರ್ವಜನಿಕವಾಗಿ ತೋರಿಸದಿದ್ದಕ್ಕಾಗಿ ದಂಡವನ್ನು ವಿಧಿಸಿದೆ. ಹಲವಾರು ವರ್ಷಗಳಿಂದ ADR ಎಂಬ ಸಂಸ್ಥೆಯು ಪ್ರತಿಯೊಂದು ಚುನಾವಣೆಯಲ್ಲಿ ಭಾಗಿಯಾಗುವ ಅಭ್ಯರ್ಥಿಗಳ ಆದಾಯ, ಆಸ್ತಿ ಹಾಗೂ ಅಪರಾಧಿ ಹಿನ್ನೆಲೆಯನ್ನು ದಾಖಲೆ ಸಹಿತ ಪ್ರಕಟಿಸುತ್ತ ಬಂದಿದೆ. ಈ ವಿವರಗಳಿಂದ ಆಶ್ಚರ್ಯರಾಗಿ ಸಾಬೀತಾಗಿರುವುದೆಂದರೆ ಭಾರತದ ಎಲ್ಲಾ ಪಕ್ಷಗಳ ಬಹುಸಂಖ್ಯಾತ ಅಭ್ಯರ್ಥಿಗಳು ಭ್ರಷ್ಟರೂ, ಅಪರಾಧಿಗಳೂ ಆಗಿದ್ದಾರೆ. ಇಂಥ ಪ್ರತಿನಿಧಿತ್ವವನ್ನು ಆಧರಿಸಿದ ಪ್ರಜಾಪ್ರಭುತ್ವವು ಆರೋಗ್ಯಕರವಾಗಿರುವುದು ಅಸಾಧ್ಯ. ಹಾಗೆಯೆ ಪ್ರತಿನಿಧಿತ್ವವು ಕರ್ನಾಟಕದಲ್ಲಿಯಂತೆ ಜಾತಿಯನ್ನೇ ಆಧರಿಸಿದ್ದರೆ ಇಲ್ಲಿ ಪ್ರಜಾಪ್ರಭುತ್ವವಿದೆಯೆಂದು ಭ್ರಮಿಸುವುದು ಹೇಗೆ? ಇನ್ನೂ ಹೆಚ್ಚು ಅಪಾಯಕಾರಿಯೆಂದರೆ ಸಂವಿಧಾನ ಹಾಗೂ ಪ್ರಜಾಪ್ರಭುತ್ವಗಳು ಆಶ್ರಯಿಸುವ ನ್ಯಾಯದ ಕಲ್ಪನೆಯನ್ನೇ ಜಾತಿ ಮತ್ತು ಮಠಗಳು ನಾಶಮಾಡಿಬಿಡುತ್ತವೆ. ಭ್ರಷ್ಟಾಚಾರ, ಲೈಂಗಿಕ ದೌರ್ಜನ್ಯ, ಅಪರಾಧ ಇವೆಲ್ಲವನ್ನೂ, 'ಮನ್ನಾ' ಮಾಡುವ ಸಾಧನಗಳಾಗಿ ಮಠಗಳು ಪರಿವರ್ತಿತವಾಗಿವೆ. ಅವು "ನಮ್ಮವರನ್ನು" ರಕ್ಷಿಸುವ ತಾಣಗಳಾಗಿವೆ. ಹಾಗೆಯೆ ಅಭಿವೃದ್ಧಿ ಯೋಜನೆಗಳು, ಜಿಲ್ಲಾವಾರು ಅಥವಾ ಕ್ಷೇತ್ರವಾರು ರಾಜ್ಯ ಸರಕಾರದಿಂದ ದೊರೆಯುವ ಹಣದ ಹಂಚಿಕೆಯೂ ಮಠಗಳ ಪ್ರಭಾವದಿಂದ ನಿರ್ಧಾರಿತವಾಗುತ್ತದೆ. ಸಮಗ್ರ ಅಭಿವೃದ್ಧಿಯ ಕಲ್ಪನೆಯೇ ಇಲ್ಲವಾಗುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಪ್ರಜಾಪ್ರಭುತ್ವ ರಾಜಕಾರಣವೇ ಒಂದು ಭ್ರಮಾತ್ಮಕ ಅಸ್ತಿತ್ವವನ್ನು ಪಡೆದುಕೊಳ್ಳುತ್ತದೆ.

ಈ ಪರಿಸ್ಥಿತಿಗೆ ಎರಡು ಕಾರಣಗಳು ಎದ್ದುಕಾಣುತ್ತದೆ. ಒಂದು, ಜನಪರ ಚಳುವಳಿಗಳು ದುರ್ಬಲವಾಗಿ ಇಲ್ಲದೆ ಇರುವಂಥ ಸ್ಥಿತಿಗೆ ಬಂದಿರುವುದರಿಂದ ಕರ್ನಾಟಕದ ರಾಜಕಾರಣದಲ್ಲಿ ಸೈದ್ಧಾಂತಿಕತೆಯ ಸಂಪೂರ್ಣ ಗೈರು ಹಾಜರಿ ಉಂಟಾಗಿದೆ. ಅದೆಷ್ಟೆ ಅಸಮಗ್ರವಾಗಿದ್ದರೂ ಒಂದು ಕಾಲದಲ್ಲಿ ಸಮಾಜವಾದಿ ಚಳುವಳಿ, ಭೂಸುಧಾರಣೆ, ದಲಿತ ಹೋರಾಟಗಳು, ರೈತ ಹೋರಾಟಗಳು ರಾಜಕಾರಣಕ್ಕೆ ದಿಕ್ಕುದೆಸೆಯನ್ನು ಒದಗಿಸಿದ್ದವು. ಈಗ ಅಂಥ ಯಾವುದೇ ಚಾಲಕ ಶಕ್ತಿ ಇಲ್ಲದೆ ರಾಜಕೀಯವು ಕೇವಲ ತತ್ಕಾಲದ ಅಧಿಕಾರ ರಾಜಕೀಯವಾಗಿ ಬಿಟ್ಟಿದೆ. ಈ ರಾಜಕೀಯಕ್ಕೆ ದೀರ್ಘ ಆಯಸ್ಸಿನ ಆಸೆಯೂ ಇಲ್ಲ. ಆಯಾ ದಿನಕ್ಕೆ ಅಷ್ಟು ಬಾಚಿಕೊಳ್ಳುವುದು ಮಾತ್ರ ಉದ್ದೇಶವಾಗಿದೆ. ಆದ್ದರಿಂದ ಅಧಿಕಾರಕ್ಕೆ ತರುವ ಯಾವ ಕೇಂದ್ರವಾದರೂ ಸರಿಯೇ ಎನ್ನುವ ಸಿನಿಕತನವು ಗಟ್ಟಿಗೊಂಡಿದೆ. ಹೀಗಾಗಿ ಮಠಗಳ ಬೆಂಬಲ ಪಡೆಯುವ ರಾಜಕಾರಣಿಗಳು ಈ ಮಠಗಳನ್ನು ಸಾಧನವನ್ನಾಗಿ ಬಳಸುತ್ತಾರೆಯೆ ಹೊರತು ಅವುಗಳಿಗೂ ಪ್ರಾಮಾಣಿಕವಾಗಿ ಬದ್ಧರಾಗಿಲ್ಲವೆನ್ನುವುದು ಅತ್ಯಂತ ಖಚಿತವಾಗಿದೆ.

**(ಲೇಖಕರು ನಮ್ಮ ಮುಖ್ಯ ಸಾಂಸ್ಕೃತಿಕ ಚಿಂತಕರೂ, ರಾಜಕೀಯ ವಿಶ್ಲೇಷಕರೂ ಆಗಿದ್ದಾರೆ)**

---

**೧೧ನೇ ಪುಟದಿಂದ)**

ನಿಂತಿರುವ ಪ್ರಜಾಪ್ರಭುತ್ವ ವ್ಯವಸ್ಥೆ ನನ್ನ ಆದರ್ಶಗಳಲ್ಲಿ ದೊಡ್ಡ ಸ್ಥಾನ ಪಡೆದಿದೆ. ವೈಯಕ್ತಿಕ ವಿಚಾರಕ್ಕೆ ಬಂದರೆ, ನನ್ನ ಒಂದೂಮುಕ್ಕಾಲು ದಶಕದ ದುಡಿಮೆಯ ಉಳಿತಾಯ ಮತ್ತು ಕುಟುಂಬದ ಇತರೆ ಆದಾಯದಿಂದ ಕೌಟುಂಬಿಕ ಜೀವನ ನಡೆಯುತ್ತಿದೆ. ನನ್ನನ್ನೂ ಸೇರಿದಂತೆ ಮನೆಯವರ ಬಹುತೇಕ ಅಗತ್ಯಗಳನ್ನು ಕಡಿಮೆ ಮಾಡಿಕೊಳ್ಳುತ್ತಾ ಸಾಗಿದ್ದೇವೆ. ಮಕ್ಕಳ ವಿದ್ಯಾಭ್ಯಾಸದ ಕಾರಣಕ್ಕೆ ಒಂದಷ್ಟು ವೆಚ್ಚಗಳಿವೆ ಎನ್ನುವುದು ಬಿಟ್ಟರೆ ಜೀವನ ನಿರ್ವಹಣೆಗೆ ಸಮಸ್ಯೆಯಿಲ್ಲ.

ಪಕ್ಷದ ವಿಚಾರಕ್ಕೆ ಬಂದರೆ, ಆರಂಭದಲ್ಲಿ ನಾವೊಂದಷ್ಟು ಜನ ಹೆಚ್ಚಿಗೆ ದೇಣಿಗೆ ನೀಡಿ ಪಕ್ಷವನ್ನು ನಡೆಸಿದೆವು. ಆದರೆ ಈಗ ಬಹುತೇಕ ಎಲ್ಲಾ ಖರ್ಚುವೆಚ್ಚಗಳನ್ನು ಸದಸ್ಯರ, ಹಿತೈಷಿಗಳ, ಬೆಂಬಲಿಗರ, ಸಾರ್ವಜನಿಕರ ದೇಣಿಗೆಯುಲ್ಲಿಯೆ ನಿರ್ವಹಿಸಲಾಗುತ್ತಿದೆ. ಈಗಂತೂ ನಾವು ಯಾರೇ ನಮ್ಮ ಕೆಲಸಗಳನ್ನು ಪ್ರಶಂಸಿಸಿದರೂ, ಅವರನ್ನು ನೇರವಾಗಿಯೇ ದೇಣಿಗೆ ನೀಡಿ ಬೆಂಬಲಿಸಿ ಎಂದು ಕೋರುತ್ತಿದ್ದೇವೆ. ಬಹುತೇಕರು ಸಕಾರಾತ್ಮಕವಾಗಿ ಸ್ಪಂದಿಸುತ್ತಿದ್ದಾರೆ.

# ಕೆಲ ಸಾಹಿತ್ಯಿಕ-ಸಾಂಸ್ಕೃತಿಕ ಚಿಟಿ ಟಿಪ್ಪಣಿಗಳು


## ಸಾಹಿತ್ಯ ಅಕಾಡೆಮಿಯ ವಿವಿಧ ಅವತಾರಗಳು

ಇತ್ತೀಚೆಗೆ ನನ್ನ ಗೆಳೆಯರೊಬ್ಬರು 'ಕರ್ನಾಟಕ ಸಾಹಿತ್ಯ ಅಕಾಡೆಮಿ ತಲುಪಿರುವ ದುಸ್ಥಿತಿ' ನೋಡಿ ಸರ್ ಎಂಬ ವಾಟ್ಸಪ್ ಸಂದೇಶದೊಂದಿಗೆ ಒಂದು ಭಾಷಣದ ಧ್ವನಿ ಮುದ್ರಣವನ್ನು ಕಳಿಸಿದ್ದರು. ಸಾಹಿತ್ಯ ಅಕಾಡೆಮಿ ಈಗಲ್ಲ, ಎಂದೋ ದುಸ್ಥಿತಿ ತಲುಪಿದೆ, ಏಕೆಂದರೆ ಅಕಾಡೆಮಿಗೆ ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಮಹಿಳಾ ಕೋಟ, ದಲಿತ ಕೋಟ, ಹಿಂದುಳಿದ ವರ್ಗಗಳ ಕೋಟ, ಪ್ರಾದೇಶಿಕ ಕೋಟ ಎಂದು ಅಕಾಡೆಮಿ ಅಧ್ಯಕ್ಷರ ಮತ್ತು ಸದಸ್ಯರ ನೇಮಕಾತಿ ಮಾಡಿದಾಗಿನಿಂದ ಅದರ ಆಟಪಾಠಗಳನ್ನು ನೋಡುತ್ತಿರುವ ನಾನು ಅದರ ಚಟುವಟಿಕೆಗಳಿಂದ ದೂರವೇ ಉಳಿದಿದ್ದೆ. ಅಲ್ಲಿ ಸಾಹಿತ್ಯ ಕಡಿಮೆ ಇದ್ದು ಸಾಹಿತ್ಯದ ಹೆಸರಿನ ರಾಜಕಾರಣವೇ ಹೆಚ್ಚಾಗಿತ್ತು. ಈಗ ನನ್ನ ಸ್ನೇಹಿತರು ಕಳುಹಿಸಿದ ಭಾಷಣ ಅಕಾಡೆಮಿಯು ಆಗಸ್ಟ್‌ನಲ್ಲಿ ಸ್ವಾತಂತ್ರ್ಯೋತ್ಸವದ ಅಂಗವಾಗಿ ಆಯೋಜಿಸಿದ್ದ ಜಿಲ್ಲಾವಾರು ಭಾಷಣಮಾಲಿಕೆಯ ಒಂದು ಭಾಷಣವಾಗಿತ್ತು. ಈ ಭಾಷಣವನ್ನು ಆಲಿಸತೊಡಗಿದ ಆರಂಭದಲ್ಲೇ ಗೆಳಯರು ಪ್ರಸ್ತಾಪಿಸಿದ್ದ 'ದುಸ್ಥಿತಿ'ಯ ಪರಿಚಯವಾಯಿತು. ಭಾಷಣ ಮಾಡುತ್ತಿದ್ದವರು ಆರ್. ಎಸ್. ಎಸ್. ನ ಪದಾಧಿಕಾರಿಗಳಲ್ಲಿ ಒಬ್ಬರು. ಭಾಷಣದ ಮುನ್ನ ಅವರನ್ನು 'ಇವರು ಆರ್.ಎಸ್ ಎಸ್.ನ ಹಿರಿಯ ಪದಾಧಿಕಾರಿ ಎಂದು ಪರಿಚಯಿಸುವುದು ನಮ್ಮ ಹೆಮ್ಮೆ' ಎಂದು ಎಬಡಾತಬಡಾ ಕನ್ನಡ ಮಾತನಾಡುತ್ತಿದ್ದ ಕಾರ್ಯಕ್ರಮದ ನಿರೂಪಕ ಪರಿಚಯಿಸುತ್ತಾ ಅವರ ಗುಣಗಾನದಲ್ಲಿ ತೊಡಗಿದ್ದನು. ನಂತರ ಭಾಷಣ ಆರಂಭವಾಯಿತು. ಅವರ ಭಾಷಣದ ಮೊದಲ ವಾಕ್ಯವೇ 'ನಮ್ಮ ಸ್ವಾತಂತ್ರ್ಯ ಹರಣವಾದದ್ದು ಬ್ರಿಟಿಷರಿಂದ ಎಂಬ ತಪ್ಪು ಇತಿಹಾಸವನ್ನು ಈವರೆಗೆ ನಮಗೆ ಹೇಳಲಾಗಿದೆ. ಆದರೆ ಸತ್ಯವೆಂದರೆ ನಮ್ಮ ಸ್ವಾತಂತ್ರ್ಯಹರಣವಾಗಿದ್ದು ಹದಿಮೂರನೇ ಶತಮಾನದಲ್ಲಿ ನಡೆದ ಮೊಘಲರ ಆಕ್ರಮಣದಿಂದ' ಎಂದು ಘೋಷಿಸಿದಾಗ ಮುಂದೇನಿದೆ ಎಂಬುದು ನನಗೆ ಪೂರ್ತಿ ಅರಿವಾಯಿತು.

ಇತಿಹಾಸದ ಈ ಪುನರ್ ನಿರೂಪಣೆಯ ಸರಿ-ತಪ್ಪುಗಳು ಅತ್ತ ಇರಲಿ, ಸ್ವಾತಂತ್ರ್ಯ ಹೋರಾಟದ ಬಗ್ಗೆ ಭಾಷಣಗಳನ್ನು ಏರ್ಪಡಿಸುವುದು ಸಾಹಿತ್ಯ ಅಕಾಡೆಮಿಯ ಕೆಲಸವೇ? ಎಂಬ ಪ್ರಶ್ನೆಯನ್ನು ನಾವು ಕೇಳಿಕೊಳ್ಳಬೇಕಿದೆ. ಸ್ವಾತಂತ್ರ್ಯಹೋರಾಟ ಕುರಿತು ಬಂದಿರುವ ಸಾಹಿತ್ಯ ಕೃತಿಗಳನ್ನು ಬಗೆಗೆ ಅಕಾಡೆಮಿ ಕಾರ್ಯಕ್ರಮ ಆಯೋಜಿಸಬಹುದೇ ಹೊರತು ಹೀಗೆ ಸ್ವಾತಂತ್ರ್ಯ ಹೋರಾಟದ ತಮ್ಮದೇ ನಿರೂಪಣೆ ಮಾಡುವ ಭಾಷಣಗಳನ್ನು ಏರ್ಪಡಿಸುವುದು ರಾಜಕಾರಣ ಎನಿಸುತ್ತದೆ.ಸಾಹಿತ್ಯ ಅಕಾಡೆಮಿಯು ಕನ್ನಡ ಜನತೆಯ ಸರ್ವತೋಮುಖಿ ಆರೋಗ್ಯ ದೃಷ್ಟಿಯಿಂದ ಆರೋಗ್ಯ ಭಾಷಣ ಮಾಲಿಕೆಯ ನಂತರ ಈಗ ಸ್ವಾತಂತ್ರ್ಯ ಹೋರಾಟದ ಬಗ್ಗೆ ತಿಳುವಳಿಕೆ ಕೊಡ ಹೊರಟಿದೆ! ಇಷ್ಟರಲ್ಲೇ ಅದು ವೈವಾಹಿಕ ಜೀವನದ ನಿರ್ವಹಣೆ, ಒಣ ಬೇಸಾಯ ಪದ್ಧತಿ, ಕೊಟ್ಟಿಗೆ ಗೊಬ್ಬರ ತಯಾರಿಕೆ, ಕುರಿ ಸಾಕಣೆ ಇತ್ಯಾದಿ ಜನೋಪಯೋಗಿ ವಿಷಯಗಳ ಬಗೆಗೂ ಭಾಷಣ ಮಾಲಿಕೆಗಳನ್ನು ಆರಂಭಿಸಬಹುದು, ಆದರೆ ಈ ಬಗ್ಗೆ ಮಾತನಾಡಿದರೆ ಕೇಳುವವರಾದರೂ ಯಾರು? ಸ್ಪಂದಿಸುವವರಾದರೂ ಯಾರು? ಎಲ್ಲ ಸೂಕ್ಷ್ಮಗಳನ್ನೂ ಕಳೆದುಕೊಂಡ ಸ್ಥಿತಿಯಲ್ಲಿ ನಾವಿದ್ದೇವೆ. ಈಗ ಇಂತವರದ್ದೇ ರಾಜ್ಯಭಾರ, ಎಲ್ಲಕ್ಕೂ, ಎಲ್ಲರಿಗೂ ಸಲ್ಲಬಲ್ಲ ಕೆಲ ಸಾಹಿತಿಗಳ ಹೊರತಾಗಿ ಇನ್ನಾವ ಸಾಹಿತಿಗಳೂ ಸಾಹಿತ್ಯ ಅಕಾಡೆಮಿಯ ಬಳಿ ಸುಳಿಯಲು ಮುಜುಗರಪಡುವಷ್ಟು ಅದರ ಬಿಂಬ ಕುಸಿದುರುವಾಗ ಅದರ ಕುರ್ಚಿಗಳ ಮೇಲೆ ಕೂತವರಾದರೂ ಏನು ಮಾಡಿಯಾರು?

## ಕನ್ನಡಕ್ಕೊಂದು ಅಪರೂಪದ ಜಯ

ಕಳೆದ ಬಾರಿ ನಾನು ರಾಷ್ಟ್ರೀಯ ಶಿಕ್ಷಣ ನೀತಿಯ ಭಾಗವಾಗಿ ಪದವಿಶಿಕ್ಷಣ ಹಂತದಲ್ಲಿ ಕನ್ನಡಕ್ಕೆ ಆಗಿರುವ ಹಿನ್ನಡೆಯ ಬಗೆಗೆ 'ಕನ್ನಡ ಅನ್ನದ ಭಾಷೆಯಾದರೂ ಕಲ್ಲು ತಪ್ಪಿದ್ದಲ್ಲ' ಎಂಬ ಟಿಪ್ಪಣಿ ಬರೆದಿದ್ದೆ. ಆದರೆ ಇತ್ತೀಚಿನ ಸುದ್ದಿಯೆಂದರೆ ಪದವಿ ಶಿಕ್ಷಣ ಹಂತದಲ್ಲಿ ಕನ್ನಡಕ್ಕೆ ಆಗಿದ್ದ ಹಿನ್ನಡೆಯನ್ನು ಸರಿಪಡಿಸಲಾಗಿದೆಯಲ್ಲದೆ (ಒಂದು ವರುಷಕ್ಕೆ ಇಳಿಸಿದ್ದ ಭಾಷಾಶಿಕ್ಷಣದ ಅವಧಿಯನ್ನು ಈಗ ಮೊದಲಿನಂತೆ ಮರಳಿಸಲಾಗಿದೆ)ಕರ್ನಾಟಕದಲ್ಲಿ ಪದವಿಮಟ್ಟದಲ್ಲಿ ಎಲ್ಲರಿಗೂ ಕನ್ನಡವನ್ನು ಕಡ್ಡಾಯ ಮಾಡಲಾಗಿದೆ.




ಕನ್ನಡೇತರರು ಕೂಡ ಈಗ ಒಂದು ವರುಷದ ವ್ಯಾವಹಾರಿಕ ಶಿಕ್ಷಣ ಪಠ್ಯ ಕ್ರಮವನ್ನು ಅಭ್ಯಸಿಸಬೇಕಾಗಿದೆ. ಕನ್ನಡ ದಿನೇದಿನೇ ಸೊರಗತೊಡಗಿದ್ದ ಈ ದಿನಗಳಲ್ಲಿ ಇದು ನಮ್ಮಂತವರಿಗೆ ದೊಡ್ಡ ಸುದ್ದಿಯೇ. ಇದು ಖಂಡಿತಾ ಯಾವುದೋ ಕಡೆಯಿಂದ ಒತ್ತಡದ ಪರಿಣಾಮವೇ ಆಗಿರಬೇಕು. ಇದು ಯಾರದ್ದೇ ಒತ್ತಡವಾಗಿರಲಿ, ಅವರು ಅಭಿನಂದನಾರ್ಹರು.

## ಗುರುವೂ ಇಲ್ಲ!




ಕೋವಿಡ್ ಹಾವಳಿ ಉಂಟುಮಾಡಿರುವ ಹಲವಾರು ಹಾವಳಿಗಳಲ್ಲಿ ವೆಬಿನಾರ್ ಹಾವಳಿಯೂ ಒಂದು. ಈ ವೆಬಿನಾರ್‌ನಲ್ಲಿ ಭಾಗವಹಿಸಿರಿ, ಆ ವೆಬಿನಾರನ್ನು ನೋಡಿ/ಕೇಳಿ ಪ್ರತಿಕ್ರಿಯಿಸಿ ಎಂಬ ಸಂದೇಶಗಳು, ಆಗ್ರಹಗಳು ಯಾರದ್ದಾದರೂ ಶಾಂತಿಯನ್ನು ಕದಡುವಂತಿದೆ. ಈ ವೆಬಿನಾರ್‌ಗಳಲ್ಲಿ ಭಾಗವಹಿಸುವುದೆಂದರೆ ಏನು? ನಿಮ್ಮ ಫೋನನ್ನೋ, ಕಂಪ್ಯೂಟರ್ ಅನ್ನೋ ಎದುರಿಗಿಟ್ಟುಕೊಂಡು ಕೂತು, ನಿಮಗೆ ಸೂಚನೆ ಬಂದಾಗಲೋ ಅಥವಾ ನಿಮ್ಮ ಇಚ್ಛೆಗೆ ಅನುಸಾರವಾಗಿಯೋ ಮಾತಾಡುವ ಕೆಲಸ ತುಂಬಾ ಕಷ್ಟದ್ದು. ಒಂದು ಸಜೀವ ವಾತಾವರಣವಿಲ್ಲದೇ ಸರಿಯಾದ ಮಾತು ಹೊರಡುವುದಿಲ್ಲ. ಹಾಗೆ ಆಡಿದ ಮಾತಿಗೂ ಒಂದು ಸಹಜ ಸ್ಫೂರ್ತ ಶಕ್ತಿಯಿರುವುದಿಲ್ಲ. ನಮ್ಮ ಮಾತುಗಳ ಬಗ್ಗೆ ನಮಗೇ ಒಮ್ಮೊಮ್ಮೆ ಅನುಮಾನ, ಮುಜುಗರಗಳಾಗುವುದೂ ಉಂಟು. ಒಂದೆರಡು ವೆಬಿನಾರುಗಳಲ್ಲಿ ಭಾಗವಹಿಸಿರುವ ನನಗೆ ಆಗಿರುವ ಸಂತೋಷಕ್ಕಿಂತ ಸುಸ್ತೇ ಹೆಚ್ಚು, ಇದೊಂದು ಮಿಥ್ಯಾಲೋಕದಲ್ಲಿ, ಒಂದು ನಿರ್ವಾತದಲ್ಲಿ ನಡೆಸಿದ ವ್ಯವಹಾರವೆನಿಸುತ್ತದೆ. ಆದರೆ ಬಹಳ ಜನರಿಗೆ ಹಾಗೆ ಅನಿಸಿದಂತಿಲ್ಲ. ಏಕೆಂದರೆ, ದಿನೇದಿನೇ ಈ ವೆಬಿನಾರುಗಳ ಸಂಖ್ಯೆ ಹೆಚ್ಚುತ್ತಿದೆ. ಈಗ ಎಲ್ಲವೂ ಆನ್ ಲೈನ್ ಮೂಲಕವೇ ನಡೆಯಲಾರಂಭಿಸಿವೆ. ಶಾಲೆಗಳಲ್ಲಿ, ಕಾಲೇಜುಗಳಲ್ಲಿ, ನೇರ ತರಗತಿಗಳ ಅವಧಿಗಳೇ ಕಡಿಮೆಯಾಗುತ್ತಿದ್ದು ಆನ್ ಲೈನ್ ಪಾಠಗಳು ಅಧಿಕೃತವಾಗಿಯೇ ಅಸ್ತಿತ್ವಕ್ಕೆ ಬರುತ್ತಿವೆ. ನೇರ ತರಗತಿಯ ಪಾಠದ ಕೊಠಡಿಯಲ್ಲೂ ಇತ್ತೀಚಿನ ದಿನಗಳಲ್ಲಿ ಆನ್ ಲೈನ್ ಸಾಧನಗಳನ್ನು ಬಳಸಿ ಪಾಠ-ಪ್ರವಚನಗಳು ನಡೆಯುತ್ತಿವೆ. ಈ ಬಗ್ಗೆ ಮಾತನಾಡಿದ ಅಧ್ಯಾಪಕ ಗೆಳೆಯರೊಬ್ಬರು ಇಂತಹ ಶಿಕ್ಷಣ ವ್ಯವಸ್ಥೆಯಿಂದ ಪಾರಂಪರಿಕ ಶಿಕ್ಷಣವ್ಯವಸ್ಥೆಯಲ್ಲಿದ್ದ ಗುರು-ಶಿಷ್ಯ ಸಂಬಂಧವೇ ನಶಿಸಿಹೋಗುತ್ತಿದೆ. ಇಂದು ಗುರುವೂ ಇಲ್ಲ, ಶಿಷ್ಯನೂ ಇಲ್ಲ ಎಂಬ ಸ್ಥಿತಿ ಉಂಟಾಗಿದೆ ಎಂದು ನುಡಿದರು. ಶಿಕ್ಷಣವ್ಯವಸ್ಥೆಯನ್ನು ಕ್ರಮೇಣ ಎಲೆಕ್ಟ್ರಾನಿಕ್ ಸಂವಹನ ವ್ಯವಸ್ಥೆಯನ್ನಾಗಿ ಮಾರ್ಪಡಿಸಬಯಸುವ ಹೊಸ ಶಿಕ್ಷಣ ನೀತಿ ಜ್ಞಾನವನ್ನು ಡಿಜಿಟಲೀಕರಿಸಿ ಅದನ್ನು ಮಾಹಿತಿಯ ಮಟ್ಟಕ್ಕೆ ಇಳಿಸಿದೆ. ಹೀಗಾಗಿ ಇಂದು ಶಿಕ್ಷಣವೆಂದರೆ ಮಾಹಿತಿಯ ರಾಶಿಯನ್ನು ಸಂಪಾದಿಸುವುದು. ಶಿಕ್ಷಣವನ್ನು ಮಾಹಿತಿ ತಂತ್ರಜ್ಞಾನದ ಉದ್ಯಮದ ಒಂದು ಭಾಗವನ್ನಾಗಿ ಮಾಡತೊಡಗಿರುವ ಈ ಹೊಸ ಶಿಕ್ಷಣ ನೀತಿ ನಮ್ಮ ಮೇಷ್ಟ್ರುಗಳನ್ನು ಶಿಕ್ಷಣ ಎಂಬ ಎಲೆಕ್ಟ್ರಾನಿಕ್ ಎಂಬ ಆಟದ ಸಾಮಾನಿನಂತೆ ಮಾಡಿದೆ.

## ಗುಡಿಹಳ್ಳಿ




**ನಾಗರಾಜ** ಹಿರಿಯ ಪತ್ರಕರ್ತ ಮತ್ತು ಹವ್ಯಾಸಿ ರಂಗಭೂಮಿ ಕಾರ್ಯಕರ್ತ ಗೆಳೆಯ ಗುಡಿಹಳ್ಳಿ ನಾಗರಾಜ ತಮ್ಮ ಅರವತ್ತೈದನೇ ವಯಸ್ಸಿನಲ್ಲಿ ನಮ್ಮನ್ನಗಲಿ ಹೋಗಿದ್ದಾರೆ. ನಮ್ಮ ವೃತ್ತಿ ರಂಗಭೂಮಿಯನ್ನು ಅದರ ಇತಹಾಸ, ಅದರ ಕಲಾವಿದರ ಜೀವನವನ್ನು ಅವರಷ್ಟು ಆಳವಾಗಿ ಅಭ್ಯಸಿಸಿದವರು, ಆ ಬಗ್ಗೆ ಬರೆದವರು ಇತ್ತೀಚಿನ ದಿನಗಳಲ್ಲಿ ನಮ್ಮ ನಡುವೆ ಕಮ್ಮಿ ಎಂದೇ ಹೇಳಬೇಕು. ನಮ್ಮ ವೃತ್ತಿರಂಗಭೂಮಿಯ ವರ್ತಮಾನದ ಘಟನಾವಳಿಗಳ ಬಗೆಗೆ ಆಗಾಗ್ಗೆ ಪತ್ರಿಕೆಗಳಲ್ಲಿ ಬರೆಯುತ್ತಿದ್ದ ನಾಗರಾಜ್ ಪತ್ರಕರ್ತ ವೃತ್ತಿಯಿಂದ ನಿವೃತ್ತಿಯಾದ ನಂತರ ತಾನೇ ಸಂಪಾದಿಸತೊಡಗಿದ್ದ 'ನೇಪಥ್ಯ' ಎಂಬ ತಿಂಗಳಪತ್ರಿಕೆಯಲ್ಲೂ ತಮ್ಮ ರಂಗಭೂಮಿ ಪ್ರೀತಿಯನ್ನು ಮೆರೆಯುತ್ತಿದ್ದರು. ಹವ್ಯಾಸಿ ರಂಗ ಚಟುವಟಿಕೆಗಳು ಹೆಚ್ಚೂ-ಕಡಿಮೆ ಕಾಣೆಯಾಗುತ್ತಿರುವ ಈ ದಿನಗಳಲ್ಲಿಯೂ ರಂಗಭೂಮಿಗೆ ಮೀಸಲಾದ ಇಂತಹ ಪತ್ರಿಕೆಗಳನ್ನು ನಡೆಸುವ ಕೆಲಸ ಕಷ್ಟದ್ದೇ ಸರಿ. ಅಂತಹ ಕೆಲಸವನ್ನು ನಿಭಾಯಿಸುತ್ತಲೇ ಅವರು ಅಸು ನೀಗಿದ್ದಾರೆ. ಅವರಿಗೆ 'ಹೊಸ ಮನುಷ್ಯ' ಶ್ರದ್ಧಾಂಜಲಿಗಳನ್ನು ಸಲ್ಲಿಸುತ್ತದೆ.

-ಡಿಎಸ್ಸೆನ್

## ಪುಸ್ತಕಾವಲೋಕನ

ಪು:**ಮಾರ್ಗಾನ್ವೇಷಣೆ** (ಸಾಹಿತ್ಯ ಸಂಶೋಧನೆಯ ರೀತಿ–ನೀತಿ) ಲೇ:**ನಿತ್ಯಾನಂದ ಬಿ.ಶೆಟ್ಟಿ** ಪ್ರ: **ಬೆಸುಗೆ ಪಬ್ಲಿಕೇಶನ್ಸ್**, ತುಮಕೂರು(೯೭೦೧೬೨೨೦೭) ಪು:**೩೦೪ ಬೆ:ರೂ.೩೫೦/–.**

### ಸಂಶೋಧನೆ ಬರೀ ವಿಧಾನಕ್ರಮವಲ್ಲ ಅದೊಂದು ಸಂಕಥನ



**ಮಾ**ರ್ಗಾನ್ವೇಷಣೆ': ಸಾಹಿತ್ಯ ಸಂಶೋಧನೆಯ ರೀತಿ–ನೀತಿ ಎಂಬೀ ಹೊತ್ತಗೆಯು ಮುಖ್ಯವಾಗಿ ಸಂಶೋಧನೆಯ ಹೆಜ್ಜೆ–ಜಾಡು, ವಿಧಾನ–ವಿಧಾನಕ್ರಮ, ಆರಂಭದ ದಾರಿಗಳು, ವಿಭಿನ್ನ ನೆಲೆಗಳು ಹಾಗೂ ಸಂಶೋಧನ ಸಂಸ್ಕೃತಿ ಎಂಬೆಲ್ಲ ಅಧ್ಯಾಯಗಳನ್ನೊಳಗೊಂಡಿದೆ. ಪದವಿ ಮತ್ತು ಸಂಶೋಧನೆಯ ಪ್ರಾಥಮಿಕ ತಿಳಿವಳಿಕೆಯಿಂದ ಇಲ್ಲಿಯ ಚರ್ಚೆಗಳು ಶುರುವಾಗುತ್ತವೆ. ಇಂತಹ ತಿಳಿವಳಿಕೆಯ ಉದ್ದೇಶ ಏನು? ಯಾಕೆ? ಮತ್ತು ಹೇಗೆ? ಎಂಬ ಪ್ರಶ್ನೆಗಳು, ಸಾಹಿತ್ಯ ಸಂಶೋಧನೆಯ ಇಡೀ ತಾತ್ವಿಕ ಮತ್ತು ಪ್ರಾಯೋಗಿಕ ಚರ್ಚೆಗಳ ಸ್ವರೂಪವನ್ನು ರೂಪಿಸುತ್ತವೆ. ಜ್ಞಾನದ ಭಾಷೆಯ ಸ್ವರೂಪ, ಭಾಷೆ ಮತ್ತು ವಿಚಾರ ಸಂವಹನಕ್ಕೆ ಸಂಬಂಧಿಸಿದ ಪ್ರಶ್ನೆಗಳೂ ಇಲ್ಲಿ ಮಹತ್ವವನ್ನು ಪಡೆದುಕೊಳ್ಳುತ್ತವೆ. ಮಾನವಿಕ, ಸಮಾಜವಿಜ್ಞಾನಗಳು, ನ್ಯಾಯಶಾಸ್ತ್ರ, ಥಿಯಾಲಜಿ, ವಿಜ್ಞಾನ ಮತ್ತು ಫಿಲಾಸಫಿ ಮೊದಲಾದವು ಪಶ್ಚಿಮದ ವಿಚಾರಧಾರೆಗಳನ್ನು ರೂಪಿಸಿದ ಆಧಾರ ಸ್ತಂಭಗಳು ಎನ್ನುವ ಹೇಳಿಕೆ ಈ ಪುಸ್ತಕದ ಪ್ರಮುಖ ಚಿಂತನೆಗಳನ್ನು ಒಡಮೂಡಿಸುವುದಕ್ಕೆ ಒತ್ತಾಸೆಯಾಗಿವೆ. ಜ್ಞಾನಪರ್ವ, ಆಧುನಿಕತೆ ಮತ್ತು ಬಂಡವಾಳಶಾಹಿ ಎಂಬೀ ಪರಿಕಲ್ಪನೆಗಳು ಪುಸ್ತಕದುದ್ದಕ್ಕೂ ಉಲ್ಲೇಖಗೊಂಡಿವೆ. ಪರಿಣಾಮವಾಗಿ, ಸಂಶೋಧನೆಯ ತಾತ್ವಿಕತೆಯನ್ನು ಪಶ್ಚಿಮದ ಕಣ್ಣೋಟದಲ್ಲಿ ವ್ಯಾಖ್ಯಾನಿಸಲಾಗಿದೆ. ದಿಟ, ಕನ್ನಡ ಸಂಶೋಧನೆಯ ಪೂರ್ವಸೂರಿಗಳ ಪ್ರಸ್ತಾಪ ಮತ್ತು ಅವರ ವೈಚಾರಿಕ ವಿನ್ಯಾಸಗಳನ್ನೂ ಪರಿಭಾವಿಸಲಾಗಿದೆ.

ಯಾವುದೇ ಅಧ್ಯಯನ ವಸ್ತುವಿನ ಅಗತ್ಯವಾದ ತಾತ್ವಿಕತೆ ಮತ್ತು ವಿಶ್ಲೇಷಣೆಯ ಬಗೆಗಳು ಹೇಗಿರಬೇಕು? ಅಂದರೆ ಸಂಶೋಧನೆ ಎಂದರೇನು? ವಿಧಾನ ಯಾವುದು (ಮೆಥಡ್)? ವಿಧಾನಕ್ರಮ ಯಾವುದು (ಮೆಥಡಾಲಜಿ)? ಇಲ್ಲಿ ಬಳಸಿಕೊಳ್ಳಬಹುದಾದ ತತ್ವ ಮತ್ತು ಸಿದ್ಧಾಂತಗಳಾವವು? ಏಕೆಂದರೆ ವಿಚಾರವನ್ನು ವಿವರಿಸುವ ಬಗೆಯಲ್ಲಿ ಈ ಎಲ್ಲ ತತ್ವ ಮತ್ತು ಸೈದ್ಧಾಂತಿಕ ನಿಲುವುಗಳು ಅವಶ್ಯವಾಗಿ ಬೇಕಾಗುತ್ತವೆ. ಇವುಗಳ ಪರಿಣಾಮಗಳನ್ನು ಯಾವ ವಿಧಾನದಲ್ಲಿ ಗ್ರಹಿಸಲಾಗುತ್ತದೆ ಎಂಬುದಿಲ್ಲಿ ಮುಖ್ಯ. ಸಂಶೋಧನೆಯ ಫಲಿತಗಳನ್ನು ಅರಿಯುವ ಕ್ರಮಗಳನ್ನು ಬಹುತೇಕವಾಗಿ ಕಾರ್ಯಕಾರಣ ಸಂಬಂಧ, ಪ್ರಕ್ರಿಯೆ ಮೀಮಾಂಸೆ ಹಾಗೂ ಪರಿಣಾಮ ಮೀಮಾಂಸೆ ಎಂದು ವಿಂಗಡಿಸಲಾಗುತ್ತದೆ. ಲಿಂಗ, ಸಮಾಜ, ಸಂಸ್ಕೃತಿ, ಧರ್ಮ, ಸಾಹಿತ್ಯ, ಚರಿತ್ರೆ, ನಾಗರಿಕತೆ, ಭಾಷೆ, ಶಿಕ್ಷಣ ಮುಂತಾದ ವಿದ್ಯಮಾನಗಳನ್ನು ಕುರಿತ ಸಂಶೋಧನೆಯ ಫಲಿತಗಳನ್ನು ಯಾವ ವಿಧಾನಕ್ರಮದಲ್ಲಿ ಅರಿಯುತ್ತೇವೆ ಎನ್ನುವುದನ್ನು ಆಧರಿಸಿ, ಸಾಂಸ್ಕೃತಿಕ ಚಹರೆಗಳು ನೆಲೆಗೊಳ್ಳುತ್ತವೆ. ಈ ತಾತ್ವಿಕತೆಗೆ ಸಂಬಂಧಿಸಿದ ಇಲ್ಲಿಯ ಚರ್ಚೆ–ಸಂವಾದಗಳು ಅತ್ಯಂತ ಪರಿಣಾಮಕಾರಿಯಾಗಿವೆ. ಈ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳುವಲ್ಲಿ, ಆಧುನಿಕತೆ, ಜ್ಞಾನಪರ್ವ, ಸಾಂಪ್ರದಾಯಿಕತೆ, ಪೌರಸ್ತ್ಯತೆ, ವಸಾಹತುಶಾಹಿ ಹಾಗೂ ಪಾಶ್ಚಿಮಾತ್ಯ ಚಿಂತಕರನ್ನು ಬಹುವಾಗಿ ಆಶ್ರಯಿಸಲಾಗಿದೆ. ಮಾನವಿಕ, ಸಾಮಾಜಿಕ ವಿಜ್ಞಾನಗಳ ಕುರಿತ ಸಂಶೋಧನೆಯ ವಿಧಾನ ಮತ್ತು ವಿಧಾನಕ್ರಮಗಳನ್ನು ಅರ್ಥೈಸಲು ಬಳಸಿಕೊಂಡಿರುವ ತಾತ್ವಿಕ ವಿನ್ಯಾಸಗಳಲ್ಲಿ ದೋಷಗಳು ಇಲ್ಲವಾದರೂ ಅವುಗಳನ್ನು ನೆಲೆಗೊಳಿಸುವ ಸಾಂಸ್ಕೃತಿಕ ಪರಿಪ್ರೇಕ್ಷ್ಯ ಮಾತ್ರ ಕರ್ನಾಟಕವಾಗಿದೆ. ಆದರೆ ವಿಚಾರ ಮಂಡಿಸುವ ಬಗೆ, ಅದಕ್ಕೆ ಲೇಖಕರು ಬಳಸಿಕೊಳ್ಳುವ ತಾತ್ವಿಕ ಚೌಕಟ್ಟುಗಳು ಮತ್ತು ಪರಿಕಲ್ಪನೆಗಳು ಹಾಗೂ ಇವುಗಳನ್ನು ವಿವರಿಸಿ–ವ್ಯಾಖ್ಯಾನಿಸುವ ಬಗೆಗಳು ಸ್ಪಷ್ಟವಾಗಿವೆ.

ಕನ್ನಡ ಸಂಶೋಧನೆಯ ಆರಂಭದ ದಾರಿಗಳು ಎಂಬ ಅಧ್ಯಾಯದಲ್ಲಿ ಕನ್ನಡ ಸಂಶೋಧನೆಯ ತಾತ್ವಿಕತೆಯ ಸ್ಥೂಲ ಪರಿಚಯವಿದೆ. ಈ ವಿದ್ವಾಂಸರು ಅನುಸರಿಸಿದ ವಿಧಾನ ಮತ್ತು ವಿಧಾನಕ್ರಮದ ಕುರಿತ ಚರ್ಚೆಗಳನ್ನು ಇನ್ನಷ್ಟು ಹಿಗ್ಗಿಸಬಹುದಾಗಿತ್ತು. ಆ ಮುಖೇನ ಅನುಭಾವವಾದ, ಪ್ರತ್ಯಕ್ಷ ಪ್ರಮಾಣವಾದ ಹಾಗೂ ಅನುಭಾವವಾದೀ ವಿಧಾನಕ್ರಮಗಳ ಬಗೆಗಿನ ಪ್ರಾಯೋಗಿಕ ನಿಲುವುಗಳನ್ನು ಮನಗಾಣಬಹುದಾಗಿತ್ತು. ಜೊತೆಗೆ ಕನ್ನಡದ ಪೂರ್ವಸೂರಿಗಳು ರೂಪಿಸಿಕೊಂಡಂತಹ ಸಂಶೋಧನೆಯ ದೇಶಿ ಮಾದರಿಗಳನ್ನು ನಿಕಟವಾಗಿ ಅರಿಯುವುದಕ್ಕೆ ಸಾಧ್ಯವಿತ್ತು. ಅಪಾರವಾದ ಮಾಹಿತಿ ಸಂಗ್ರಹವಿದೆ. ಆದರೆ ಈ ವಿದ್ವಾಂಸರು ಬಳಸಿಕೊಂಡ ಆಕರಗಳ ಸ್ವರೂಪ, ಗ್ರಂಥ ಸಂಪಾದನೆಯ ಬಗೆಗಳನ್ನು ಕುರಿತು ಇನ್ನಷ್ಟು ಮುತುವರ್ಜಿಯನ್ನು ವಹಿಸಬೇಕಿತ್ತು. ಅಂದರೆ ಆಧುನಿಕ ಸಾಹಿತ್ಯ ಸಂಶೋಧನೆಗೆ ಪೂರಕವಾದ ದಾರಿಗಳನ್ನು ರೂಪಿಸಲು ಒತ್ತಾಸೆಯಾಗುತ್ತಿತ್ತು. ದಿಟ, ಇಲ್ಲಿ ನಿರ್ದಿಷ್ಟ ನಿಲುವನ್ನು ತೆಗೆದುಕೊಂಡು ಸಂಶೋಧನೆಯ ಮಾರ್ಗಗಳನ್ನು ಗುರುತಿಸಲಾಗಿದೆ. ಆದರೆ ಅವುಗಳನ್ನು ಪರಾಮರ್ಶಿಸುವ ಗೋಜಿಗೆ ಹೋಗದೇ, 'ಸಾಹಿತ್ಯ–ಶಾಸನ, ಗ್ರಂಥಸಂಪಾದನೆ, ಇತ್ಯಾದಿಗಳ ಅಧ್ಯಯನ ಮಾಡುವಾಗ ರಾಜಕೀಯವಾದ ಎಚ್ಚರವನ್ನು ತಾಳಬೇಕು' (ಪು.೧೩೫). ಎಂದು ಹೇಳುತ್ತಲೇ ಸಾಂಸ್ಕೃತಿಕ ಸರಿತನದ ನಿಲುವುಗಳನ್ನು ಗಂಭೀರವಾಗಿ ಪರಿಗಣಿಸಲಾಗಿಲ್ಲ. ಜ್ಞಾನ ಮತ್ತು ಅಧಿಕಾರ ಸಂಬಂಧಗಳ ಸ್ವರೂಪ ಎಂತಹದು ಎಂಬುದನ್ನು ಸಂಶೋಧನೆಯ ಮೂಲಕ ಕಾಣುವ ಚಹರೆಗಳನ್ನು ಮಾತ್ರ ಅತ್ಯಂತ ನಿಚ್ಚಳವಾಗಿ ಗುರುತಿಸಲಾಗಿದೆ.

ಕನ್ನಡ ಸಾಹಿತ್ಯ ಸಂಶೋಧನೆಯ ವಿಭಿನ್ನ ನೆಲೆಗಳನ್ನು ಗುರುತಿಸುವಲ್ಲಿ ಹಲವು ಬಗೆಯ ವಿಶಿಷ್ಟ ಚರ್ಚೆಗಳನ್ನು ಬೆಳೆಸಲಾಗಿದೆ. ಕನ್ನಡ ಚಿಂತನೆಯ ನಕ್ಷೆಯನ್ನು ನಿಗದಿಪಡಿಸುವ ವೈಚಾರಿಕ ಕಣ್ಣೋಟಗಳು ಇಲ್ಲಿ ಪ್ರಕಟಗೊಂಡಿವೆ. ಕೆ.ಬಿ ಪಾಠಕ, ಗೋವಿಂಧ ಪೈ, ಮುಳಿಯ ತಿಮ್ಮಪ್ಪಯ್ಯ, ಎಸ್ ಶೆಟ್ಟರ್, ಕೀರ್ತಿನಾಥ ಕುರ್ತಕೋಟಿ, ಕೆ.ವಿ ಸುಬ್ಬಣ್ಣ, ಡಿ.ಎನ್.ಎಸ್ ಭಟ್, ಕೆ.ವಿ.ನಾರಾಯಣ, ಡಿ.ಆರ್ ನಾಗರಾಜ, ವಿಜಯಾ ದಬ್ಬೆ, ಎಚ್.ಎಸ್ ಶ್ರೀಮತಿ, ಶೆಲ್ಡನ್ ಪೊಲಾಕ್, ಶಿವರಾಮ ಪಡಿಕ್ಕಲ್ ಮೊದಲಾದ ವಿದ್ವಾಂಸರ ಮಹತ್ವದ ಸಂಶೋಧನೆಗಳನ್ನು ಒಂದು ಬಗೆಯ ಕನ್ನಡ ಸಂಶೋಧನೆಯ ಮಾದರಿಗಳನ್ನಾಗಿ ವಿಶ್ಲೇಷಿಸಲಾಗಿದೆ. ವಿಶೇಷವಾಗಿ ಕೆವಿಎನ್ ಅವರ ತಾತ್ವಿಕತೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ವಿವರಿಸಲಾಗಿದೆ. ಆದರೆ ಕಿರಿಯ ತಲೆಮಾರಿನ ಸಂಶೋಧಕರನ್ನು ಇಲ್ಲಿ ಪರಿಗಣಿಸಲಾಗಿಲ್ಲ. ಕೇವಲ ಮನು ದೇವದೇವನ್, ಎನ್.ಎಸ್ ಗುಂಡೂರು ಅವರನ್ನು ಕೆಲವು ಕಡೆ ಉಲ್ಲೇಖಿಸಲಾಗಿದೆ. ವಸಾಹತು ಸನ್ನಿವೇಶದ ಮಿಶನರಿ ವಿದ್ವಾಂಸರು ಹಾಗೂ ವಸಾಹತೋತ್ತರ ಸನ್ನಿವೇಶದ ದೇಶಿ–ಅನ್ಯದೇಶಿ ವಿದ್ವಾಂಸರು ಕೈಗೊಂಡ ಮಹತ್ವದ ಸಂಶೋಧನೆಯ ಚರಿತ್ರೆಯನ್ನು ಇಲ್ಲಿ ಪ್ರಕಟಿಸಲಾಗಿದೆ. ಆದರೆ ಗ್ರಹಿಕೆಯ ಸ್ವರೂಪಗಳನ್ನು ವಿಶ್ಲೇಷಿಸುವಲ್ಲಿ, ಸಂಸ್ಕೃತ, ಪ್ರಾಕೃತ ಹಾಗೂ ಯುರೋಪು ಕೇಂದ್ರಿತ ಚಿಂತನೆಗಳು ಹೇಗೆ ಕನ್ನಡ ಸಾಹಿತ್ಯದ ಸಂಶೋಧನೆಯ ದಾರಿ ಮತ್ತು ಗುರಿಗಳನ್ನು ನಿರ್ಧರಿಸುವಲ್ಲಿ ಒತ್ತಾಸೆಯಾದ ಬಗೆಗಳ ಕಡೆಗೆ ಗಮನಹರಿಸಬೇಕಿತ್ತು.

ಸಂಶೋಧನ ಸಂಸ್ಕೃತಿಯ ಎಚ್ಚರ ಮತ್ತು ವಿವೇಕದ ಮೂಲಕ ಸಾಹಿತ್ಯ ಪಠ್ಯವನ್ನು ಹೇಗೆ ಒಂದು ಸಾಮಾಜಿಕ ಸಂಕಥನವನ್ನಾಗಿ ಪರಿಗಣಿಸಬೇಕು ಎನ್ನುವ ಮಹತ್ವದ ನಿಲುವನ್ನು ಈ ಹೊತ್ತಿಗೆಯಲ್ಲಿ ತಾಳಲಾಗಿದೆ. ಕನ್ನಡ ಸಂಶೋಧನೆಯ ಕ್ಷೇತ್ರದಲ್ಲಿ ಸಂಶೋಧನೆಯನ್ನು ಕುರಿತ ಅತ್ಯಂತ ಮಹತ್ವದ ತಾತ್ವಿಕ ಗ್ರಂಥವೊಂದು ಇದುವರೆಗೂ ಬಂದಿರಲಿಲ್ಲ ಆ ಕೊರತೆಯನ್ನು ಈ ಹೊತ್ತಿಗೆ ನೀಗಿಸಿದೆ. ಆದರೆ ಇಲ್ಲಿಯ ಚರ್ಚೆಗಳನ್ನು ಸಂವಾದದ ಮೂಲಕ ಬೆಳೆಸುವ ಬಗೆಯೇ ಈ ಹೊತ್ತಿಗೆಯ ಒಂದು ವೈಚಾರಿಕ ಮಿತಿಗೆ ಕಾರಣವಾಗಿದೆ.

**–ಮೇಟಿ ಮಲ್ಲಿಕಾರ್ಜುನ**

ಪು: **ಪ್ಲೇಗ್ (ಕಾದಂಬರಿ)** ಲೇ:**ಆಲ್ಬರ್ಟ್ ಕಮೂ** ಕನ್ನಡಕ್ಕೆ:**ಎಚ್.ಎಸ್.ರಾಘವೇಂದ್ರ** ಪ್ರ: **ಚಿಂತನ ಚಿತ್ತಾರ**, ಮೈಸೂರು(೯೪೫೬೬೮೦೮) ಪು:೩೬೬ ಬೆ:ರೂ.೩೮೦/

### ಸಂಕಷ್ಟದಲ್ಲೂ ಬದುಕುವ ಕಲೆ ಕಲಿಸುವ ಕೃತಿ



**ಕೋ**ವಿಡ್ ಎಂಬ ಅನಿರೀಕ್ಷಿತ ಶತ್ರುವಿನ ದಾಳಿಯಿಂದ ಇಡೀ ಜಗತ್ತು ನಲುಗಿದೆ. ಇದರ ಬೆಂಕಿ ಕ್ಷೀಣಿಸಿದ್ದರೂ ಹೊಗೆ ಇನ್ನು ನಿಂತಿಲ್ಲ. ಅಗಲಿಕೆ, ನೋವು, ಕಣ್ಣೀರು, ಪ್ರಯೋಜನವಿಲ್ಲದ ನೆನಪುಗಳ ಜತೆ ಬಾಳ್ವೆ, ಭವಿಷ್ಯದ ಕನಸುಗಳಿಗೆ ಸೋಲು, ಸರಕಾರ, ವೈದ್ಯರು, ಆಸ್ಪತ್ರೆಗಳ ಕಾಳಜಿ ಮತ್ತು ಜಡತೆಯ ಹಾಜರಿ. ಇಂತಹ ಪರಿಸ್ಥಿತಿಯಲ್ಲಿ ಬಹುತೇಕ ಕೋವಿಡ್ ನಿಯಮಾವಳಿಗೆ ಅನುಸಾರವಾಗಿ ಜೀವನ ಸಾಗುತ್ತಿದೆ. ನಾವಿರುವ ಈ ಸನ್ನಿವೇಶದಲ್ಲಿ ಫ್ರಾನ್ಸ್‌ನ ಗಣ್ಯ ಲೇಖಕ ಅಲ್ಬರ್ಟ್ ಕಮೂ(೧೯೧೩–೧೯೬೦), ೧೯೪೭ರಲ್ಲಿ ಬರೆದ 'ದ ಪ್ಲೇಗ್' ಕಾದಂಬರಿಯನ್ನು, ವಿಮರ್ಶೆ ಮತ್ತು ಅನುವಾದ ವಲಯದಲ್ಲಿ ಎಲ್ಲರಿಗೂ ಆಪ್ತ ಎಂದೆನಿಸಿರುವ ಎಚ್.ಎಸ್. ರಾಘವೇಂದ್ರ ರಾವ್ ಅವರು ಕನ್ನಡಕ್ಕೆ ತಂದಿದ್ದಾರೆ. ಪ್ರೊ.ಡಿ. ಎ. ಶಂಕರ್ ಕಮೂನ ಕೃತಿ 'ದ ಔಟ್‌ಸೈಡರ್' ಅನ್ನು 'ಅನ್ಯ' ಎಂಬ ಹೆಸರಿನಲ್ಲಿ ಅನುವಾದ ಮಾಡಿದ್ದರು. ಇದು ೧೯೭೦ರಲ್ಲಿ ಹೊರ ಬಂದಿತ್ತು. ೫೦ ವರ್ಷಗಳ ನಂತರ ಫ್ರಾನ್ಸ್ ಲೇಖಕನ ಪ್ಲೇಗ್ ಕೃತಿ ಕನ್ನಡಿಗರ ಕೈ ಸೇರಿದೆ.

ಶ್ರೇಷ್ಠ ಕೃತಿಗಳು ಎಲ್ಲ ಕಾಲಕ್ಕೂ ಸಲ್ಲುವ ಗುಣವನ್ನು ಹೊಂದಿರುತ್ತವೆ. ಕೋವಿಡ್ ಕೋಟೆಯಲ್ಲಿ ಬಂಧಿಯಾಗಿರುವ ನಮಗೆ ಸಹಜವಾಗಿಯೇ ಬಹುತೇಕ ಇಂಥದ್ದೇ ಸಾಂಕ್ರಾಮಿಕ ರೋಗವಾದ ಪ್ಲೇಗ್ ಪ್ರತಿ ಲೋಕವನ್ನು ಈ ಕೃತಿ ಅನಾವರಣಗೊಳಿಸುತ್ತದೆ. ಒಂದು ತುದಿ

ಪ್ಲೇಗ್, ಮತ್ತೊಂದು ಕೋವಿಡ್ ಆಗಿರುವ ಸಂಕದ ಮೇಲೆ ಈ ಕೃತಿ ಓಡಾಡುವಂತೆ ಮಾಡುತ್ತದೆ; ಸ್ವಯಂ ಪರೀಕ್ಷೆಗೆ ದೂಡುತ್ತದೆ. ಕ್ರೂರ ವಾಸ್ತವದ ಪರಿಚಯದ ಮೂಲಕ ನಮ್ಮ ಅರಿವನ್ನು ಪಕ್ಕಾ ಆಗಿಸಿ ಇರುವಿನ ಸ್ಥಿತಿಯನ್ನು ಹೇಳುತ್ತದೆ. ಭೂತ, ವರ್ತಮಾನವನ್ನು ನೋಡುವುದಕ್ಕೆ ಹೊಸ ಕಣ್ಣು ನೀಡುತ್ತದೆ. ಸುಲಭ ನಿರ್ಣಯ ಮತ್ತು ವಿವರಣೆಗಳಾಚೆಗೆ ಆತ್ಮವಿಶ್ವಾಸದಿಂದಲೇ ನಮ್ಮೊಳಗೇ ಇರುವ ಸಹಜ ಶಕ್ತಿಯನ್ನು ಸಮಾಜಕ್ಕೆ ಕೊಟ್ಟು ಆ ರೋಗವನ್ನು ಹಿಂದಕ್ಕೆ ಸರಿಸಬೇಕು ಎನ್ನುವ ದೃಷ್ಟಿ, ನಡವಳಿಕೆಯನ್ನು ಪ್ಲೇಗ್ ಕೊಡುತ್ತದೆ.

ಚರಿತ್ರೆಯ ಪ್ರಕಾರ ಮೂವತ್ತು ಬಾರಿ ಪ್ಲೇಗ್ ಬಂದು ಹತ್ತು ಕೋಟಿ ಜನ ಕಾಯಂ ಆಗಿ ಕಣ್ಣು ಮುಚ್ಚಿದ್ದರು. ಎರಡು ಮಹಾಯುದ್ಧ ಹಾಗೂ ಅಮೇರಿಕ ಎಂಬ ದೊಡ್ಡಣ್ಣ ಹಲವು ದೇಶಗಳಲ್ಲಿ ನಡೆಸಿದ ಸಮರಗಳು ಕೂಡ ಸಾಂಕ್ರಾಮಿಕ ರೋಗಗಳನ್ನು ಹೋಲುತ್ತವೆ. ಎಲ್ಲವನ್ನೂ ಕಳೆದುಕೊಂಡವರಿಗೆ ಕದನವಿರಾಮ, ರೋಗ ವಿರಾಮದಿಂದ ಏನು ಪ್ರಯೋಜನ ಎಂಬ ಪ್ರಶ್ನೆ ನಮ್ಮ ಮುಂದೇ ಇದ್ದೇ ಇದೆ. ಈ ಕೃತಿ ಇಂತಹ ವಿಷಮ ಕಾಲಘಟ್ಟದ ಬದುಕನ್ನು ಕಟ್ಟಿಕೊಡುತ್ತದೆ.

"ಪ್ಲೇಗ್ ಎನ್ನುವ ರೂಪಕದ ಮೂಲಕ, ನಾವೆಲ್ಲರೂ ಅನುಭವಿಸಿದ ಉಸಿರು ಕಟ್ಟಿಸುವ ಭಾವಸ್ಥಿತಿಯನ್ನು, ದಿಕ್ಕೆಟ್ಟ ವಾತಾವರಣವನ್ನು ಕಟ್ಟಿಕೊಡಬೇಕು ಎನ್ನುವುದು ನನ್ನ ಅಪೇಕ್ಷೆ.

ಈ ಬರವಣಿಗೆಯು ಯುದ್ಧ ಕಾಲದಲ್ಲಿ ಚಿಂತನೆ, ಮೌನ ಮತ್ತು ನೈತಿಕ ಯಾತನೆಗಳನ್ನು ಹಂಚಿಕೊಳ್ಳುವ ಎಲ್ಲ ಜನರ ಪಡಿಪಾಟಲುಗಳಿಗೆ ಒಡ್ಡಿದ ಪ್ರತಿಮೆಯಾಗಿದೆ"– ಎಂದು ತನ್ನ ಕೃತಿ ಕುರಿತು ಸ್ವತಃ ಕಮೂ ಹೇಳಿಕೊಂಡಿದ್ದಾನೆ.

ಎಚ್‌ಎಸ್ ರಾಘವೇಂದ್ರ ರಾವ್ "ಈ ಕಾದಂಬರಿಗೆ ಯಾವುದೇ ಮಾತುಗಳನ್ನು ಜೋಡಿಸುವ ಅಗತ್ಯವಿಲ್ಲ. ಇದು ದೇಶ, ಕಾಲ, ಭಾಷೆಗಳನ್ನು ಮೀರಿದ ಬರವಣಿಗೆ, ಕೊರೊನಾ ಬಂದಿತೆಂದು ಇದರ ಮಹತ್ವ ಹೆಚ್ಚಾಗುವುದಿಲ್ಲ. ಹೋಯಿತೆಂದು ಕಡಿಮೆಯಾಗುವುದಿಲ್ಲ," ಎಂದಿದ್ದಾರೆ.

ಕ್ಲಾಸಿಕ್ ಕೃತಿಗಳ ಓದು ಲೇಖಕರು ಮತ್ತು ವಿಮರ್ಶಕರು ಹೇಳುವ ತಿರುಳನ್ನೇ ಚಪ್ಪರಿಸಬೇಕೆಂದೇನೂ ಇಲ್ಲ. ಇದರಲ್ಲಿ ಬರುವ ಪಾತ್ರಗಳ ಜೀವನ ಕ್ರಮ ಮತ್ತು ದೃಷ್ಟಿಕೋನ ನಮ್ಮ ಸಮಕಾಲೀನ ಪಾತ್ರ, ನಡವಳಿಕೆಯನ್ನೂ ಪರೀಕ್ಷಿಸಿಕೊಳ್ಳುವುದಕ್ಕೆ ಬದಲಾಯಿಸಿಕೊಳ್ಳುವುದಕ್ಕೆ ಒತ್ತಾಸೆ ನೀಡುತ್ತದೆ. ಈ ಕೃತಿಯ ಬಹುಮುಖ ತಾತ್ವಿಕತೆಯನ್ನು ತಿಳಿಯುವ ಮುಂಚೆ ಇದರ ಕತೆಯ ಹಂದರ ಪರಿಚಯ ಮಾಡಿಕೊಳ್ಳಬೇಕು ಎಂದರೆ ಅದು ಹೀಗಿದೆ:

ಓರಾನ್ ಎಂಬ ಸಾದಾ ನಗರದಲ್ಲಿ ಪ್ಲೇಗ್ ಕಾಣಿಸಿಕೊಳ್ಳುತ್ತದೆ. ಇದು ದೇವರು ನೀಡುತ್ತಿರುವ ಕಠೋರ ಶಿಕ್ಷೆ ಎಂದು ಪಾದ್ರಿ ತೀರ್ಪು ಹೇಳುತ್ತಾನೆ, ಆದರೆ ರಿಯೊ ಎಂಬ ವೈದ್ಯ ಇದನ್ನು ಒಪ್ಪುವುದಿಲ್ಲ. ಎಲ್ಲರಿಗೂ ತಜ್ಞ ನಿರ್ದೇಶನವನ್ನೂ ನೀಡುವುದಿಲ್ಲ.ತನ್ನ ಮಾತು ಮತ್ತು ನಡಾವಳಿ ಕುಂದಿಲ್ಲದ ಮಾದರಿ ಎಂದು ಕೂಡ ಹೇಳಿಕೊಳ್ಳದೆ ಚಿಕಿತ್ಸೆಗೆ ತನ್ನನ್ನು ಒಗ್ಗಿಸಿಕೊಳ್ಳುತ್ತಾನೆ. ಸ್ಥಳೀಯ ಆಡಳಿತ ಕೂಡ ಚಿಕಿತ್ಸಾ ಕಾರ್ಯಕ್ಕೆ ಕೈ ಜೋಡಿಸುತ್ತದೆ. ೯ ತಿಂಗಳ ನಂತರ ಪ್ಲೇಗ್ ನಿಲ್ಲುತ್ತದೆ. ಹಗಲಿಕೆಯ ನೋವು ಹಗುರವಾಗುತ್ತದೆ. ಅಮುಖ್ಯವಾಗಿದ್ದ ಸಮುದಾಯದ ಬೆಚ್ಚಗಿನ ಮಮತೆಯ ಮಹತ್ವ ಗೊತ್ತಾಗುತ್ತದೆ. ನಮ್ಮ ಜೀವ ಮತ್ತು ಜೀವನವನ್ನೇ ಅಳಿಸಿ ಹಾಕುವ ಸವಾಲನ್ನು ಹೇಗೆ ಸ್ವೀಕರಿಸಬೇಕು ಎಂಬುದರ ಮೂಲಕ ಕಾದಂಬರಿ ಅಂತ್ಯವಾಗುತ್ತದೆ. ರಿಯೊ ಪಾತ್ರ ನಮ್ಮ ವೈದ್ಯ ಕಲ್ಪನೆಯನ್ನೇ ಬದಲಿಸಿ ಈಗಿರುವವರನ್ನು ನೆನೆದು ಆತಂಕ ಹುಟ್ಟಿಸುತ್ತದೆ.


ರಿಯೋ ಸೇರಿದಂತೆ ಹಲವು ಪಾತ್ರಗಳು ನಮ್ಮ ಒಡನಾಡಿಗಳಾಗಿ ಬಿಡುತ್ತವೆ. ಸಿನಿಕತೆಯನ್ನು ಓಡಿಸುತ್ತವೆ. ಎಚ್‌ಎಸ್‌ಆರ್ ಸಂಸ್ಕೃತ ಮಿಶ್ರಿತ ಕನ್ನಡವನ್ನು ಹೆಚ್ಚು ಅವಲಂಬಿಸದೆ ಜನಕನ್ನಡದಲ್ಲಿ ಸಮರ್ಥವಾಗಿ ಅನುವಾದಿಸಿದ್ದಾರೆ.

**–ಕೆ.ವೆಂಕಟೇಶ**

ಪು: **ಗೌರಿಯರು** (ಕಾದಂಬರಿ) ಲೇ: **ಅಮರೇಶ ನುಗಡೋಣಿ.ಪ್ರ: ಪಲ್ಲವ ಪ್ರಕಾಶನ,** ಚನ್ನಪಟ್ಟಣ(೯೪೮೦೩೫೫೫೦೭) ಪು: **೧೭೬ ಬೆ:** ರೂ.**೧೬೦**/–

## ಕಾಡುವ ತಣ್ಣನೆಯ ಕಥೆಗಾರಿಕೆಯಲ್ಲಿನ ಬಿರುಕುಗಳು

ಕಥೆಗಳನ್ನೇ ಕಾದಂಬರಿಗಳಂತೆ ಬರೆಯುವ ಅಮರೇಶ ನುಗಡೋಣಿಯವರು ಕಾದಂಬರಿಯಾಗಿಯೇ ಬರೆದಿರುವ ಎರಡನೆಯ ಕೃತಿ ಇದು. ಇದರ ಶೀರ್ಷಿಕೆಯೇ ಸೂಚಿಸುವಂತೆ ಇಂದು ನಮ್ಮ ಸಮಾಜದಲ್ಲಿ ಮದುವೆ ಎಂಬ ಸಂಸ್ಥೆ ಎದುರಿಸುತ್ತಿರುವ ಬಿಕ್ಕಟನ್ನು ನಿರೂಪಿಸುವ ಪ್ರಯತ್ನವಾಗಿದೆ. ಇದರ ಹಿನ್ನೆಲೆಯಲ್ಲಿರುವ ಜಾಗತೀಕರಣದ ತಲ್ಲಣಗಳನ್ನೂ ಇದು ಸಾವಯವ ವಿವರಗಳಾಗಿ ಚಿತ್ರಿಸುತ್ತಾ ಒಟ್ಟು ಕಥಾನಕ ಒಂದು ಸಂಕೀರ್ಣತೆಯನ್ನು ಪಡೆಯುತ್ತದೆ. ಇಡೀ ಕಥೆ ಹೆಣ್ಣು ಮಕ್ಕಳ ತಾಯಿಯೊಬ್ಬಳು ಮದುವೆಯಾದ–ಆದರೆ ಆ ಮದುವೆಗಳು ಆ ತಾಯಿಗೆ ಗೊತ್ತಿಲ್ಲದಂತೆ ಒಂದೊಂದು ಕಾರಣಕ್ಕಾಗಿ ಮುರಿದು ಬಿದ್ದಿರುವ– ಹೆಣ್ಣು ಮಕ್ಕಳನ್ನು ತೌರಿಗೆ ಕರೆಸಿ ನಡೆಸುವ ಗೌರಮ್ಮನ ನೋಪಿ ಪೂಜೆಯ ಎಲ್ಲ ಸಂಭ್ರಮ ಮತ್ತು ವಿವರಗಳೊಂದಿಗೆ ಮುಖಾಮುಖಿಯಾಗುತ್ತಾ




ನಿರೂಪಿತವಾಗುತ್ತಾ ಹೋಗಿ ಒಂದು ತಣ್ಣನೆಯ ವಿಷಾದ ಹುಟ್ಟುಸುತ್ತದೆ. ಆದರೆ ಇದೆಲ್ಲ ಸರಳ ರೇಖಾತ್ಮಕವಾಗಿ ನಿರೂಪಿತವಾಗಿರುವ ಈ ಕಥೆಯನ್ನು ಕಥೆಗಾರ ಹೇಳುವಂತೆ ಒಪ್ಪಿದಾಗ ಮಾತ್ರ ಆಗುವಂಥದ್ದು.

ನುಗಡೋಣಿಯವರು ಇಲ್ಲಿ ತಮ್ಮ ಬಹುತೇಕ ಕಥೆಗಳಲ್ಲಿಯಂತೆ ಹೈದರಾಬಾದ್ ಕರ್ನಾಟಕ ಮೂಲದ ಸಾಮಾನ್ಯ ಲಿಂಗಾಯತ ಕೃಷಿ ಕುಟುಂಬದ ಚಿತ್ರವೊಂದನ್ನು ಅದರ ಬೇರು ಬಿಳಲುಗಳ ದಟ್ಟ ವಿವರಗಳೊಂದಿಗೆ ಕಟ್ಟಿಕೊಡುತ್ತಾ ಅದು ೨೧ನೇ ಶತಮಾನದ ನಗರೀಕರಣದ ಬಿಸಿಗೆ ಸಿಕ್ಕಿ ಪಡುವ ಪಾಡನ್ನು ಪಳಗಿದ ಕಥೆಗಾರನ ನಿರ್ಲಿಪ್ತಿಯಲ್ಲಿ ಹೇಳುತ್ತಾ ಹೋಗುತ್ತಾರೆ. ಆದರೆ ಈ ನಿರ್ಲಿಪ್ತತೆ ಹಲವೆಡೆ ಕಥಾವಿಧಾನದೊಳಗೂ ಪ್ರವೇಶಿಸಿದಂತಾಗಿ ಕಥಾ ಧಾರೆಯಲ್ಲಿ ಹಲವು ಖಾಲಿ ಜಾಗಗಳನ್ನು ನಿರ್ಮಿಸಿ ಕಾದಂಬರಿ ಒಂದು ಉದ್ದೇಶಪೂರ್ವಕ 'ರಚನೆ'ಯಾಗಿ ಕಾಣತೊಡಗುತ್ತದೆ; ಕಥೆಯ ಪರಿಣಾಮಶೀಲತೆ ಕುಗ್ಗುತ್ತಾ ಹೋಗುತ್ತದೆ. ಎಂತಹ ತಂದೆಯಾದರೂ ತಾನು ಹುಟ್ಟಿಸಿ ಸಾಕಿದ ಹೆಣ್ಣುಮಕ್ಕಳು ಇದ್ದಕ್ಕಿದ್ದಂತೆ ಒಮ್ಮೆ ತಮ್ಮ ಡೈವೋರ್ಸ್‌ನ ಸುದ್ದಿ ಹೇಳಿದಾಗ ತಲ್ಲಣಗೊಳ್ಳುವುದಿಲ್ಲವೆ? ಎಂದು ಆಶ್ಚರ್ಯಗೊಳ್ಳುವಷ್ಟು ಇಲ್ಲಿ ಕಥೆಗಾರಿಕೆಯ ಈ ನಿರ್ಲಿಪ್ತಿ ತಣ್ಣಗೆ ಓದುಗನನ್ನು ಕೊರೆಯುತ್ತದೆ. ಇನ್ನೂ ವಿಚಿತ್ರವೆಂದರೆ ಇಲ್ಲಿ ಬರುವ, ಊರುಬಿಟ್ಟು ಓದು–ಉದ್ಯೋಗ–ದಾಂಪತ್ಯಗಳ ಕಾರಣಗಳಿಂದಾಗಿ ನಗರಗಳನ್ನು ಸೇರಿರುವ ಮೂವರು ಹೆಣ್ಣುಮಕ್ಕಳ ಮದುವೆ–ದಾಂಪತ್ಯಗಳ ಪರಿಸ್ಥಿತಿ, ಮೂಲತಃ ಹಳ್ಳಿಯ ಕೃಷಿ ಕುಟುಂಬದ ತಂದೆ ತಾಯಿ (ಮತ್ತು ಅವರ ಆಪ್ತ ಬಂಧುಗಳಿಗೆ) ಅಷ್ಟು ಕಾಳಜಿಯ–ಆತಂಕಗಳ ವಿಷಯವೇ ಆಗಿರದೆ, ಅವರನ್ನೆಲ್ಲ ಎಷ್ಟೋ ವರ್ಷಗಳ ನಂತರ ಗೌರಮ್ಮನ ನೋಪಿ ಪೂಜೆಗೆಂದು ತೌರು ಮನೆಗೆ ಕರೆಸಿದಾಗ ಅವರ ಒಡೆದ ದಾಂಪತ್ಯ ಅಥವಾ 'ಲಿವ್ ಇನ್' ಜೋಡಿತನದ ಕಥೆಗಳು ಬಿಚ್ಚಿಕೊಂಡಾಗಲೂ ಕಥಾ ವಾತಾವರಣದಲ್ಲಿ ಒಂದಿಷ್ಟೂ ಭಾವನೆಗಳ ಬಿಸಿ ಏರುವುದಿಲ್ಲ. ತಂದೆ ಇರಲಿ, ಗೌರಿಪೂಜೆಗೆ ಸಂಭ್ರಮದ ಸಿದ್ಧತೆ ನಡೆಸಿರುವ ತಾಯಿಯೂ ಈ ಸಂದರ್ಭದಲ್ಲಿ ತನ್ನ ಹೆಣ್ಣುಮಕ್ಕಳ ದಾಂಪತ್ಯದ ಸ್ಥಿತಿಗತಿಗಳ ಬಗ್ಗೆ ವಿಚಾರಿಸುವುದಿಲ್ಲ. ಒಬ್ಬ ಮಗಳು ವಿವಾಹೇತರ ಸಂಬಂಧದ ಮಗುವಿನೊಂದಿಗೆ ಬಂದಿರುವಾಗಲೂ! ಈ ಇಡೀ ಕಥೆ ಗೌರಮ್ಮನ ನೋಪಿ ಪೂಜೆಯ ಸಡಗರದ ಹಿನ್ನೆಲೆಯಲ್ಲಿ ಬಿಚ್ಚಿಕೊಳ್ಳುತ್ತಾ ಊರ ಗರತಿ ಗೌರಮ್ಮಗಳ ಸಮುಖದಲ್ಲಿ ನಡೆಯುವ ನೋಪಿಪೂಜೆಯ ಆಚರಣೆಯ ವಿವರಗಳ ಹಿನ್ನೆಲೆಯಲ್ಲಷ್ಟೇ ಈ ಹೆಣ್ಣುಮಕ್ಕಳೊಳಗಿನ ಒಂಟಿತನದ ನಿರ್ವಾತ ಓದುಗರಲ್ಲಿ ಒಂದು ಎಳೆಯಷ್ಟು ವಿಷಾದವನ್ನು ಹುಟ್ಟಿಸುತ್ತದೆ.


ಇಲ್ಲಿ ಲೇಖಕರು ಸಾಕಷ್ಟು ಪರಿಣಾಮಕಾರಿಯಾಗಿಯೇ ಚಿತ್ರಿಸಿರುವ ಈ ಮೂವರು ಹೆಣ್ಣುಮಕ್ಕಳು ಎದುರಿಸುವ' 'ದಾಂಪತ್ಯ'ದ 'ಸಮಸ್ಯೆ'ಗಳ ಸ್ವರೂಪವನ್ನು ಮಂಡಿಸುವುದೇ ಲೇಖಕರ ಕೇಂದ್ರ ಕಾಳಜಿಯಾಗಿರುವಂತಿದ್ದು, ಇದನ್ನು ಸಾವಯವವಾಗಿ ಒಳಗೊಳ್ಳಲಾಗದ ಕಥನವೊಂದರ ಭಾಗವನ್ನಾಗಿ ಮಾಡಹೊರಟಿರುವುದೇ ಒಟ್ಟು ಕಥೆಯಲ್ಲಿ ಕಾಣುವ ಅಸಹಜ ಬಿರುಕಿಗೆ ಕಾರಣವಾದಂತಿದೆ. ಈ ಬಿರುಕು ಈ ಮುವ್ವರು ಹೆಣ್ಣು ಮಕ್ಕಳಲ್ಲಿ ಇಬ್ಬರು ಸಣ್ಣ ವಯಸ್ಸಿಗೇ 'ಗುಣಮಟ್ಟ'ದ ಶಿಕ್ಷಣದ ಹೆಸರಿನಲ್ಲಿ ತಂದೆ ತಾಯಿಗಳಿಂದ ದೂರವಾಗಿ ನಗರ ಸೇರುವ, ಕಾದಂಬರಿಯ ಕಥನದ ಲಯಕ್ಕೆ ಹೊಂದದ ಬೆಳವಣಿಗೆಯಿಂದಲೇ ಆರಂಭವಾಗುತ್ತದೆನಿಸುತ್ತದೆ. ಕಥನದಲ್ಲಿ ಜಾಗತೀಕರಣದ ಆಯಾಮ ಇಲ್ಲಿಂದಲೇ ಆರಂಭವಾಗುತ್ತದೆ ಎನ್ನಬಹುದು. ಹಾಗಾಗಿಯೇ ಈ ಇಬ್ಬರ ದಾಂಪತ್ಯ ಸಮಸ್ಯೆ ಮೊದಲಿನವಳ ದಾಂಪತ್ಯ ಸಮಸ್ಯೆಯಂತೆ ಸಹಜ ಎನ್ನಿಸುವುದಿಲ್ಲ, ಇದು ಕಾದಂಬರಿ ರೂಪವು ಬೇಡುವ ಪಾತ್ರ ಪೋಷಣೆಯ ಸಮಸ್ಯೆ ಎನಿಸುತ್ತದೆ.

ಆದರೆ ನುಗಡೋಣಿ ಪೂರ್ಣ ಹಳ್ಳಿಯ ಕಥೆ ಹೇಳುವಾಗ, ತಮ್ಮ ಕಥಾ ಪ್ರತಿಭೆ ಮುಕ್ಕಾಗದಂತೆ ಬರೆಯುತ್ತಾರೆ, ಮುಖ್ಯವಾಗಿ ಮೂಲಮನೆ ಪಾಲಾಗಿ; ಅಣ್ಣ, ಪಾಲಾದ ತಮ್ಮನ ಪ್ರೀತಿ–ಸಹಕಾರಗಳಿಂದಲೇ ತೋಟವನ್ನು ಬೆಳೆಸುವ ಕಥೆ, ಅದರೊಂದಿಗೆ ಜೋಡಿಸಿಕೊಂಡ ತಮ್ಮನ ಕುಟುಂಬದ ಕಥೆ ಸೇರಿ ಕಾದಂಬರಿಯಲ್ಲಿ ಒಂದು ವಿಶಾಲ ಸಾವಯವ ಕೌಟುಂಬಿಕ ಕಟ್ಟಡ ನಿರ್ಮಾಣವಾಗಿದೆ. ಇದಕ್ಕೆ ಆಸರೆಯಾಗಿರುವುದು ನುಗಡೋಣಿಯವರ ಬಹುತೇಕ ಕತೆಗಳಲ್ಲಿ ಕಂಡುಬಂದು, ಕಥೆಗೊಂದು ತಂಪು ನೆರಳಿನ ಗುಣ ನೀಡುವ ಮಠ ಮತ್ತು ಅದರ ಸ್ವಾಮೀಜಿ. ಆದರೆ ಇವರ ಕಥೆಗಳಾಚೆ ಈ ಮಠ ಮತ್ತು ಈ ಸ್ವಾಮಿಗಳು ಎಷ್ಟು ನಿಜವೆನ್ನಿಸುತ್ತವೋ ತಿಳಿಯದು. ಅದೇನೇ ಇರಲಿ, ಇಲ್ಲಿನ ತೋಟ ಸೊಗಸಾಗಿ ಬೆಳೆದಂತೆ ಅದು ಜಾಗತೀಕರಣದ ಹೊಸ ಬಂಡವಾಳಶಾಹಿಗಳ ಹದ್ದಿನ ದೃಷ್ಟಿಗೆ ಬಿದ್ದಾಗ ಅದರ ರಕ್ಷಣೆಗೆ ಒದಗುವವರು ಈ ಸ್ವಾಮೀಜಿಯೇ. ಅಂದರೆ ಈ ಮೂಲಕ ನುಗಡೋಣಿಯವರು ಜಾಗತೀಕರಣಕ್ಕೆ ಉತ್ತರ ಮಠ ಎಂದು ಹೇಳುತ್ತಿದ್ದಾರೆಯೇ ಎಂದು ಆಶ್ಚರ್ಯವಾಗುತ್ತದೆ; ಇಂದು ಮಠಗಳೇ ಸಾರಾಸಗಟಾಗಿ ಜಾಗತೀಕರಣಗೊಂಡು ಪಟ್ಟಭದ್ರ ಹಿತಾಸಕ್ತಿಗಳಾಗಿ ರಾಜ್ಯದ ರಾಜಕಾರಣವನ್ನು ನಿಯಂತ್ರಿಸುವಂತಾಗಿರುವಾಗ?

**–ಡಿ.ಎಸ್. ನಾಗಭೂಷಣ**

ಪು: ವಿಚಿತ್ರಸೇನನ ವೈಖರಿ (ಕವಿತೆಗಳು) ಲೇ: **ಜಯಂತ ಕಾಯ್ಕಿಣಿ** ಪ್ರ: **ಅಂಕಿತ ಪುಸ್ತಕ**, ಬೆಂಗಳೂರು (೦೮೦–೨೬೬೧೭೭೦೦)ಪು: ೧೩೬ ಬೆ: ರೂ.೧೩೦/–

## ಕಣ್ಣಿನ ಭಾಷೆಯ ಕವಿತೆಗಳು



**‘ಪೇ**ಟೆ ಮೆಲ್ಲಗೆ ದಿನಪತ್ರಿಕೆ ತೆರೆಯುವಾಗ, ಮಡಿಸಿಟ್ಟ ಉಡುಪಿನಂತೆ/ಮುದುಡಿ ಗ್ರಾಮಚಾವಡಿಯಲ್ಲಿ ಮಲಗುತ್ತಿದ್ದ’ (ವಿಚಿತ್ರಸೇನನ ವೈಖರಿ); ‘ಕಿವಿ ಮಡಿಸಿಟ್ಟ ಪುಟದ ನೋವಿಗೆ ಯಾರು ಜವಾಬ್ದಾರರು’ (ಬಾಕಿ ಪುಟ)– ಈ ಸಂಕಲನದ ಇಂತಹ ಹಲವಾರು ಚಂದದ ಸಾಲುಗಳನ್ನು ಹೆಕ್ಕಿ ಹೇಳಬಹುದು. ಜಯಂತರ ಕಾವ್ಯಪ್ರಪಂಚದೊಳಗೆ ಬದುಕುವುದೆಂದರೆ ಅದು ಆ ಕ್ಷಣದಲ್ಲಿ ಬದುಕುವ ಲೋಕದ ಚಿತ್ರಣ. ಇವನ್ನು ಓದಿದಾಗ, ‘ಬದುಕು ಎಷ್ಟು ಚೆನ್ನಾಗಿದೆ! ನಮಗೆ ಕಾಣದೆ, ತೋರದೆ ಇರೋದು ಇವರಿಗೇನೋ ಕಂಡುಬಿಟ್ಟಿದೆಯಲ್ಲ!’ ಅನ್ನಿಸುತ್ತದೆ. ಕವಿತೆಯು ಇದಕ್ಕಿಂತ ಹೆಚ್ಚಿಗೆ ಇನ್ನೇನು ಮಾಡಲು ಸಾಧ್ಯ?

ಇಪ್ಪತ್ತರ ಹದಿಹರೆಯದಲ್ಲಿ ‘ರಂಗದಿಂದೊಂದಿಷ್ಟು ದೂರ’ ಸಂಕಲನದೊಂದಿಗೆ ಮೊದಲಾದ ಜಯಂತ ಕಾಯ್ಕಿಣಿಯವರ ಕಾವ್ಯಯಾನದಲ್ಲಿ ‘ವಿಚಿತ್ರಸೇನನ ವೈಖರಿ’ ಸಂಕಲನವು ಏಳನೆಯ ಹೆಜ್ಜೆ. ಇದರಲ್ಲಿ 55 ಕವಿತೆಗಳಿವೆ. ಸುಮಾರು ಐವತ್ತು ವರ್ಷಗಳ ಕಾಲ ಕಥೆಯ ಗುಣವುಳ್ಳ ಕವಿತೆಗಳನ್ನು, ಕವಿತೆಯ ಸ್ಪರ್ಶವಿರುವ ಕಥೆಗಳನ್ನು, ಇವೆರಡೂ ಅಲ್ಲದ ಸಿನಿಮಾ ಹಾಡುಗಳನ್ನು ಬರೆಯುತ್ತ ಬಂದಿರುವ ಜಯಂತರ ಬರವಣಿಗೆಯ ಗಂಭೀರ ವಿಶ್ಲೇಷಣೆ ನಡೆಯದಿರುವುದು ಕನ್ನಡ ವಿಮರ್ಶೆಯ ಲೋಪ.

ಕುವೆಂಪು ಅವರ ಮಲೆನಾಡು, ಕಂಬಾರರ ಶಿವಾಪುರ, ಮಹದೇವರ ದ್ಯಾವನೂರಿನ ಹಾಗೆ ಜಯಂತರ ಕತೆಗಳಲ್ಲಿ ಹರೆಯ ಕಾಲದ ಮುಂಬೈ ಮತ್ತು ಕವಿತೆಗಳಲ್ಲಿ ಗೋಕರ್ಣ ಇದೆ. ಸ್ಥಳೀಯತೆ, ಪ್ರಾದೇಶಿಕತೆ ಮತ್ತು ಇವೆರಡರಿಂದ ಮೂಡುವ ಭಾಷಿಕ ನೆಲೆಗಳು ಮೇಳಗೊಂಡಿರುವ ಕವಿತೆಗಳಿವು. ಜಯಂತರ ಕವಿತೆಗಳು ಸೃಷ್ಟಿಸುವ ಚಿತ್ರಲೋಕ, ತಿಳಿವಳಿಕೆ ಮತ್ತು ಭಾವನೆಗಳನ್ನು ಬೇರೆಯ ಮಾತುಗಳಲ್ಲಿ ಹೇಳಲು ಸಾಧ್ಯವಿಲ್ಲ ಎನ್ನುವ ಅನುಭವ ಉಂಟಾಗುವುದೇ ಇವುಗಳ ಶಕ್ತಿಯಾಗಿದೆ.

‘ವಿಚಿತ್ರಸೇನನ ವೈಖರಿ’ ಎಂಬ ಶೀರ್ಷಿಕೆಯಡಿಯ ಐದು ಕವಿತೆಗಳು ವಿಚಿತ್ರಸೇನನೆಂಬ ಪ್ರೊಟಾಗನಿಸ್ಟ್‌ನನ್ನು ಹಲವು ಸನ್ನಿವೇಶಗಳಲ್ಲಿ ಗಮನಿಸುತ್ತವೆ, ಅವನೊಂದಿಗೆ ಸಂವಾದ ನಡೆಸುತ್ತವೆ. ವಿಚಿತ್ರಸೇನನು ಕವಿಗೆ ಹಿಡಿದ ಕನ್ನಡಿಯೂ ಹೌದು, ಅವನ ಮೂಲಕ ಕವಿಯು ಲೋಕಕ್ಕೆ ಹಿಡಿದ ಕನ್ನಡಿಯೂ ಹೌದು. ನಮ್ಮ ಕಾಲದ ‘ವ್ಯಾವಹಾರಿಕ’ತೆಯನ್ನು ಮೀರಿದ ಇವನು, ನಾವು ಕಳೆದುಕೊಂಡ ಮುಗ್ಧಲೋಕವನ್ನು ಕಣ್ಣಮುಂದೆ ನಿಲ್ಲಿಸುತ್ತಾನೆ. ಇವನ ಮೂಲಕ ಕವಿಯು, ನಮ್ಮ ಬರಿಕಣ್ಣಿಗೆ ಕಾಣದಿರುವ ಇಲ್ಲೇ, ಈಗಲೇ ಇರುವ ಚೆಲುವು ಮತ್ತು ಒಳ್ಳೆಯತನಗಳನ್ನು ಕಾಣಿಸುತ್ತಾರೆ. ಇದು ಲೋಕವಿವರಗಳನ್ನು ಒಳಗೊಳ್ಳುವ ವಿಶಿಷ್ಟ ಸಂವೇದನೆಯಿಂದ ಮಾತ್ರ ಸಾಧ್ಯವಾಗುವಂತಹ ಕಾವ್ಯಬಗೆ.

ಕಥೆಗಳಾಗಲು ಕಿರಿದಾದ ಅನುಭವಗಳು ಜಯಂತರ ಕವಿತೆಯಾಗುತ್ತವೆಯ? ಅನ್ನುವ ಪ್ರಶ್ನೆ ನನಗೆ ಯಾವತ್ತಿನಿಂದ ಇದೆ. ಪ್ರತಿಯೊಂದು ಕವಿತೆಯೂ ಪುಟ್ಟದೊಂದು ಕಥಾಲೋಕವನ್ನು ಸೃಷ್ಟಿಸುತ್ತ, ಇವರ ಕತೆಯ ನೆಯ್ಗೆಗೂ, ಕವಿತೆಯ ನೆಯ್ಗೆಗೂ ಹೆಚ್ಚು ವ್ಯತ್ಯಾಸವಿಲ್ಲವೋ ಏನೋ ಅನ್ನಿಸುವಂತೆ ಮಾಡುತ್ತದೆ. ಜಯಂತರು ಲೋಕವನ್ನು ಗ್ರಹಿಸುವ ವಿಧಾನದಲ್ಲೇ ‘ಇದು ಕವಿತೆ’, ‘ಇದು ಕತೆ’ ಎಂದು ವಿಂಗಡಿಸಲು ಸಾಧ್ಯವಿಲ್ಲ. ಚಿತ್ರದ ವಿವರಗಳ ಮೂಲಕ ಪ್ರಪಂಚವನ್ನು ಕಾಣುವ ಈ ನಡೆಯು ‘ಇದು ಜಯಂತರು ಮಾತ್ರ ಕಾಣಬಹುದಾದ ಮತ್ತು ಕಟ್ಟಬಹುದಾದ’ದ್ದು ಅನ್ನಿಸುತ್ತದೆ. ಜಯಂತರದ್ದು ಕಣ್ಣಿನ ಮೂಲಕ ಲೋಕ ಗ್ರಹಿಸುವ ಭಾಷೆ. ಈ ‘ದೃಶ್ಯ’ಭಾಷೆಗೆ ಬಹುಪಾಲು ‘ಶ್ರವಣ’ದ ಸಾರ್ಥಕತೆಯೂ ಕವನಗಳಲ್ಲಿ ಬೆರೆತಿದೆ.

ಸಮುದಾಯಗಳಿಗಿಂತ ವ್ಯಕ್ತಿಗಳು/ಕುಟುಂಬಗಳು ಮುಖ್ಯವಾಗುತ್ತಿರುವ ಇವತ್ತಿನ ಸಂದರ್ಭದಲ್ಲಿ ಜಯಂತರ ಹಲವಾರು ಕವಿತೆಗಳಲ್ಲಿ ಇಡೀ ಊರು ಮಾತಾಡಿದಂತೆನಿಸುತ್ತದೆ. ದೇವರನ್ನು ಮನುಷ್ಯನಂತೆ ಕಾಣುವ, ಹಾಡುಗಾರ್ತಿಯ ಹಾಡಿನ ಪುಸ್ತಕದ ಅಕ್ಷರಗಳು ಜೀವತುಂಬಿ ಚಲಿಸುವಂತಹ ಅನುಭವ ನೀಡುವ ಕವಿತೆಗಳು ಜಡ–ಚೇತನಗಳ ಗಡಿಗೆರೆಗಳನ್ನು ಅಳಿಸಿ ಎಲ್ಲದರಲ್ಲೂ ಜೀವಚೈತನ್ಯದ ಆವಾಹನೆ ಮಾಡುವ ಹಾದಿಯವು.

ವಿಚಾರಗಳ ಹೊರೆಯಿಲ್ಲದೆ, ಲೋಕದ ಉಳಿವಿನ ದಾರಿಯಾದ ಪ್ರೀತಿಸಾಧ್ಯತೆಗಳತ್ತ ಬೆರಳು ತೋರಿಸುವ ಈ ಕವಿತೆಗಳು ಹಲವು ಓದುಗಳನ್ನು ಬಯಸುತ್ತವೆ, ಪ್ರತಿ ಓದು ಕೂಡ ಹೊಸ ಅನುಭವವಾಗಿ ನಮ್ಮನ್ನು ಅರಳಿಸುತ್ತದೆ.

**– –ಜ.ನಾ. ತೇಜಶ್ರೀ**

ಪು: ಸ್ತ್ರೀ (ಅಂಕಣ ಬರಹ) ಲೇ:**ನಾಗರೇಖಾ ಗಾಂವಕರ** ಪ್ರ: **ಸಾಧನ ಪಬ್ಲಿಕೇಶನ್**, ಬೆಂಗಳೂರು (೮೨೭೭೬೩೪೨೯೩) ಪು: ೧೮೦ ಬೆ:ರೂ.೧೫೦/–

## ಸ್ತ್ರೀ ಸಮಾನತೆಯ ಹಾದಿಯಮುಳ್ಳು–ತೊಡರುಗಳು



**ವಿ**ವಿಧ ಪತ್ರಿಕೆಗಳಲ್ಲಿ ಪ್ರಕಟಗೊಂಡ ಅಂಕಣ ಬರಹಗಳ ಸಂಗ್ರಹದ ಪುಸ್ತಕ ಸ್ತ್ರೀ–ಸಮಾನತೆಯ ಸಂಧಿಕಾಲದಲ್ಲಿ. ನಾಗರೇಖಾ ಗಾಂವಕರ ಅವರು ಈ ಪುಸ್ತಕದಲ್ಲಿ ಸ್ತ್ರೀ–ಪುರುಷ ಅಸಮಾನತೆಗಳ ಬಿಡಿಚಿತ್ರಗಳ ಬಿಂಬಗಳನ್ನು ಹೆಕ್ಕಿತೆಗೆದು ತೋರಿಸಿದ್ದಾರೆ. ಹೆಣ್ಣು–ಗಂಡುಗಳ ಸಹಜೀವನದ ಹೊಂದಾಣಿಕೆಗೆ ಬೇಕಾದ ಸಲಹೆ–ಸೂಚನೆಗಳನ್ನು ಕೊಟ್ಟಿದ್ದಾರೆ.

ಮಹಿಳೆಯಾಗಲಿ, ಪುರುಷನಾಗಲಿ ಅವನ/ಳ ನಡವಳಿಕೆಗಳು ಸಾಮಾಜಿಕ ಸಂರಚನೆಗಳ (ಸೋಷಿಯಲ್ ಕನ್‌ಸ್ಟ್ರಕ್ಟ್) ಅನ್ವಯ ರೂಪುಗೊಳ್ಳುತ್ತವೆ. ದೈಹಿಕಭಿನ್ನತೆಯನ್ನು ಹೊರತುಪಡಿಸಿ, ಬೇರೆ–ಬೇರೆ ಸಾಮಾಜಿಕ ಸಂರಚನೆಗಳಾಗಿ ರೂಪುಗೊಂಡ ವಿವಿಧ ಪಾತ್ರಗಳ ನಿಭಾವಣೆಯನ್ನು ಸ್ತ್ರೀ–ಪುರುಷರಿಬ್ಬರೂ ಮಾಡಬೇಕಾಗುತ್ತದೆ. ಮಹಿಳೆಯಿಂದ ನಿರೀಕ್ಷಿಸಲಾಗುವ ವಿವಿಧ ಪಾತ್ರಗಳಾದ ಕರುಣಾಮಯಿ ತಾಯಿ, ಹೊಂದಿಕೊಂಡು ಬಾಳುವ ಹೆಂಡತಿ, ಕುಟುಂಬದ ಸದಸ್ಯರ ಕಾಳಜಿ ವಹಿಸುವ ಪರಿಚಾರಕಿ, ಪತಿಯ ಆಜ್ಞೆಯನ್ನು ಪರಿಪಾಲಿಸುವ, ಕೆಟ್ಟ ನಡವಳಿಕೆಗಳನ್ನು ಪ್ರಶ್ನಿಸದ ವಿನಮ್ರ ಸೇವಕಿ, ಹೀಗೆ ಹಲವು ಪಾತ್ರಗಳ ಜೊತೆಗೆ ಆರ್ಥಿಕವಾಗಿ ಊರುಗೋಲು ಆಗಬೇಕಾಗಿರುವುದೂ ಸೇರಿಕೊಂಡಿದೆ. ‘One is not born, but rather becomes a woman’. ಲಿಂಗತ್ವ (gender) ಎಂಬುದು ಪುರುಷಪ್ರಧಾನ ವ್ಯವಸ್ಥೆಯ ಸಾಮಾಜಿಕ ಸಂರಚನೆ. ಸಮಾನತೆಯನ್ನು ಸಾಧಿಸುವ ಗುರಿಯನ್ನಾಗಿಸಿಕೊಂಡು, ಸಾಮಾಜಿಕ ಕಟ್ಟಳೆಗಳು/ರಚನೆಗಳನ್ನು ಬದಲಾಯಿಸಲು ಅಥವಾ ಗ್ರಹಿಕೆಗಳನ್ನು ಪರಿವರ್ತಿಸಲು ಸಾಕಷ್ಟು ಹೋರಾಟ, ಜಾಗೃತಿ ಮೂಡಿಸಲು ಅವಿರತ ಪ್ರಯತ್ನ ನಡೆಯುತ್ತಲೇ ಇರಬೇಕಾಗುತ್ತದೆ.

ಮಹಿಳೆಯು ಈ ಮಟ್ಟಕ್ಕೆ ಬಂದು ಸೇರಿದ ದಾರಿ ಹಲವು ಹೋರಾಟಗಳ ಮತ್ತು ಸಮಾಜಸುಧಾರಕರ ಪ್ರಯತ್ನದ ಫಲವಾಗಿದೆ. ಮಹಿಳೆಯ ಸ್ಥಾನಮಾನ ಮತ್ತು ಆಕೆಯ ಸಾಮರ್ಥ್ಯದ ವಿವರಣೆ ನೀಡುತ್ತಾ, ಲೇಖಕಿಯು ಕಾರ್ಲ್‌ಮಾರ್ಕ್ಸ್‌ನನ್ನು ಉದ್ಧರಿಸಿ ಮಹಿಳೆಯನ್ನು ಸಾಮಾಜಿಕ ಚಟುವಟಿಕೆಗಳಿಂದ ವಂಚಿತರನ್ನಾಗಿಸಿ, ಅಡುಗೆಮನೆಯ ಸರ್ವಾಧಿಕಾರದ ಪಟ್ಟಕಟ್ಟುವುದರಿಂದ ಸಮಾನ ಸ್ಥಾನಮಾನ ದುಸ್ಸಾಧ್ಯ ಎನ್ನುತ್ತಾರೆ. ಬಳೆಯ ರೂಪಕವನ್ನು ಬಳಸಿ, ಬಳೆ ಹೆಣ್ಣಿಗೆ ಆಭರಣವಾದರೆ, ಗಂಡಿಗೆ ಕಡಗವಾಗಿ ಧೈರ್ಯ–ಶೌರ್ಯದ ಸಂಕೇತವಾಗುತ್ತದೆ, ವಿಪರ್ಯಾಸವೆಂದರೆ, ಪುರುಷ ‘ನಾನೇನು ಕೈಗೆ ಬಳೆ ತೊಟ್ಕೊಂಡಿಲ್ಲ’ ಎಂದು ಮಹಿಳೆಯ ಸಾಮರ್ಥ್ಯದ ಬಗ್ಗೆ ಅಣಕಿಸುತ್ತಾನೆ. ಲೇಖಕಿಯು ದೃಷ್ಟಾಂತಗಳ ಮೂಲಕ ಎಲ್ಲಾ ಸ್ತರಗಳ ಮಹಿಳೆಯರು ಒಳಗಾಗುವ ತಾರತಮ್ಯದ ವಿಧಾನಗಳಲ್ಲಿ ಏಕರೂಪತೆಯನ್ನು ಕಾಣಿಸುತ್ತಾರೆ. ವಿಧವೆಯರಿಗೆ ಸರಕಾರದ ಹಲವು ಬಗೆಯ ಸಹಾಯ ಲಭ್ಯವಿರುವ ಈ ಕಾಲದಲ್ಲಿಯೂ, ರಿವಾಜಿನಂತೆ ಆಕೆಯ ಹರಾಜು ಅವಳ ಅರಿವಿಗೆ ಬಾರದೇ ನಡೆಯುವುದು ನಿಜಕ್ಕೂ ಮಹಿಳೆಯ ಕುರಿತಾದ ಪುರುಷಮನಸ್ಥಿತಿಯ ದ್ಯೋತಕವಾಗಿದೆ. ಆ ವೈರುದ್ಧ್ಯದ ಪರಿಸ್ಥಿತಿಯಲ್ಲಿ, ಆಕೆ ಧೈರ್ಯ ತೋರಿ ಪ್ರತಿರೋಧ ಒಡ್ಡಿರುವುದು, ಒಂದು ಬೆಳ್ಳಿರೇಖೆಯಾದರೂ, ಸಿಗ್ಮಂಡ್ ಫ್ರಾಯ್ಡ್‌ನಿಂದ ಹಿಡಿದು, ನಮ್ಮ ನುಡಿಗಟ್ಟುಗಳಲ್ಲಿ ಮಿಳಿತವಾಗಿರುವ ಮಹಿಳೆಯ ಕುರಿತ ಧೋರಣೆಗಳನ್ನು ಬದಲು ಮಾಡುವ ದಾರಿಯಲ್ಲಿ ಬಹುದೂರ ಸಾಗಬೇಕಿದೆ ಎಂಬುದನ್ನು ಸೂಚಿಸುತ್ತದೆ. ಲೇಖಕಿಯು ಸಾಹಿತ್ಯ, ಪುರಾಣ ಮತ್ತು ದೃಷ್ಟಾಂತಗಳ ಮೂಲಕ, ಸ್ತ್ರೀ ಸಮುದಾಯದ ನೋವು, ಸಂಕಷ್ಟ, ಅವಮಾನ, ಅನಿವಾರ್ಯತೆ ಮತ್ತು ಸಾಮರ್ಥ್ಯಗಳನ್ನು ಎಳೆ–ಎಳೆಯಾಗಿ ತೆರೆದಿಟ್ಟಿದ್ದಾರೆ. ಮುನ್ನುಡಿಯಲ್ಲಿ ‘ಶಾಂತವಾದ ಕೊಳವನ್ನು ಕದಡಿ ಬಗ್ಗಡವಾಗಿಸಲಿ’ ಎಂದು ಆಶಿಸಿದಂತೆ ಕ್ರಾಂತಿಕಾರಕ ಬರಹಗಳಿಲ್ಲ. ಸನ್ನಿವೇಶಕ್ಕೆ ಅನುಗುಣವಾಗಿ, ಅಲ್ಪಸ್ವಲ್ಪ ವ್ಯತ್ಯಾಸಗಳಾದರೆ ಸಾಕು ಎಂಬ ಅಭಿಪ್ರಾಯವೇ ಪ್ರಧಾನವಾಗಿದೆ. ಆದರೆ ಇಂತಹುದೊಂದು ಸ್ತ್ರೀ–ಸಂವೇದೀ ಲೇಖನ ಸಂಗ್ರಹ ಸ್ತ್ರೀ–ಸಮಾನತೆಯತ್ತ ಸಾಗಲು ಉತ್ತೇಜನಕಾರಿ ಬೆಳವಣಿಗೆ.

ಡಾ. ಎಚ್.ಎಲ್. ಪುಷ್ಪಾ ಅವರು ಮುನ್ನುಡಿಯಲ್ಲಿ ತಿಳಿಸಿರುವಂತೆ, ಈ ಅಂಕಣಬರಹಗಳ ಮಿತಿಯೆಂದರೆ, ಹಲವಾರು ವಿಷಯಗಳು ಚರ್ವಿತಚರ್ವಣವಾಗಿರುವುದು, ಒಂದು ವಿಷಯದ ಆಳಕ್ಕೆ ಹೋಗದೇ, ಒಂದೇ ವಿಷಯವನ್ನು ವಿಧವಿಧ ಬಣ್ಣದ ಬಟ್ಟೆತೊಡಿಸಿ ಪ್ರಸ್ತುತಪಡಿಸಿರುವುದು, ಹಾಗಾಗಿಯೇ ಹೊಸತೇನನ್ನೂ ಓದಿದ ಅನುಭವವಾಗಲಾರದು. ಅಲ್ಲದೇ ಕಾಗುಣಿತದ ತಪ್ಪುಗಳಿರುವುದು, ಹೈವೇಯಲ್ಲಿ ಸಲೀಸಾಗಿ ಸಾಗುತ್ತಿರುವಾಗ, ಅತಿಯಾದ ಹಂಪ್‌ಗಳು ಎತ್ತಿಹಾಕಿದಂತಹ ಅನುಭವವಾಗುತ್ತದೆ.

**–ಶ್ರೀದೇವಿ ಕೆ.**

**‘ಹೊಸಮನುಷ್ಯ’ದ ಓದುಗರೆಲ್ಲರಿಗೂ**
**ಗೌರಿ ಹಬ್ಬದ ಹಾರ್ದಿಕ ಶುಭಾಶಯಗಳು**



**ಸಿ.ಆರ್. ಕಿರಣ್ ಕುಮಾರ್**
**ಮತ್ತು ಕುಟುಂಬ**
**ಮೈಸೂರು**

‘ಹೊಸ ಮನುಷ್ಯ’ದ ಓದುಗರೆಲ್ಲರಿಗೂ
ಗಣೇಶನ ಹಬ್ಬದ ಹಾರ್ದಿಕ ಶುಭಾಶಯಗಳು



**ವಿ.ಅರ್. ರಮೇಶ್ ಬಾಬು**
ಮತ್ತು ಕುಟುಂಬ
**ಕೊಳ್ಳೇಗಾಲ**

‘ಹೊಸಮನುಷ್ಯ’ದ ಎಲ್ಲಾ ಓದುಗರಿಗೂ
ಗೌರಿ–ಗಣೇಶ ಹಬ್ಬದ ಶುಭಾಶಯಗಳು



**ಶ್ರೀ ಶಾರದಾದೇವಿ ಪದವಿಪೂರ್ವ ಕಾಲೇಜು**

**ಗೊಟ್ಟಿಗೆರೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು–೮೩**

ತಿಂಗಳ ಕೊನೆಯ ಸಾಲುಗಳು




ನಿಂದಡೆ ಹೊನ್ನು ಹೆಣ್ಣು ಮಣ್ಣು ಹಿಡಿದು
ನೆಟ್ಟನೆ ಭಕ್ತನಾಗಿ ನಿಲ್ಲಬೇಕು
ಸುಳಿದಡೆ ಹೊನ್ನು ಹೆಣ್ಣು ಮಣ್ಣು ಬಿಟ್ಟು
ನೆಟ್ಟನೆ ಜಂಗಮವಾಗಿ ಸುಳಿಯಬೇಕು
ನಿಂದು ಭಕ್ತನಲ್ಲದ ಸುಳಿದು ಜಂಗಮವಲ್ಲದ
ಉಭಯಭ್ರಷ್ಟರನೇನೆಂಬೆ ಗುಹೇಶ್ವರ ?

–ಅಲ್ಲಮಪ್ರಭು

*ಶುಭಾಶಯಗಳೊಂದಿಗೆ,*

**ಆರ್. ಉಮೇಶ್ ಅಂಡ್ ಅಸೋಸಿಯೇಟ್ಸ್**

**ಲೆಕ್ಕ ಪರಿಶೋಧಕರು, ಮೈಸೂರು**

ಮೊಬೈಲ್ : ೯೪೪೮೦೮೪೭೮೩

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

**Regd. News Paper RNI No. KARKAN/2012/47568**
**Rgd No. KA/SK/SMG-1209/2019-21**

ಇವರಿಗೆ \ To

If undelivered, please return to D.S. Nagabhushana, Editor, 'Hosa Manushya', 'HIG-5, 'Nudi', Kallahalli Extension, Vinoba Nagara, Shivamogga -577204( Karnataka)